Bennett & Coleman
THE TIMES OF INDIA

ಭಾನುವಾರ,14 ಜೂನ್ 2026 | ಪುಟಗಳು: 11+4 | ಬೆಲೆ: ₹ 5.00 (ವಿಕ ಮನಿ ಜತೆ ₹10.00)

VK

ಬೆಂಗಳೂರು | ಮೈಸೂರು | ಶಿವಮೊಗ್ಗ | ಹುಬ್ಬಳ್ಳಿ | ಬಾಗಲಕೋಟೆ | ಕಲಬುರಗಿ | ಚಿತ್ರದುರ್ಗ | ಗಂಗಾವತಿ | ಹಾಸನ | ಬೆಳಗಾವಿ

www.vijaykarnataka.com c PRIDE OF YOUNG KARNATAKA

ಸಂಪುಟ: 27 | ಸಂಚಿಕೆ: 164

Welspun

ಒಂದು ಬಾರಿ ಅಳವಡಿಸಿದರೆ
ತಲೆಮಾರುಗಳ ತನಕ ಚಿಂತೆ ಇಲ್ಲಾ.

Sintex Eterno™ **50 YEAR WARRANTY^**

ಲಾಂಚ್ ಆಫರ್**
Rs.15000/-**
per 1000 LTR tank

**Valid till 30th June 2026 or till stocks last. Valid for Karnataka state only. Additional freight charges may apply
**The quoted pricing is subject to change, modification, or withdrawal without prior notice

Sintex Eterno is a trademark of Sintex BAPL Ltd. Welspun is a registered trademark of Welspun Multiventures LLP

^Terms & Conditions apply. Refer warranty card at www.sintexonline.com/warranty *Tested under lab conditions. Refer to www.sintexonline.com/disclaimer

Virus Protection*
Germbloc™ Technology

Algae* Virus*
Fungus* Bacteria*

Heavy duty
Durable
Design

QR ಕೋಡ್ ಸ್ಕ್ಯಾನ್ ಮಾಡಿ,
ಮುಂದಿನ ತಲೆಮಾರಿನ
ಟ್ಯಾಂಕ್ ಆಕ್ಷನ್ ನಲ್ಲಿ ಹೇಗಿದೆ ನೋಡಿ.

ಬೆಂಗಳೂರಿನಲ್ಲಿ ಅಧಿಕೃತ ಡೀಲರ್‌ಗಳ ಬಳಿ ಲಭ್ಯ

ಡೀಲರ್‌ಶಿಪ್ ಸಂಪರ್ಕಕ್ಕಾಗಿ - 8249505607

Maa hardware and sanitary, Rajgopalan nagar - 9164736666 • Krishna tiles and sanitaryware, Basaweshwara nagar - 7829438912 • Krishna paints & sanitarywares, Basaweshwara nagar - 7338134034 • Sri vishnu sanitary center, Kr market - 9844006703 • Nagnechi hardware, Anekal - 8951810672 • Varsha paints and hardware, Katigruppe - 9341219366 • Sb marketing, Rr nagar - 8152044411 • M/s kalyan enterprises, Bullahalli main road - devanhalli - 9663377460 • A.L. madhu M/s madhu hardware, D cross main road - 9611920111 • Shri krishna trading corporation, Battarahalli - 7353727790 • Nandan enterprises, Tumkur - 9740247455 • Sri balaji hardware & electricals, Annapoorneshwari nagar - 8792486758 • Mahalaxmi hardware, Kodigehalli - 9901199816 • Sree omkar hardware, Tumkur - 8722897778 • Mataji bath studio, Basvangudhi - 9449578111 • Vayuputhra collective, Magdi road - 9686811221 • Ramdev hardware, Hosakerehalli - 9972223353 • Rekha hardware, Sri gandada kaval - 9886530326 • Sri srinivasa enterprises, Sidlaghatta - 9845186219 • Maruthi ceramics, Banaswadi - 9900211350 • M R trading company, Kr market - 9900695005 • Mathaji hardware & sanitary, Mudalapalya - 8861520472 • Sjr ceramics, Indira nagar - 6366944946 • Vignesh industries private limited, Attibele - 6369021226 • Ganapathi hardware paints, Malleshwaram - 9663381323 • Mamta hardware, Malleshwaram - 9980075641 • Omkar hardware, Tumkur - 8722897778 • Pawan hardware, Electronic city - 8209917939 • Sri subramanya enterprises, Chamrajpet - 9880927956 • Saurabh enterprises, Ks garden - 9448161044

www.sintexonline.com | Toll Free No.: 1800-121-2764

NAAC ACCREDITED UNIVERSITY A+

RAMAIAH UNIVERSITY OF APPLIED SCIENCES

Join the Ramaiah Family and Make Your Mark

NATIONAL BOARD OF ACCREDITATION BACHELOR OF HOTEL MANAGEMENT | B. PHARM
NABH
nirf NATIONAL INSTITUTIONAL RANKING FRAMEWORK: 22nd Rank of Faculty of Dental Sciences | 50th Rank of Ramaiah Medical College | 56th Rank of Faculty of Pharmacy

RUAS EXPANDS WITH ITS NEW CONSTITUENT CAMPUS AT

ELECTRONIC CITY BENGALURU

RAMAIAH UNIVERSITY COLLEGE OF ENGINEERING
RUCE

(A Constituent College of Ramaiah University of Applied Sciences)

Programs Offered
B. Tech. in CSE | AI&ML | ECE |
ELECTRONICS ENGINEERING
(VLSI DESIGN AND TECHNOLOGY)
In collaboration with UNIVERSITY AT ALBANY STATE UNIVERSITY OF NEW YORK

BUILD YOUR CAREER WITH...

- ENGINEERING & TECHNOLOGY
- MEDICAL
- SOCIAL SCIENCES
- LAW
- PHARMACY
- ART & DESIGN
- NATURAL SCIENCES
- DENTAL SCIENCES
- PHYSIOTHERAPY
- MANAGEMENT & COMMERCE
- LIFE & ALLIED HEALTH SCIENCES
- NURSING EDUCATION & RESEARCH
- HOSPITALITY MANAGEMENT & CATERING TECHNOLOGY

ADMISSIONS CLOSING SOON

Apply through RUAS-AT for admissions in UG, PG & B.VOC programmes | Applications Open for Ph.D. programmes | CET CODE E235 | COMEDK CODE E197

SCAN QR TO APPLY

80 1000 4444 | admissions@msruas.ac.in | msruas.ac.in

GNANAGANGOTHRI CAMPUS (GGC)
New BEL Road,
MSR Nagar,
Bengaluru – 560 054

RAMAIAH TECHNOLOGY CAMPUS (RTC)
#470-P, Peenya Industrial Area, Peenya 4th Phase,
Bengaluru – 560 058

RAMAIAH UNIVERSITY COLLEGE OF ENGINEERING (RUCE)
No.15, Bommasandra Jigani Link Road, KIADB Industrial Area,
Jigani, Bengaluru – 560 105

21ಕ್ಕೆ ಬಿಕೆ ಪದಗ್ರಹಣ, ಡಿಕೆಗೆ ಅಭಿನಂದನೆ, ಸಿದ್ದುಗೆ ಸನ್ಮಾನ

ಅರಮನೆ ಮೈದಾನದಲ್ಲಿ ಕಾರ್ಯಕ್ರಮಕ್ಕೆ ಸಿದ್ಧತೆ

■ **ವಿಕ ಸುದ್ದಿಲೋಕ** ಬೆಂಗಳೂರು

ಜೂನ್ 21ರಂದು ಕೆಪಿಸಿಸಿ ನೂತನ ಅಧ್ಯಕ್ಷರಾಗಿ ಬಿ.ಕೆ.ಹರಿಪ್ರಸಾದ್ ಅವರ ಪದಗ್ರಹಣ ಹಾಗೂ ನೂತನ ಸಿಎಂ ಡಿ.ಕೆ.ಶಿವಕುಮಾರ್ ಅವರಿಗೆ ಅಭಿನಂದನೆ ಮತ್ತು ಮಾಜಿ ಸಿಎಂ ಸಿದ್ದರಾಮಯ್ಯ ಅವರಿಗೆ ಬೀಳ್ಕೊಡುಗೆಯೂ ಏರ್ಪಡಿಸಲಾಗಿದೆ.

ಅರಮನೆ ಮೈದಾನದಲ್ಲಿ ಕಾರ್ಯಕ್ರಮ ನಡೆಯಲಿದ್ದು, ಅದ್ಧೂರಿಯಾಗಿ ಸಮಾರಂಭ ನಡೆಸುವುದಕ್ಕೆ ಕಾಂಗ್ರೆಸ್ ಭರ್ಜರಿ ಸಿದ್ಧತೆ ನಡೆಸಿದೆ. ಇದೇ ವೇಳೆ ಪಕ್ಷದ ಶಕ್ತಿ ಪ್ರದರ್ಶನಕ್ಕೂ ವ್ಯವಸ್ಥೆ ಮಾಡಲಾಗುತ್ತಿದೆ. ಮುಂಬರುವ ಜಿಬಿಎ ಮತ್ತು ಪಂಚಾಯತ್ ಚುನಾವಣೆಗಳ ಹಿನ್ನೆಲೆಯಲ್ಲಿ ಪಕ್ಷದಲ್ಲಿ ಸಂಘಟನೆ ಕೆಲಸವನ್ನು ಚುರುಕುಗೊಳಿಸುವ ಕೆಲಸಕ್ಕೆ ಈ ಕಾರ್ಯಕ್ರಮದ ಮೂಲಕ ಚಾಲನೆ ನೀಡಲಾಗುತ್ತಿದೆ.

ಕೆಪಿಸಿಸಿ ಕಚೇರಿಯಲ್ಲಿ ಶನಿವಾರ ಕಾರ್ಯಕ್ರಮದ ಪೂರ್ವಸಿದ್ಧತಾ ಸಭೆ ನಡೆಯಿತು. ಕಾರ್ಯಾಧ್ಯಕ್ಷ ಜಿ.ಸಿ.ಚಂದ್ರಶೇಖರ್, ವಿಧಾನ ಪರಿಷತ್ ಮುಖ್ಯ ಸಚೇತಕ ಸಲೀಂ ಅಹ್ಮದ್, ಮಾಜಿ ಸಚಿವರಾದ ಜಮೀರ್ ಅಹ್ಮದ್ ಖಾನ್, ತನ್ವೀರ್ ಸೇಠ್, ಶಿವರಾಜ್ ತಂಗಡಗಿ, ಪುಟ್ಟರಂಗಶೆಟ್ಟಿ, ಶಾಸಕರಾದ ಶಿವಣ್ಣ, ಅಶೋಕ್ ಪಟ್ಟಣ್, ಹಂಪನಗೌಡ ಬಾದರ್ಲಿ, ವಸಂತ್ ಕುಮಾರ್, ಕೆಪಿಸಿಸಿ ಪದಾಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು.

ಸಭೆ ಬಳಿಕ ಮಾತನಾಡಿದ ಸಲೀಂ ಅಹ್ಮದ್, ''ಇಡೀ ರಾಜ್ಯದ ಗಮನ ಸೆಳೆಯುವಂತೆ ಜೂ.21ರಂದು ಅರಮನೆ ಮೈದಾನದಲ್ಲಿ ಕಾರ್ಯಕ್ರಮ ನಡೆಯಲಿದ್ದು, ಎಲ್ಲ ನಾಯಕರು ಪಾಲ್ಗೊಳ್ಳಲಿದ್ದಾರೆ. ಮುಂದಿನ ಜಿಪಂ, ತಾಪಂ ಹಾಗೂ ಜಿಬಿಎ ಚುನಾವಣೆ ದೃಷ್ಟಿಯಲ್ಲಿಟ್ಟುಕೊಂಡು ರಾಜ್ಯಕ್ಕೆ ಸಂದೇಶ ನೀಡುವ ಕಾರ್ಯಕ್ರಮ ಇದಾಗಲಿದೆ. ಪಕ್ಷ ಮತ್ತು ಸರಕಾರ ಎರಡಕ್ಕೂ ಹೊಸ ನಾಯಕತ್ವ ಸಿಕ್ಕಿದ್ದು, ಕಾರ್ಯಕರ್ತರು, ಮುಖಂಡರು ಹುಮ್ಮಸ್ಸಿನಲ್ಲಿದ್ದಾರೆ. ಜೂ.21ರಮದು ನೂತನ ಅಧ್ಯಕ್ಷರ ಅಧಿಕಾರ ಸ್ವೀಕಾರ ಸಮಾರಂಭದ ಬಳಿಕ ಸಂಪುಟ ವಿಸ್ತರಣೆಗೆ ಮಹೂರ್ತ ನಿಗದಿಯಾಗುವ ನಿರೀಕ್ಷೆಯಿದೆ,'' ಎಂದು ತಿಳಿಸಿದರು.

ಜೂ.15ರಂದು ವಿಕ ನೇರ ಫೋನ್ ಇನ್

ಎಚ್. ಪ್ರಸನ್ನ
ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ

ಯಾವಾಗ: **ಜೂನ್ 15, ಸೋಮವಾರ**

ಸಮಯ: **ಮಧ್ಯಾಹ್ನ 3ರಿಂದ 4 ಗಂಟೆ**

ಫೋನ್ ಮಾಡಿ ಸಿಇಟಿ ಗೊಂದಲಗಳಿಗೆ ಉತ್ತರ ಪಡೆಯಿರಿ

ವೈದ್ಯಕೀಯ ಕೋರ್ಸ್‌ಗಳಿಗಿಂತ ಮೊದಲೇ ಎಂಜಿನಿಯರಿಂಗ್ ಸೇರಿದಂತೆ ಇತರೆ ವೃತ್ತಿಪರ ಕೋರ್ಸ್‌ಗಳಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಪ್ರೀ ರೌಂಡ್ ಮೂಲಕ ಕೌನ್ಸೆಲಿಂಗ್ ನಡೆಸಲು ನಿರ್ಧರಿಸಿದೆ.

ಹಾಗಾದರೆ, ಈ ಪ್ರೀ ರೌಂಡ್ ಅಂದರೆ ಏನು? ಜೂನ್ 21ರಂದು ನೀಟ್ ಪರೀಕ್ಷೆ ನಡೆಯಲಿರುವುದರಿಂದ ವೈದ್ಯ ಕೋರ್ಸ್‌ಗಳ ಪ್ರವೇಶಕ್ಕೆ ಸೀಟು ಹಂಚಿಕೆ ಪ್ರಕ್ರಿಯೆ ಯಾವಾಗ ನಡೆಯಲಿದೆ? ಎಷ್ಟು ಹಂತಗಳಲ್ಲಿ ಸೀಟು ಹಂಚಿಕೆಗೆ ಕೌನ್ಸೆಲಿಂಗ್ ನಡೆಯಲಿದೆ? ಆಯ್ಕೆ ಮಾಡಿಕೊಂಡ ಕಾಲೇಜು, ಕೋರ್ಸ್ ಬೇಡವೆಂದರೆ ಏನು ಮಾಡಬೇಕು? ನೀಟ್ ಪರೀಕ್ಷೆ ಫಲಿತಾಂಶದ ಬಳಿಕವೂ ಕೌನ್ಸೆಲಿಂಗ್‌ನಲ್ಲಿ ಭಾಗಿಯಾಗಬಹುದೇ?

ವಿದ್ಯಾರ್ಥಿಗಳು ಹಾಗೂ ಪೋಷಕರಲ್ಲಿನ ಇಂತಹ ಅನುಮಾನ, ಗೊಂದಲಗಳನ್ನು ಪರಿಹರಿಸಲು ವಿಕ ಜೂನ್ 15ರಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಅವರ ನೇರ ಫೋನ್ ಇನ್ ಕಾರ್ಯಕ್ರಮ ಏರ್ಪಡಿಸಿದೆ. ವಿದ್ಯಾರ್ಥಿಗಳು, ಪೋಷಕರು ಮುಕ್ತವಾಗಿ ಪ್ರಶ್ನೆ ಕೇಳಿ ಉತ್ತರ ಪಡೆಯಬಹುದು.

ಕರೆ ಮಾಡಿ: ✆ 080-40877665

ಆಸ್ಪತ್ರೆಯಲ್ಲಿ ಎರಡೂವರೆ ತಾಸು ಸಭೆ | ವೈದ್ಯರಿಗೆ ತರಾಟೆ

ಖಾದರ್ ಮಿಡ್‌ನೈಟ್ ಮೀಟಿಂಗ್

■ **ವಿಕ ಸುದ್ದಿಲೋಕ** ಸಕಲೇಶಪುರ(ಹಾಸನ)

ಪಟ್ಟಣದ ಕ್ರಾಫರ್ಡ್ ಸರಕಾರಿ ಆಸ್ಪತ್ರೆಗೆ ಶುಕ್ರವಾರ ಮಧ್ಯರಾತ್ರಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಯು.ಟಿ.ಖಾದರ್ ಭೇಟಿ ನೀಡಿ ನಸುಕಿನ 3 ಗಂಟೆವರೆಗೂ ಸುದೀರ್ಘ ಸಭೆ ನಡೆಸಿದರು.

ರಾತ್ರಿ ಸುಮಾರು 11.30ಕ್ಕೆ ಆಸ್ಪತ್ರೆಗೆ ಆಗಮಿಸಿದ ಸಚಿವರು, ರೋಗಿಗಳ ಯೋಗ ಕ್ಷೇಮ ವಿಚಾರಿಸಿದರು. ತದನಂತರ ಆಸ್ಪತ್ರೆಯ ವೈದ್ಯರು, ಸಿಬ್ಬಂದಿ ಹಾಗೂ ಸಾರ್ವಜನಿಕರ ಜತೆ ಎರಡೂವರೆ (2.45ರವರೆಗೂ) ಗಂಟೆ ಕಾಲ ಚರ್ಚೆ ನಡೆಸಿದರು.

ಆಸ್ಪತ್ರೆಗಳ ಮೂಲಸೌಕರ್ಯ, ವೈದ್ಯರು ಹಾಗೂ ಸಿಬ್ಬಂದಿ ಕೊರತೆ, ಸಾರ್ವಜನಿಕರಿಗೆ ನೀಡಲಾಗುತ್ತಿರುವ ಆರೋಗ್ಯ ಸೇವೆ ಬಗ್ಗೆ ಮಾಹಿತಿ ಪಡೆದ ಸಚಿವರು, ಅಗತ್ಯ ಕ್ರಮ ಕೈಗೊಳ್ಳುವ ಭರವಸೆ ನೀಡಿದರು.

ಹಾಸನ ಜಿಲ್ಲೆ ಸಕಲೇಶಪುರದ ಕ್ರಾಫರ್ಡ್ ಸರಕಾರಿ ಆಸ್ಪತ್ರೆಗೆ ಶುಕ್ರವಾರ ಮಧ್ಯರಾತ್ರಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಯು.ಟಿ.ಖಾದರ್ ಭೇಟಿ ನೀಡಿ ರೋಗಿಗಳ ಯೋಗಕ್ಷೇಮ ವಿಚಾರಿಸಿದರು.

ಸ್ಕ್ಯಾನಿಂಗ್ ಸಿಬ್ಬಂದಿಯೇ ಇಲ್ಲ: ಸಭೆಯಲ್ಲಿ ಸಚಿವರು ಕೇಳಿದ ಪ್ರಶ್ನೆಗಳಿಗೆ ಆಸ್ಪತ್ರೆ ಆಡಳಿತಾಧಿಕಾರಿ ಅರುಣ್ ಕುಮಾರ್ ಮತ್ತು ತಾಲೂಕು ವೈದ್ಯಾಧಿಕಾರಿ ಮಹೇಶ್ ಅವರ ಬಳಿ ಸ್ಪಷ್ಟ ಮಾಹಿತಿ ಇರಲಿಲ್ಲ. ಆಸ್ಪತ್ರೆಯಲ್ಲಿ ಸ್ಕ್ಯಾನಿಂಗ್ ಯಂತ್ರವಿದ್ದು, ಸ್ಕ್ಯಾನಿಂಗ್ ಮಾಡುವ ಸಿಬ್ಬಂದಿ ಇಲ್ಲ. ಹೀಗಾಗಿ ಸ್ಕ್ಯಾನಿಂಗ್ ಮಾಡಿಸಲು ಖಾಸಗಿ ಆಸ್ಪತ್ರೆಗೆ ಕಳುಹಿಸುತ್ತಿರುವುದನ್ನು ಗಮನಿಸಿದ ಸಚಿವರು, ''ಆಸ್ಪತ್ರೆ ಸಮಸ್ಯೆಗಳನ್ನು ಪಟ್ಟಿ ಮಾಡಿ ಆಯುಕ್ತರಿಗೆ ಕಳುಹಿಸಬೇಕಾದ ಜವಾಬ್ದಾರಿ ನಿಮ್ಮದು. ಆದರೆ ಆಸ್ಪತ್ರೆಗೆ ಬರುವ ರೋಗಿಗಳನ್ನು ಖಾಸಗಿ ಆಸ್ಪತ್ರೆಗೆ ಕಳುಹಿಸುತ್ತಿರುವುದು ಸರಿಯಲ್ಲ'' ಎಂದು ವೈದ್ಯಾಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ಸಚಿವರ ಮುಂದೆ ಕಣ್ಣೀರಿಟ್ಟ ನರ್ಸ್: ಆಸ್ಪತ್ರೆಯಲ್ಲಿ ಆಯೋಜಿಸಿದ್ದ ಪ್ರಗತಿ ಪರಿಶೀಲನಾ ಸಭೆಯ ವೇಳೆ, ''ರಾಷ್ಟ್ರೀಯ ಆರೋಗ್ಯ ಮಿಷನ್(ಎನ್ ಎಚ್‌ಎಂ) ಅಡಿಯಲ್ಲಿ ಗುತ್ತಿಗೆ ಆಧಾರದಲ್ಲಿ 17 ವರ್ಷಗಳಿಂದ ನಿರಂತರವಾಗಿ ಸೇವೆ ಸಲ್ಲಿಸುತ್ತಿದ್ದೇನೆ. ಇಂದಿನ ದುಬಾರಿ ದಿನಗಳಲ್ಲಿ ಮಕ್ಕಳ ವಿದ್ಯಾಭ್ಯಾಸ ಹಾಗೂ ಕುಟುಂಬದ ನಿರ್ವಹಣೆ ಮಾಡುವುದು ತೀರಾ ಕಷ್ಟಕರವಾಗಿದೆ. ವೇತನ ಹೆಚ್ಚಳ ಹಾಗೂ ಸೇವೆಯನ್ನು ಕಾಯಂಗೊಳಿಸಬೇಕು ಎಂದು ಆಗ್ರಹಿಸಿ ಸಚಿವರ ಮುಂದೆ ಸ್ಟಾಫ್ ನರ್ಸ್ ಒಬ್ಬರು ಕಣ್ಣೀರಿಟರು.

ಸಚಿವರ ಸೂಚನೆ

ವಿಷ ಜಂತು ಕಡಿತ ಔಷಧ ದಾಸ್ತಾನಿಡಿ: ಮಲೆನಾಡು ಭಾಗದಲ್ಲಿ ಕಾಡುಪ್ರಾಣಿಗಳು ಮತ್ತು ವಿಷ ಜಂತುಗಳ ಕಡಿತ ಪ್ರಕರಣ ಹೆಚ್ಚು ಕಂಡುಬರುತ್ತದೆ. ಹೀಗಾಗಿ ವಿಷ ಜಂತುಗಳು ಕಡಿತ ಔಷಧಗಳನ್ನು ಹೆಚ್ಚಾಗಿ ಸಂಗ್ರಹಿಸಿ ಇಟ್ಟುಕೊಳ್ಳಬೇಕು.

ಹೊರಗಿನ ಔಷಧ ಚೀಟಿಗೆ ನಿಷೇಧ: ಯಾವುದೇ ಕಾರಣಕ್ಕೂ ಬಡ ರೋಗಿಗಳಿಗೆ ಹೊರಗಿನಿಂದ ಔಷಧಗಳನ್ನು ಖರೀದಿಸುವಂತೆ ವೈದ್ಯರು ಚೀಟಿ ಬರೆದುಕೊಡಬಾರದು. ಅಗತ್ಯ ಔಷಧಗಳನ್ನು ಆಸ್ಪತ್ರೆಯ ನಿಧಿಯಿಂದಲೇ ಖರೀದಿಸಿ ರೋಗಿಗಳಿಗೆ ಉಚಿತವಾಗಿ ವಿತರಿಸಿ.

ಎಸ್‌ಪಿಪಿಯಾಗಿ ಜಗದೀಶ್

ಬೆಂಗಳೂರು: ಈವರೆಗೆ ಹೆಚ್ಚುವರಿ ಸರಕಾರಿ ಅಭಿಯೋಜಕರಾಗಿದ್ದ (ಎಎಸ್‌ಪಿಪಿ) ಬಿ.ಎನ್.ಜಗದೀಶ್ ಅವರನ್ನು ರಾಜ್ಯ ಸರಕಾರಿ ಅಭಿಯೋಜಕರ (ಎಸ್‌ಪಿಪಿ) ಹುದ್ದೆಗೆ ನೇಮಕ ಮಾಡಿ ಸರಕಾರ ಆದೇಶ ಹೊರಡಿಸಿದೆ. ರಾಜ್ಯದಲ್ಲಿ ಹೊಸ ಸರಕಾರ ರಚನೆ ನಂತರ ಎಸ್‌ಎಸ್‌ಪಿಯಾಗಿದ್ದ ಬಿ.ಎ. ಬೆಳ್ಳಿಯಪ್ಪ ಅವರ ಹುದ್ದೆಗೆ ಜಗದೀಶ್ ಅವರನ್ನು ನೇಮಕ ಮಾಡಲಾಗಿದೆ. ಈ ಹಿಂದೆ ಇದ್ದ ವಿಜಯಕುಮಾರ್ ಮಜಗೆ ಅವರನ್ನು ಸರಕಾರಿ ಅಭಿಯೋಜಕ-2 ಹುದ್ದೆಯಲ್ಲಿ ಮುಂದುವರಿಸಲಾಗಿದೆ. ಹೊಸದಾಗಿ ರಶ್ಮಿ ಜಾಧವ್ ಮತ್ತು ಮೊಹಮ್ಮದ್ ಆಯುಬ್ ಅಲಿ ಖಾನ್ ಅವರನ್ನು ಹೆಚ್ಚುವರಿ ರಾಜ್ಯ ಸರಕಾರಿ ಅಭಿಯೋಜಕರನ್ನಾಗಿ ನೇಮಿಸಲಾಗಿದೆ.

'ಕಸದ ಲೂಟಿ ಸಿಬಿಐ ತನಿಖೆಗೆ ಕೊಡಿ'

ಬೆಂಗಳೂರು: ಜಿಬಿಎ ವ್ಯಾಪ್ತಿಯ ಘನ ತ್ಯಾಜ್ಯ ವಿಲೇವಾರಿ ಟೆಂಡರ್‌ನಲ್ಲಿ ನಡೆದಿರುವ ಮಹಾ ಲೂಟಿಯಲ್ಲಿ ತಮ್ಮ ಪಾತ್ರವಿಲ್ಲ ಎಂಬ ಧೈರ್ಯವಿದ್ದರೆ ಸಿಎಂ ಡಿಕೆಶಿ ಅವರು ಕೂಡಲೇ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಲಿ ಎಂದು ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ್ ಸವಾಲು ಹಾಕಿದ್ದಾರೆ.

ಈ ಬಗ್ಗೆ ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು ಸಿಎಂ ಡಿ.ಕೆ.ಶಿವಕುಮಾರ್ ಅವರನ್ನು 'ಕಮಿಷನ್ ಮಿನಿಸ್ಟರ್' ಎಂದು ಕುಟುಕಿದ್ದಾರೆ.

''ಯಾವುದೇ ತನಿಖೆಗೆ ಸಿದ್ಧ ಎಂದು ಮಾಧ್ಯಮಗಳ ಮುಂದೆ ಹಾರಿಕೆ ಉತ್ತರ ನೀಡುವ 'ಕಮಿಷನ್ ಮಿನಿಸ್ಟರ್' ಡಿ.ಕೆ.ಶಿವಕುಮಾರ್ ಅವರೇ, ಮಾಧ್ಯಮಗಳ ಕ್ಯಾಮೆರಾಗಳ ಮುಂದೆ ನಿಮ್ಮ ಈ ಉತ್ತರಕುಮಾರನ ಪೌರುಷ ಸಾಕು ಮಾಡಿ. ಪ್ರಾಮಾಣಿಕತೆ ಇದ್ದರೆ, ಕಸದ ಟೆಂಡರ್‌ನ ಮಹಾ ಲೂಟಿಯಲ್ಲಿ ನಿಮ್ಮ ಪಾತ್ರವಿಲ್ಲ ಎಂಬ ಧೈರ್ಯ ನಿಮಗಿದ್ದರೆ, ಪ್ರಕರಣವನ್ನು ಸಿಬಿಐ ತನಿಖೆಗೆ ಒಪ್ಪಿಸಿ,'' ಎಂದು ಒತ್ತಾಯಿಸಿದ್ದಾರೆ. ''ಘನತ್ಯಾಜ್ಯ ವಿಲೇವಾರಿ ಟೆಂಡರ್ ಹೆಸರಿನಲ್ಲಿ ನಡೆದಿರುವ ಈ ಬ್ರಹ್ಮಾಂಡ ಭ್ರಷ್ಟಾಚಾರದ ವಿರುದ್ಧ ನಾನೇ ಖುದ್ದಾಗಿ ದೂರು ಕೊಡುತ್ತೇನೆ. ಮಾಧ್ಯಮಗಳ ಮುಂದೆ ಕ್ಯಾಮೆರಾ ನೋಡಿ ಬಿಲ್ಡ್‌ಅಪ್ ಕೊಡುವುದನ್ನು ಬಿಟ್ಟು, ತನಿಖೆಗೆ ಆದೇಶಿಸುವ ತಾಕತ್ತು ಪ್ರದರ್ಶಿಸಿ. ಕಸದಲ್ಲೂ ಕಮಿಷನ್ ಹೊಡೆದ ಆ ಮಹಾ ಕಮಿಷನ್ ಏಜೆಂಟ್ ಯಾರು ಎಂಬ ಸತ್ಯ ಹೊರಬರಲಿ,'' ಎಂದು ಆಗ್ರಹಿಸಿದ್ದಾರೆ.

100 ಎಕರೆ ಅರಣ್ಯ ವಲಯದಲ್ಲಿ 700ಕ್ಕೂ ಹೆಚ್ಚು ವಿವಿಧ ತಳಿಯ ಮರಗಳ ಪೋಷಣೆ

ಟಿಬೆಟ್ ಕಣಿವೆಯಿಂದ ಹಸಿರು ತಂದ ರಿಂಪೋಜೆ

■ **ತೇಲಪಂಡ ಕವನ್ ಕಾರ್ಯಪ್ಪ**
ಸೋಮವಾರಪೇಟೆ (ಕೊಡಗು)
kavancariappacoorg@gmail.com

ಆ ಶಿಖರದ ಬುಡದಲ್ಲಿ, ಧರ್ಮ ದೇವರೆಂದರೆ ಉರಿದು ಬೀಳುವ ಚೀನಾ ಕಮ್ಯುನಿಸ್ಟ್ ಆಡಳಿತ. ಶಿಖರದ ನೆತ್ತಿಯ ಮೇಲೆ, ಭಗವಂತನನ್ನು ಬಿಟ್ಟು ಬದುಕೇ ಇಲ್ಲ ಎಂದು ಭಾವಿಸಿದ ಟಿಬೆಟ್ ಬೌದ್ಧ ಬಿಕ್ಕುಗಳು. ಇಬ್ಬರದ್ದೂ ತದ್ವಿರುದ್ಧ ದಾರಿ. ಈ ಕಾರಣಕ್ಕಾಗಿ ಟಿಬೆಟಿನ ಪ್ರತ್ಯೇಕತೆಯ ಅಸ್ತಿತ್ವವನ್ನು ಅಲ್ಲಗಳೆದ ಚೀನಾ, ಪ್ರತಿಭಟಿಸುವವರನ್ನು ದಂಡಿಸಿತು. ಆ ದಂಡನೆ ಸಹಿಸದೇ 1959ರ ಒಂದು ದಿನ ರಾತ್ರಿ ಊರು ತೊರೆದು ಶಿಖರ ಇಳಿದ ಬಾಲಕ ಕಾಜುಂಗ್, ಧರ್ಮವಂತರ ಬೆರಳು ಹಿಡಿದು ಕರ್ನಾಟಕದ ಬೈಲುಕುಪ್ಪೆ ಸೇರಿದ.

ಹೆಸರೇ ಹೇಳುವಂತೆ, ಮರಮುಟ್ಟು ಕಾಣದ ಒಣ ಬಯಲು ಅದು. ಕಾಜುಂಗ್ ಕಷ್ಟಗಳ ನಡುವೆ ಬೆಳೆದ. ಹಸಿರಿರದ ಬೈಲುಕುಪ್ಪೆಯಲ್ಲಿ ಉಸಿರಾಡುವುದು ಹೇಗೆ? ಕಾಡು ಬೇಕೆಂದು ಕಾಡಿತು ಮನ. ಮದುವೆಯಾದ, ಮಗ ಜನಿಸಿದ, ಸಂಸಾರ ದೊಡ್ಡದಾಯಿತು. ಕಾಡುಮೇಡು, ನದಿ ಕಣಿವೆ ಇರುವ ಪ್ರಕೃತಿ ಹುಡುಕಿಕೊಂಡು ಅಲೆದಾಡಿದ ಕಾಜುಂಗ್, ಮಗ ರಿಂಪೋಜೆ ಜನಿಸಿದ ಬಳಿಕ ಸಮೀಪದ ಒಂಟಿ ಮಾವಿನ ಮರ ಏರಿಕುಳಿತು ಪ್ರಾರ್ಥನೆ ಮಾಡುತ್ತಿದ್ದ. 'ಪ್ರಕೃತಿ ಸಮೃದ್ಧಿ ಇದ್ದಲ್ಲಿ ಮಾತ್ರ ಮನುಷ್ಯನ ನೆಮ್ಮದಿ ಸಾಧ್ಯ' ಎನ್ನುತ್ತಿದ್ದ ಕಾಜುಂಗ್, ಮಗನಿಗೆ ಮರಗಳ ಮಹಿಮೆ ಹೇಳಿಕೊಡುತ್ತಿದ್ದ. ರಿಂಪೋಜೆ ಬೆಳೆದ ಮೇಲೆ ಬೌದ್ಧ ಗುರುವಾಗಿ ಪ್ರಕೃತಿಯ ಆರಾಧನೆಗೆ ನಿಂತರು. 5 ಸಾವಿರ ಎಕರೆ ಟಿಬೆಟ್ ನಿರಾಶ್ರಿತರ ಶಿಬಿರದಲ್ಲಿ 100 ಎಕರೆ ಜಾಗವನ್ನು ಆರಾಧನೆಗಾಗಿಯೇ ಪಡೆದರು ಕರ್ಮ ರಿಂಪೋಜೆ. 1995ರಲ್ಲಿ ಕರ್ಮ ಕಗ್ಯುಮಠ ಕಟ್ಟಿದರು. ಸುತ್ತ ಸಾವಿರಾರು ಸಸಿಗಳನ್ನು ನೆಟ್ಟು ಪೋಷಣೆಗೆ ಇಳಿದರು. ಆಗ ಸಸಿಗಳನ್ನು ಬೆಳೆಸಲು ನೀರಿಗೆ ಬರ. ಬೋರಿಗೂ ನೀರು ಸಿಗದ ದುಸ್ಥಿತಿ. ಯೋಚಿಸಿದ ಕರ್ಮ ರಿಂಪೋಜೆ, ತಮ್ಮ ಜನರ ನೆರವು ಬಳಸಿ ನೂರು ಎಕರೆ ಜಾಗದ ಅಲ್ಲಲ್ಲಿ ಕೆರೆಗಳನ್ನು ನಿರ್ಮಿಸಿದರು. ಮಳೆಗಾಲಕ್ಕೆ ಕೆರೆ ತುಂಬಿದವು. ಸಸಿಗಳು ಮರವಾದವು. ಬಯಲು, ಅರಣ್ಯವಾಗಿ ಬದಲಾಯಿತು. 700ಕ್ಕೂ ಹೆಚ್ಚು ವಿವಿಧ ತಳಿಯ ಮರಗಳು ಇಲ್ಲಿ ನಳನಳಿಸುತ್ತಿವೆ. ಬೈಲುಕುಪ್ಪೆಯಲ್ಲಿ ಈಗ ನೀರಿಗೆ ಬರವಿಲ್ಲ. 50-60 ಅಡಿ ಆಳದಲ್ಲಿಯೇ ಅಂತರ್ಜಲ ಲಭ್ಯ ಇದೆ.

ಬೋಧಿ ಸತ್ವ ಟ್ರಸ್ಟ್ ಆಶ್ರಯದಲ್ಲಿ ಸ್ಥಾಪಿತವಾದ ಈ ಮಠ 'ಇಕೋ ನಳಂದ' ಎಂಬ ಗುರುಕುಲ ಶಾಲೆಗೂ ಆಶ್ರಯ ನೀಡಿದೆ. ಮುಂದಿನ ವರ್ಷ ಇನ್ನೂ 1500 ಸಸಿ ನೆಟ್ಟು ಬೆಳೆಸುವ ಕನಸನ್ನು ಕರ್ಮ ರಿಂಪೋಜೆ ಕಾಣುತ್ತಿದ್ದಾರೆ.

ಮಠಮಾನ್ಯ ಆವರಣ ಹಸಿರಾದರೆ...

- ದೇವಸ್ಥಾನ ಆವರಣದಲ್ಲಿ ಅರಣ್ಯ ಬೆಳೆಸುವುದು ಸುಲಭ
- ಅಂತಹ ಖಾಲಿ ಜಾಗದಲ್ಲಿ ಹಸಿರು ಅರಳುವುದರಿಂದ ಭಕ್ತರ ಆರೋಗ್ಯ ಸುಧಾರಣೆ
- ಹಸಿರಿನಿಂದ ಪ್ರಾರ್ಥನೆಗೆ ಬೇಕಾದ ತನ್ಮಯತೆ ಸಾಧ್ಯ
- ಹಸಿರೀಕರಣ ಹೆಚ್ಚಿದರೆ ಅಂತರ್ಜಲವೂ ವರ್ಧನೆ

ನನ್ನ ಭೂಮಿ ಹೆಜ್ಜೆ
ವಿಕ ಅಭಿಯಾನ

ನಿಮ್ಮ ಸುತ್ತಲೂ ಇಂತಹ ಪರಿಸರ ಸಂರಕ್ಷಣೆಯ ಕುತೂಹಲಕಾರಿ ಯಶೋಗಾಥೆಗಳು ಗಮನಕ್ಕೆ ಬಂದರೆ ಬರೆದು ಈ ನಂಬರ್‌ಗೆ ವಾಟ್ಸ್‌ಆ್ಯಪ್ ಮಾಡಿ.
63664 22240

ಬೌದ್ಧಧರ್ಮದ ಜತೆ ಪರಿಸರ ಸಂರಕ್ಷಣೆ



ಶಾಂತಿಯ ರಾಯಭಾರಿಯಾದ ಬುದ್ಧ ದೇವನು ಬೋಧಿಸತ್ವದಲ್ಲಿ ಆಧ್ಯಾತ್ಮಿಕ ಜ್ಞಾನ ಹುಡುಕಿದರು. ಮರಗಳಿಂದ ಮನುಷ್ಯ ಮತ್ತು ಮೃಗ ಎರಡೂ ಪುನೀತಗೊಳ್ಳುತ್ತವೆ ಎಂದು ನಂಬಿದ್ದರು. ಹಿಂದೊಮ್ಮೆ ಏನೂ ಸುಳಿಯದ ಈ ನಮ್ಮ ಜಾಗದಲ್ಲಿ ಈಗ ಬೇಸಿಗೆ ಬಂದರೆ ಆನೆಗಳು ಬಂದು ಹೋಗುತ್ತವೆ. ವನ, ವನ್ಯಮೃಗ ನಮ್ಮ ನೆಮ್ಮದಿಯನ್ನು ಕಾಯುತ್ತಿವೆ.

-ಕರ್ಮ ಸ್ಯಾಮ್ ಟೆನ್ಲಿಂಗ್ಪಾ ರಿಂಪೋಜೆ ಟ್ರಸ್ಟ್‌ನ ಸಂಸ್ಥಾಪಕ

Bennett & Coleman
THE TIMES OF INDIA
www.vijaykarnataka.com
ಸಂಪುಟ: 27 | ಸಂಚಿಕೆ: 164
ಭಾನುವಾರ,14 ಜೂನ್ 2026 | ಪುಟಗಳು: 11+4 | ಬೆಲೆ: ₹ 5.00 (ವಿಕ ಮನಿ ಜತೆ ₹10.00)
c
ಬೆಂಗಳೂರು | ಮೈಸೂರು | ಶಿವಮೊಗ್ಗ | ಹುಬ್ಬಳ್ಳಿ | ಬಾಗಲಕೋಟೆ | ಕಲಬುರಗಿ | ಚಿತ್ರದುರ್ಗ | ಗಂಗಾವತಿ | ಹಾಸನ | ಬೆಳಗಾವಿ
PRIDE OF YOUNG KARNATAKA

VK ವಿಜಯ ಕರ್ನಾಟಕ

ಭೂಸೇನೆ ನೂತನ ಮುಖ್ಯಸ್ಥರಾಗಿ ಲೆಫ್ಟಿನೆಂಟ್ ಜನರಲ್ ಧೀರಜ್ ಸೇಠ್ ನೇಮಕ

₹13,665 1 ಗ್ರಾಂ ದರ 22 ಕ್ಯಾರೆಟ್ (ಆಭರಣ ಚಿನ್ನ)	₹14,908 1 ಗ್ರಾಂ ದರ 24 ಕ್ಯಾರೆಟ್ (ಗಟ್ಟಿ ಚಿನ್ನ)	ಬೆಂಗಳೂರು ದರ ₹2,60,000 1 ಕೆಜಿ ಬೆಳ್ಳಿ ದರ (ಜಿಎಸ್‌ಟಿ ಪ್ರತ್ಯೇಕ)

ಅಮೆರಿಕ ದಾಳಿಯಲ್ಲಿ ಮೃತಪಟ್ಟ ಇರಾನ್ ಸರ್ವೋಚ್ಚ ನಾಯಕ ಖಮೇನಿ ಅಂತ್ಯಕ್ರಿಯೆ ಜುಲೈ 9ಕ್ಕೆ ನಿಗದಿ

ವಿಕ ಹೊಂಗಿರಣ

ನಿಮ್ಮ ಉಡುಗೊರೆ ಏನೆಂದು ಕಂಡುಕೊಳ್ಳುವುದರಲ್ಲಿ ಜೀವನದ ಅರ್ಥವಿದೆ. ಆ ಉಡುಗೊರೆಯನ್ನು ಬೇರೆಯವರಿಗೆ ಕೊಟ್ಟು ಬಿಡುವುದರಲ್ಲಿ ಜೀವನದ ಉದ್ದೇಶ ಅಡಗಿದೆ.

- ವಿಲಿಯಮ್ ಶೇಕ್ಸ್‌ಪಿಯರ್

SBI
The banker to every Indian
ಎಸ್‌ಬಿಐ ಡಿಜಿಟಲ್ ಎಂಎಸ್‌ಎಂಇ ಸಾಲಗಳು
• ರೂ. 5 ಕೋಟಿವರೆಗೆ ಸಾಲಗಳು
• ರೂ. 50 ಲಕ್ಷದವರೆಗಿನ ಸಾಲಗಳ ತ್ವರಿತ ಡಿಜಿಟಲ್ ಮಂಜೂರಾತಿ
• ಅವಧಿ: 10 ವರ್ಷಗಳವರೆಗೆ
• ಆಕರ್ಷಕ ಬಡ್ಡಿದರಗಳು
• ಕ್ರೆಡಿಟ್ ಗ್ಯಾರೆಂಟಿ ಸುರಕ್ಷಿತ ಸಾಲಗಳಿಗೆ ಶೂನ್ಯ ಆಧಾರ
ಈಗಲೇ ಅರ್ಜಿ ಸಲ್ಲಿಸಲು ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ
*ಷರತ್ತುಗಳು ಅನ್ವಯಿಸುತ್ತವೆ
BANKING AS EASY AS 1-2-3-4
1800 1234 1800 2100

Vencobb
ಫಾರಂ ಧಾರಣೆ ಮಾರಾಟದ ಪ್ರತಿ ಕೆಜಿಗೆ ಸಲಹೆಯ ಬೆಲೆ
₹120/- ಕೋಲಾರ 118/- ತುಮಕೂರು 118/-
ರೀಟೇಲ್ ಮಾರಾಟದ ದರ ಪ್ರತಿ ಕೆಜಿಗೆ ಬೆಲೆ ₹160/-
ಕೋಲಾರ 158/- ತುಮಕೂರು 158/-
ವಿಥ್ ಸ್ಕಿನ್ ₹226/- ಕೋಲಾರ 223/- ತುಮಕೂರು 223/-
ವಿಥೌಟ್ ಸ್ಕಿನ್ ₹258/- ಕೋಲಾರ 254/- ತುಮಕೂರು 254/-
ಗ್ರಾಹಕರಿಗೋಸ್ಕರ ನೀಡಲಾಗಿದೆ

ಯುದ್ಧ, ತೈಲ ಬೆಲೆ ಏರಿಕೆಯಿಂದ ಅಕ್ಕಿ ತುಟ್ಟಿ »04

ವಾಯುಪಡೆ ವಿಮಾನ ಪತನ, ಐವರು ಹುತಾತ್ಮ »08

ಹಳಿ ತಪ್ಪಿದ ಗ್ರಾಪಂ ಆಡಳಿತ! »07

ಮನೆಗೇ ತಲುಪಲಿದೆ ನಮೂನೆ | ಯೋಜನೆ ಸ್ಥಗಿತ ಇಲ್ಲ, ಆದರೆ ಅನರ್ಹರಿಗೆ ನೆರವು ತಡೆಯುವ ಉದ್ದೇಶದಿಂದ ಕ್ರಮ | ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಘೋಷಣೆ

ಗ್ಯಾರಂಟಿಗೆ ಹೊಸ ಅರ್ಜಿ!

■ **ವಿಕ ಸುದ್ದಿಲೋಕ** ಬೆಂಗಳೂರು

ಗೃಹಲಕ್ಷ್ಮಿ ಹಾಗೂ ಗೃಹಜ್ಯೋತಿ ಯೋಜನೆ ಫಲಾನುಭವಿಗಳು ಮತ್ತೊಮ್ಮೆ ಅರ್ಜಿ ಸಲ್ಲಿಸಬೇಕು! ಗ್ಯಾರಂಟಿ ಯೋಜನೆಗಳ ಲಾಭ ಅನರ್ಹರಿಗೂ ತಲುಪುತ್ತಿದೆ ಎಂಬ ಸಂಶಯದ ಹಿನ್ನೆಲೆಯಲ್ಲಿ ರಾಜ್ಯ ಸರಕಾರ ಇಂತಹ ನಿರ್ಧಾರ ಕೈಗೊಂಡಿದೆ.

ರಾಜ್ಯದ ಎಲ್ಲ ಜಿಲ್ಲಾಧಿಕಾರಿಗಳು, ಜಿಪಂ ಸಿಇಒಗಳು, ಎಸ್‌ಪಿಗಳು ಹಾಗೂ ಡಿಎಫ್‌ಒಗಳ ಜತೆ ಶನಿವಾರ ವಿಧಾನಸೌಧದಲ್ಲಿ ನಡೆಸಿದ ಸಭೆಯಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರೇ ಈ ವಿಷಯ ಪ್ರಕಟಿಸಿದ್ದಾರೆ. ಮುಖ್ಯಮಂತ್ರಿಯಾದ ಬಳಿಕ ಜಿಲ್ಲಾಡಳಿತಗಳ ಉನ್ನತ ಅಧಿಕಾರಿಗಳೊಂದಿಗೆ ಮೊದಲ ಬಾರಿಗೆ ಸಭೆ ನಡೆಸಿದ ಮುಖ್ಯಮಂತ್ರಿ, ತಮ್ಮ ಸರಕಾರದ ಕಾರ್ಯಸೂಚಿಯ ವಿವರ ನೀಡಿದರು. ಸುದೀರ್ಘ ಏಳು ಗಂಟೆ ನಡೆದ ಸಭೆಯಲ್ಲಿ ಅಧಿಕಾರಿಗಳಿಗೆ ಅನೇಕ ಸೂಚನೆಗಳನ್ನೂ ನೀಡಿದರು.

ಮುಖ್ಯವಾಗಿ ಗ್ಯಾರಂಟಿ ಯೋಜನೆಗಳ ದುರ್ಬಳಕೆಯಿಂದ ಸರಕಾರದ ಬೊಕ್ಕಸಕ್ಕೆ ನೂರಾರು ಕೋಟಿ ರೂ. ನಷ್ಟ ಉಂಟಾಗುತ್ತಿರುವುದನ್ನು ಪ್ರಸ್ತಾಪಿಸಿದ ಮುಖ್ಯಮಂತ್ರಿ ಅವರು ದುರ್ಬಳಕೆ ತಡೆಗಾಗಿ ಗೃಹಲಕ್ಷ್ಮಿ ಹಾಗೂ ಗೃಹಜ್ಯೋತಿ ಯೋಜನೆ ಫಲಾನುಭವಿಗಳಿಂದ ಅರ್ಜಿ ಸ್ವೀಕರಿಸಿ ಅರ್ಹರಿಗೆ ಸೌಲಭ್ಯ ಮುಂದುವರಿಸುವ ಚಿಂತನೆಯನ್ನು ಅಧಿಕಾರಿಗಳೊಂದಿಗೆ ಹಂಚಿಕೊಂಡರು. »02

ವಿಧಾನಸೌಧದಲ್ಲಿ ಜಿಲ್ಲಾಡಳಿತಗಳ ಉನ್ನತ ಅಧಿಕಾರಿಗಳ ಜತೆ ಶನಿವಾರ ಸಭೆ ನಡೆಸಿದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್.

ಅಧಿಕಾರಿಗಳಿಗೆ ಸಿಎಂ ಸೂಚನೆ

- ತಿಂಗಳಲ್ಲಿ ಸರಕಾರಿ ಶಾಲಾ ಮಕ್ಕಳಿಗೆ ಸಮವಸ್ತ್ರ ಪತ್ಯ, ಶೂ ವಿತರಿಸಬೇಕು
- ಮುಂಗಾರು ಆರಂಭದ ಹಿನ್ನೆಲೆಯಲ್ಲಿ ಬಿತ್ತನೆ ಬೀಜ, ರಸಗೊಬ್ಬರ ಕೊರತೆಯಾಗದಂತೆ ವ್ಯವಸ್ಥೆ ಮಾಡಿಕೊಳ್ಳಬೇಕು
- ಮಳೆ ಕೊರತೆ ಮುನ್ಸೂಚನೆ ಹಿನ್ನೆಲೆಯಲ್ಲಿ ಎದುರಾಗಬಹುದಾದ ಸಮಸ್ಯೆಯನ್ನು ಎದುರಿಸಲೂ ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು
- ಎಸ್‌ಐಆರ್ ಪ್ರಕ್ರಿಯೆಯಲ್ಲಿ ಮತದಾರರ ಹಕ್ಕು ರಕ್ಷಣೆಗೆ ಕ್ರಮ ವಹಿಸಬೇಕು.

ಟೀಂ ಕರ್ನಾಟಕವಾಗಿ ಕೆಲಸ ಮಾಡೋಣ: ಸಿಎಂ

- ಜನಪರ ಆಡಳಿತ ನೀಡಲು ನಾವೆಲ್ಲರೂ 'ಟೀಂ ಕರ್ನಾಟಕ'ವಾಗಿ ಕಾರ್ಯನಿರ್ವಹಿಸೋಣ
- ಅಧಿಕಾರಿಗಳು ನಿತ್ಯ ಬೆಳಗ್ಗೆ 10ಗೆ ಸರಿಯಾಗಿ ಕಚೇರಿಗೆ ಹಾಜರಾಗಬೇಕು
- ಕಾನೂನುಬಾಹಿರ ಕೆಲಸವನ್ನು ಸಿಎಂ, ಸಚಿವರು ಹೇಳಿದರೂ ಮಾಡಬಾರದು
- ರಾಜ್ಯವನ್ನು ಭ್ರಷ್ಟಾಚಾರ ಮುಕ್ತವನ್ನಾಗಿಸೋಣ
- ಜನರ ಸಮಸ್ಯೆ-ನಿರೀಕ್ಷೆಗಳಿಗೆ ಸ್ಥಳೀಯವಾಗಿ ಪರಿಹಾರ, ಸ್ಪಂದನೆ ಸಿಗುವ ವ್ಯವಸ್ಥೆ ಮಾಡೋಣ.

ಗ್ಯಾರಂಟಿಯಡಿ ನೀಡುತ್ತಿರುವ ನೆರವಿನ ಮೊತ್ತ ಕರ್ನಾಟಕದ ನಾನಾ ಬ್ಯಾಂಕ್‌ಗಳಿಗೆ ಹೋಗುತ್ತಿದೆಯೇ ಅಥವಾ ಅನ್ಯ ರಾಜ್ಯಗಳಿಗೂ ಹೋಗುತ್ತಿದೆಯೇ? ಲಂಚಕ್ಕೋ, ಸಾಲ ಮರುಪಾವತಿಗೋ, ಯಾವುದಾದರೂ ಹಣಕಾಸಿನ ಯೋಜನೆಗೆ ತಲುಪುತ್ತಿದೆಯೋ ಎಂಬ ಮಾಹಿತಿ ಪಡೆಯುವ ದೃಷ್ಟಿಯಿಂದ ಅರ್ಜಿ ಸ್ವೀಕರಿಸಲು ತೀರ್ಮಾನಿಸಲಾಗಿದೆ. ಯಾವುದೇ ಫಲಾನುಭವಿಗೆ ಸೌಲಭ್ಯ ನಿಲ್ಲಿಸುವುದಿಲ್ಲ. ಆದರೆ ಪ್ರತಿಯೊಬ್ಬರೂ ಅರ್ಜಿಯಲ್ಲಿ ಸರಿಯಾದ ಮಾಹಿತಿ ದಾಖಲಿಸಬೇಕು.

- **ಡಿ.ಕೆ.ಶಿವಕುಮಾರ್** ಮುಖ್ಯಮಂತ್ರಿ

ಫ್ರಾನ್ಸ್‌ನಲ್ಲಿ ಮೋದಿ-ಟ್ರಂಪ್ ಭೇಟಿ

ವಾಷಿಂಗ್ಟನ್: ಪ್ರಧಾನಿ ನರೇಂದ್ರ ಮೋದಿ ಅವರು ಫ್ರಾನ್ಸ್‌ನ ಎವಿಯಾನ್‌ನಲ್ಲಿ ಜೂನ್ 16-17ರಂದು ನಡೆಯಲಿರುವ ಜಿ7 ಶೃಂಗಸಭೆಯ ನೇಪಥ್ಯದಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ಭೇಟಿಯಾಗಲಿದ್ದಾರೆ. ಅಮೆರಿಕ ಸರಕಾರ ಶನಿವಾರ ಭೇಟಿ ವಿಷಯವನ್ನು ಖಚಿತಪಡಿಸಿದೆ. ಇದು 16 ತಿಂಗಳ ಬಳಿಕ ಉಭಯ ನಾಯಕರ ಮೊದಲ ಭೇಟಿಯಾಗಿದೆ. ಈ ಹಿಂದೆ 2025ರ ಫೆಬ್ರವರಿಯಲ್ಲಿ ಮೋದಿ ಅವರು ಅಮೆರಿಕಕ್ಕೆ ಭೇಟಿ ನೀಡಿದಾಗ ಟ್ರಂಪ್ ಅವರನ್ನು ಭೇಟಿಯಾಗಿದ್ದರು.

ಜಿ7 ಶೃಂಗಸಭೆಯ ನೇಪಥ್ಯದಲ್ಲಿ ಭಾರತ, ಫ್ರಾನ್ಸ್, ಈಜಿಪ್ಟ್ ಸೇರಿದಂತೆ ಹಲವು ದೇಶಗಳ ನಾಯಕರ ಜತೆ ಟ್ರಂಪ್ ದ್ವಿಪಕ್ಷೀಯ ಮಾತುಕತೆ ನಡೆಸಲಿದ್ದಾರೆ ಎಂದು ಶ್ವೇತಭವನದ ಮೂಲಗಳು ತಿಳಿಸಿವೆ. ಭಾರತ-ಅಮೆರಿಕದ ನಡುವೆ ದ್ವಿಪಕ್ಷೀಯ ವ್ಯಾಪಾರ ಒಪ್ಪಂದ ಅಂತಿಮ ಘಟ್ಟದಲ್ಲಿರುವ ನಡುವೆಯೇ ಈ ಭೇಟಿಯು ಕುತೂಹಲ ಮೂಡಿಸಿದೆ.

ತನಿಖೆಗೆ ಅನುಮತಿ ನಿರಾಕರಿಸಲಾಗದು

ಬೆಂಗಳೂರು: ಜನಪ್ರತಿನಿಧಿಗಳಾದ ಶಾಸಕರನ್ನು ನೇಮಕ ಮಾಡುವ ಅಧಿಕಾರ ತಮಗಿಲ್ಲವೆಂಬ ಕಾರಣ ನೀಡಿ ವಿಧಾನಸಭಾಧ್ಯಕ್ಷರು ಶಾಸಕರ ವಿರುದ್ಧದ ಪ್ರಾಸಿಕ್ಯೂಷನ್ ಅನುಮತಿ ನಿರಾಕರಿಸಲು ಸಾಧ್ಯವಿಲ್ಲ ಎಂದು ಹೈಕೋರ್ಟ್ ಆದೇಶಿಸಿದೆ.

ಅಲ್ಲದೆ, ಸಂಸದರು, ಶಾಸಕರು ಸಾರ್ವಜನಿಕರ ಸೇವಕರೆಂದು ಸುಪ್ರೀಂಕೋರ್ಟ್ ತಿಳಿಸಿದ್ದು, ತನಿಖಾ ಸಂಸ್ಥೆಗಳು ಅಥವಾ ಖಾಸಗಿ ದೂರುದಾರರು ಆರೋಪಪಟ್ಟಿ ಸಲ್ಲಿಸುವ ಮುನ್ನ ಸದನದ ಸಭಾಧ್ಯಕ್ಷರು ಅಥವಾ ಸ್ಪೀಕರ್ ಅವರಿಂದ ಅನುಮತಿ ಪಡೆಯುವುದು ಕಡ್ಡಾಯವಾಗಿದೆ ಎಂದು ತಿಳಿಸಿದೆ.

ಬಿಜೆಪಿ ಸೇರಲು ಜೆಡಿಎಸ್ ಪಕ್ಷದ ಶಾಸಕರಿಗೆ ಹಣದ ಆಮಿಷವೊಡ್ಡಿದ ಆರೋಪ ಸಂಬಂಧ ಶಾಸಕರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನಿರಾಕರಿಸಿದ್ದ ಸ್ಪೀಕರ್ ಕಚೇರಿಯ ಕ್ರಮ ಪ್ರಶ್ನಿಸಿ ಪ್ರಕರಣದ ಖಾಸಗಿ ದೂರುದಾರ ಹಾಗೂ ಸಾಮಾಜಿಕ ಹೋರಾಟಗಾರ ಟಿ.ಜೆ.ಅಬ್ರಹಾಂ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಎಸ್.ಸುನಿಲ್‌ದತ್ ಯಾದವ್ ಅವರಿದ್ದ ಏಕಸದಸ್ಯ ಪೀಠ, ಸ್ಪೀಕರ್ ಕಚೇರಿಯ ಹಿಂಬರಹವನ್ನು ರದ್ದುಪಡಿಸಿದೆ. ವಿವರ»05

ವಿಜಯ ಕರ್ನಾಟಕ

ಮಕ್ಕಳ ಕಥೆಗಳಿಗೆ ಆಹ್ವಾನ

ವಿಜಯ ಕರ್ನಾಟಕ
ವೀರಲೋಕ
ದೀಪಾವಳಿ ಕಥಾಸ್ಪರ್ಧೆ

ಒಂದಾನೊಂದು ಕಾಲದಲ್ಲಿ ಒಬ್ಬ ರಾಜ ಇದ್ದ... ಹೀಗೆಂದು ಅಜ್ಜನೋ ಅಜ್ಜಿಯೋ ಕಥೆ ಹೇಳಲು ಆರಂಭಿಸಿದರೆ ಆ ಕಥೆಯಲ್ಲೇ ಮುಳುಗಿ ಹೋಗುವಂತಾಗುತ್ತಿತ್ತಲ್ಲ, ಅಷ್ಟೇ ಚೆಂದಕೆ ಮಕ್ಕಳಿಗಾಗಿ ಕಥೆ ಬರೆಯಲು ನಿಮಗೆ ಬರುತ್ತದಾ? ಹಾಗಿದ್ದರೆ ಈ ಬಾರಿಯ ದೀಪಾವಳಿ ಕಥಾಸ್ಪರ್ಧೆಗೆ ಮಕ್ಕಳ ಕಥೆಯೊಂದನ್ನು ಬರೆದು ಕಳುಹಿಸಿ. ಕಪ್ಪೆಗೆ ಮುತ್ತು ಕೊಟ್ಟಾಗ ರಾಜಕುಮಾರನಾದ ಕಥೆ, ಏಳು ಸುತ್ತಿನ ಕೋಟೆಯೊಳಗಿನ ರಾಜಕುಮಾರಿಯ ಕಥೆ, ನಮ್ಮನೆಯ ಪುಟ್ಟ ನೆರೆಮನೆಗೆ ಹೋದಂತೆ ಅನ್ಯಗ್ರಹಕ್ಕೆ ಹೋಗಿಬಂದ ಸೈನ್ಸ್ ಫಿಕ್ಷನ್, ಉತ್ತರದ ಧ್ರುವದಲ್ಲಿ ಮಕ್ಕಳು ಮಾಡಿದ ಸಾಹಸದ ಕಥೆ... ಹೀಗೆ ಮಕ್ಕಳಿಗಾಗಿ ಎಷ್ಟೊಂದು ಬಗೆಯಲ್ಲಿ ಅದ್ಭುತ ರಮ್ಯ ಕಥೆಗಳನ್ನು ಹೇಳಬಹುದಲ್ಲ... ನೀವೂ ಇಂಥ ಕಥೆ ಬರೆಯಬಲ್ಲಿರಾದರೆ 600 ಶಬ್ದಗಳ ಒಳಗಾಗಿ ಬರೆದು ಮೇಲ್ ಮಾಡಿ. ಆರು ಅತ್ಯುತ್ತಮ ಕಥೆಗಳಿಗೆ ಬಹುಮಾನವಿದೆ. ಸ್ಪರ್ಧೆಗೆ ಬಂದ ಕಥೆಗಳಲ್ಲಿ ಆಯ್ದವನ್ನು ಪುಸ್ತಕರೂಪದಲ್ಲಿ ಪ್ರಕಟಿಸಲಾಗುವುದು.

ಬಹುಮಾನ ವಿವರ

ಪ್ರಥಮ ಬಹುಮಾನ: ರೂ.10,000
ದ್ವಿತೀಯ ಬಹುಮಾನ: ರೂ.7,000
ತೃತೀಯ ಬಹುಮಾನ: ರೂ.5,000
ಹಾಗೂ
ಮೆಚ್ಚುಗೆ ಬಹುಮಾನ:
ನಾಲ್ಕು ಕಥೆಗಳಿಗೆ ತಲಾ ರೂ. 2000/-

ಕಥೆ ಕಳುಹಿಸಲು ಕೊನೆಯ ದಿನಾಂಕ: ಜುಲೈ 30, 2026

ನಿಮ್ಮ ಕಥೆಗಳನ್ನು ಇಮೇಲ್ ಮಾಡಿ:
vkdeepavali@gmail.com

ಸಮಸ್ಯೆ ಇದ್ದಲ್ಲೇ ಸಭೆ ಮಾಡಿ, ಪರಿಹಾರ ಕೊಡಿ

ಸಚಿವರು-ಶಾಸಕರು, ಅಧಿಕಾರಿಗಳಿಗೆ ಡಿಕೆಶಿ ಸೂಚನೆ | ಟೀಂ ಕರ್ನಾಟಕವಾಗಿ ಜನಸೇವೆ ಮಾಡೋಣ

■ **ವಿಕ ಸುದ್ದಿಲೋಕ** ಬೆಂಗಳೂರು

ಆಡಳಿತ ಯಂತ್ರವನ್ನು ಚುರುಕುಗೊಳಿಸುವ ಜತೆಗೆ ಜನರ ಸಮಸ್ಯೆಗೆ ಸ್ಥಳೀಯವಾಗಿಯೇ ಪರಿಹಾರ, ಸ್ಪಂದನೆ ಸಿಗುವ ವ್ಯವಸ್ಥೆ ಕಲ್ಪಿಸುವ ನಿಟ್ಟಿನಲ್ಲಿ ನೂತನ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಎಲ್ಲ ಉಸ್ತುವಾರಿ ಸಚಿವರು ತಮ್ಮ ವ್ಯಾಪ್ತಿಯ ಪ್ರತಿ ತಾಲೂಕಿನಲ್ಲಿ ಜನಸಂಪರ್ಕ ಸಭೆ ನಡೆಸಬೇಕೆಂದು ಸೂಚಿಸಿದ್ದಾರೆ.

ಶಾಸಕರು ಸಹ ಕಡ್ಡಾಯವಾಗಿ ಹೋಬಳಿ, ಪಂಚಾಯಿತಿ ಮಟ್ಟದಲ್ಲಿ ಜನ ಸಂಪರ್ಕ ಸಭೆ ನಡೆಸಬೇಕು. ಪೂರಕವಾಗಿ ಅಧಿಕಾರಿಗಳು ಸ್ಪಂದಿಸಬೇಕು. ಆಗ ಮಾತ್ರ ಜನರು ಸಮಸ್ಯೆ ಹೊತ್ತು ಜಿಲ್ಲಾ ಕೇಂದ್ರ, ಬೆಂಗಳೂರಿಗೆ ಬರುವುದು ತಪ್ಪಲಿದೆ ಎಂದು ಸಂಪುಟ ಸಹೋದ್ಯೋಗಿಗಳು, ಶಾಸಕರು ಹಾಗೂ ಅಧಿಕಾರಿಗಳಿಗೆ ಮನವರಿಕೆ ಮಾಡಿಕೊಡುವ ಪ್ರಯತ್ನ ಮಾಡಿದ್ದಾರೆ.

ವಿಧಾನಸೌಧದಲ್ಲಿ ಶನಿವಾರ ಎಲ್ಲ ಡಿಸಿ, ಎಸ್‌ಪಿ, ಜಿಪಂ ಸಿಇಒ ಹಾಗೂ ಡಿಎಫ್‌ಒಗಳೊಂದಿಗೆ ಸುದೀರ್ಘವಾಗಿ ಸಭೆ ನಡೆಸಿ ಅವರು ಸುಗಮ ಹಾಗೂ ಪರಿಣಾಮಕಾರಿ ಆಡಳಿತ ದೃಷ್ಟಿಯಿಂದ ಸೂಚನೆ, ನಿರ್ದೇಶನಗಳನ್ನು ನೀಡಿದರು. ನಂತರ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

''ಜನ ನಮ್ಮ ಮೇಲೆ ಬಹಳ ನಿರೀಕ್ಷೆ ಇಟ್ಟುಕೊಂಡಿದ್ದು, ಸಮಸ್ಯೆ ಹೊತ್ತು ನಮ್ಮ ಬಳಿಗೆ ಬರುತ್ತಾರೆ. ಸಮಸ್ಯೆ ಹೊತ್ತು ಬಂದವರಿಗೆ ಅಧಿಕಾರಿಗಳು ಸಕಾರಾತ್ಮಕವಾಗಿ ಸ್ಪಂದಿಸಿ ಬಗೆಹರಿಸಬೇಕೆಂದು ಸೂಚಿಸಿದ್ದೇನೆ. ಎಲ್ಲ ಅಧಿಕಾರಿಗಳು 10 ಗಂಟೆಗೆ ಕಚೇರಿಯಲ್ಲಿ ಹಾಜರಿರಬೇಕು. ಬೆರಳಚ್ಚು ಹಾಜರಾತಿ ಹಾಕುತ್ತಿದ್ದಂತೆ ಲೊಕೇಷನ್ ಸಹಿತ ಮಾಹಿತಿ ಕೇಂದ್ರ ಕಚೇರಿಗೆ ತಲುಪಲಿದ್ದು, ಎಲ್ಲವೂ ಮೇಲ್ವಿಚಾರಣೆಯಾಗಲಿದೆ. ಎಲ್ಲ ಅಧಿಕಾರಿಗಳು ತಮ್ಮ ಕಾರ್ಯಸ್ಥಳದಲ್ಲಿ ಕಡ್ಡಾಯವಾಗಿ ಇರಬೇಕು. ತಮ್ಮ ಕಚೇರಿ, ಮನೆ ವಿಳಾಸ, ಸಂಪರ್ಕ ಸಂಖ್ಯೆಗಳ ವಿವರವನ್ನು ಸಾರ್ವಜನಿಕರೊಂದಿಗೆ ಹಂಚಿಕೊಳ್ಳಲು ಸೂಚಿಸಲಾಗಿದೆ,'' ಎಂದು ವಿವರಿಸಿದರು.

ಸದ್ಯದಲ್ಲೇ ಹೊಸ ಸಿಎಸ್‌ಆರ್ ನೀತಿ

''ಗ್ರಾಮೀಣ ಪ್ರದೇಶದಲ್ಲಿ ಸರಕಾರಿ ಶಾಲೆಗಳಲ್ಲೂ ಖಾಸಗಿ ಶಾಲೆಯಲ್ಲಿ ಸಿಗುವಂತಹ ಗುಣಮಟ್ಟದ ಶಿಕ್ಷಣ ವ್ಯವಸ್ಥೆ ಕಲ್ಪಿಸಲು ಹೊಸ ಸಿಎಸ್‌ಆರ್ ನೀತಿ ರೂಪಿಸಲಾಗುವುದು. ಸರಕಾರಿ ಶಾಲೆಗಳ ದತ್ತು, ಕಟ್ಟಡ ನಿರ್ಮಾಣ ಸೇರಿದಂತೆ ಸಿಎಸ್‌ಆರ್ ಶಾಲೆಗಳನ್ನು ಆರಂಭಿಸಲಾಗುವುದು,'' ಎಂದು ಹೇಳಿದರು.

ಯುವ ಯುಗ

''ದೇಶದಲ್ಲೇ ಮೊದಲ ಬಾರಿಗೆ ಖಾಸಗಿ ಕಂಪನಿಗಳಲ್ಲಿ ಉದ್ಯೋಗ ಬಯಸುವವರು ಹಾಗೂ ಉದ್ಯಮಿಗಳನ್ನು ಒಂದೇ ವೇದಿಕೆಗೆ ತಂದು ಉದ್ಯೋಗ ಕಲ್ಪಿಸುವ ವ್ಯವಸ್ಥೆ ತರಲಾಗುವುದು. ರಾಜ್ಯಾದ್ಯಂತ 10,000 ಭಾರತ್ ಜೋಡೊ ಯುವಕ ಸಂಘ ರಚಿಸಿ 16ರಿಂದ 35 ಇಲ್ಲವೇ 40 ವರ್ಷದವರೆಗಿನವರು ಒಟ್ಟಾಗಿ ಸೇರಿ ಕ್ರೀಡೆ, ನೃತ್ಯ, ಸಂಗೀತ, ಇತರೆ ಚಟುವಟಿಕೆಯಲ್ಲಿ ತೊಡಗಿಸಿಕೊಂಡು ನಾಯಕತ್ವ ಗುಣ, ಪ್ರತಿಭೆ ಬೆಳೆಸಿಕೊಳ್ಳಲು ಉತ್ತೇಜಿಸಲಾಗುವುದು. ಇದಕ್ಕಾಗಿ ಪ್ರತಿ ಪಂಚಾಯಿತಿಗೆ 10 ಲಕ್ಷ ರೂ. ನೆರವು ನೀಡಲಾಗುವುದು. ಸದ್ಯದಲ್ಲಿ ಸೂಕ್ತ ಮಾರ್ಗಸೂಚಿ ಹೊರಡಿಸಲಾಗುವುದು,'' ಎಂದು ತಿಳಿಸಿದರು.

ಗೊಬ್ಬರ ಹಿತಮಿತ ಬಳಸಿ

ಜಾಗತಿಕ ಮಟ್ಟದಲ್ಲಿ ಯುದ್ಧದ ಪರಿಣಾಮ ರಸಗೊಬ್ಬರ ಪೂರೈಕೆಯಲ್ಲಿ ವ್ಯತ್ಯಯದ ಬಗ್ಗೆ ಪ್ರಧಾನಿಯವರು ಚರ್ಚಿಸಿದ್ದಾರೆ. ಹಾಗೆಯೇ ಯೂರಿಯಾಯುಕ್ತ ಗೊಬ್ಬರವನ್ನು ಹಿತಮಿತವಾಗಿ ಬಳಸುವ ಜತೆಗೆ ಸಾವಯವ ಗೊಬ್ಬರ ಬಳಕೆಗೆ ಉತ್ತೇಜಿಸುವಂತೆಯೂ ಸೂಚಿಸಿದ್ದಾರೆ. ಅದರಂತೆ ಕ್ರಮ ವಹಿಸಲಾಗುತ್ತಿದ್ದು, ರೈತರು ಸಹಕರಿಸಬೇಕು. ಮುಂಚಿತವಾಗಿಯೇ ದಾಸ್ತಾನು ಮಾಡದೆ ಅಗ್ಯತ್ಯವಿರುವಷ್ಟನ್ನು ಪಡೆಯಬೇಕು ಎಂದು ಡಿ.ಕೆ.ಶಿವಕುಮಾರ್ ಮನವಿ ಮಾಡಿದರು.

ನಾನೇ ತಪ್ಪು ಮಾಹಿತಿ ನೀಡಿ ಇಂತಹ ಕೆಲಸ ಮಾಡಿ ಎಂದರೆ ನನ್ನ ಮಾತನ್ನು ಪಾಲಿಸಬೇಡಿ. ನಮ್ಮ ಸಚಿವರು ಸಹ ಯಾವುದೇ ತಪ್ಪು ಮಾಡಲು ಬಿಡಬಾರದು. ಶಾಸಕರು ಒತ್ತಡ ತಂದರೆ ನನ್ನ ಗಮನಕ್ಕೆ ತನ್ನಿ. ಡಿಸಿ, ಎಸ್‌ಪಿಗಳು ನೇರವಾಗಿ ನನ್ನನ್ನು ಸಂಪರ್ಕಿಸಬಹುದು. ಯಾವುದೇ ಸಚಿವರು, ಪ್ರಭಾವಿಗಳು ಕಾನೂನಿಗೆ ವಿರುದ್ಧವಾದ ಕೆಲಸ ಮಾಡಿ ಎಂದು ಒತ್ತಡ ಹೇರಿದರೂ ನೀವು ಮಾಡಬಾರದು. ಅಧಿಕಾರಿಗಳೇ ಕಾವಲಾಗಿ ಕಾಯಬೇಕು. ನಮ್ಮ ಸರಕಾರಕ್ಕೆ ಕೆಟ್ಟ ಹೆಸರು ಬರದಂತೆ ಎಚ್ಚರ ವಹಿಸುವಂತೆಯೂ ಅಧಿಕಾರಿಗಳಿಗೆ ಸೂಚಿಸಿದ್ದೇನೆ. ಒಮ್ಮೆಗೆ ಸಂಪೂರ್ಣವಾಗಿ ಲಂಚ ಹಾವಳಿ ನಿಲ್ಲಿಸುವುದಾಗಿ ಹೇಳುವುದಿಲ್ಲ, ಆದರೆ ಸಂಪೂರ್ಣ ತಡೆಯಲು ಪ್ರಯತ್ನ ಮಾಡುತ್ತೇನೆ. ಕಮಿಷನ್ ದಂಧೆ ಇದ್ದರೆ ಅದನ್ನು ಶೂನ್ಯ ಪರ್ಸೆಂಟ್‌ಗೆ ಇಳಿಸಲಾಗುವುದು.

-ಡಿ.ಕೆ.ಶಿವಕುಮಾರ್ ಸಿಎಂ

ಸಿಎಂ ಸೂಚನೆ

- ಶೈಕ್ಷಣಿಕ ವರ್ಷ ಆರಂಭವಾಗಿದ್ದು ಪ್ರತಿಯೊಬ್ಬ ವಿದ್ಯಾರ್ಥಿಯನ್ನು ಶಾಲೆಗೆ ಕರೆತರುವ ಕೆಲಸ ಆಗಬೇಕು. ಸಮವಸ್ತ್ರ, ಪಠ್ಯ, ಶೂಗಳನ್ನು ತಿಂಗಳಲ್ಲಿ ಕಡ್ಡಾಯವಾಗಿ ತಲುಪಿಸಬೇಕು
- ಮುಂಗಾರು ಋತುಮಾನ ಆರಂಭವಾಗಿದ್ದು, ಬಿತ್ತನೆ ಬೀಜ, ರಸಗೊಬ್ಬರ ವಿತರಣೆಗೆ ಕ್ರಮ ವಹಿಸಬೇಕು
- ಜಾಗತಿಕ ತಾಪಮಾನ, ಎಲ್‌ನಿನೋದಿಂದ ತೊಂದರೆ ಉಂಟಾಗುವ ಮುನ್ಸೂಚನೆ ಇದೆ. ಮಳೆ ಕೊರತೆ ಜತೆಗೆ ಕರಾವಳಿಯಲ್ಲಿ ನೆರೆ ಹಾವಳಿ ಕಾಡುವ ಮಾಹಿತಿ ಇದೆ. ಹಾಗಾಗಿ ವಿಪತ್ತು ನಿರ್ವಹಣಾ ವಿಭಾಗ, ಅಗ್ನಿಶಾಮಕ ಇಲಾಖೆ, ಕಂದಾಯ ಇಲಾಖೆ ಸೇರಿದಂತೆ ಸಂಬಂಧಪಟ್ಟ ಇಲಾಖೆಗಳು ಸೂಕ್ತ ಕಾರ್ಯ ಯೋಜನೆಯೊಂದಿಗೆ ಪರಿಸ್ಥಿತಿ ನಿರ್ವಹಣೆಗೆ ಸಜ್ಜಾಗಿರಬೇಕು
- ಶೇ.30ರಷ್ಟು ಮಳೆ ಕೊರತೆ ಮುನ್ಸೂಚನೆ ಇದೆ. ಹಾಗಾಗಿ ಗೋವುಗಳಿಗೆ ಮೇವು ಸೇರಿದಂತೆ ಇತರೆ ಮುನ್ನೆಚ್ಚರಿಕೆ ಕ್ರಮ ವಹಿಸಬೇಕು
- ಪ್ರತಿ ಹಾಸ್ಟೆಲ್‌ಗಳಿಗೆ ಅಧಿಕಾರಿಗಳು ಜನಪ್ರತಿನಿಧಿಗಳೊಂದಿಗೆ ಭೇಟಿ ನೀಡಿ ಅಲ್ಲಿಯೇ ಊಟ ಮಾಡಿ ಗುಣಮಟ್ಟ ವ್ಯವಸ್ಥೆ ಪರಿಶೀಲಿಸಬೇಕು
- ಒಂದೇ ಜಾತಿಯ ಅಧಿಕಾರಿಗಳು ಒಂದೇ ಕಡೆ ಕೆಲಸ ಮಾಡಲು ಅವಕಾಶವಿಲ್ಲ. ಪ್ರತಿ ಠಾಣೆಯಲ್ಲಿ 5-6 ಮಂದಿ ತಂಡ ರಚಿಸಿಕೊಂಡು ರೌಡಿಗಳನ್ನು ಮಟ್ಟ ಹಾಕಬೇಕು
- ಸೈಬರ್ ಅಪರಾಧ ಕೃತ್ಯಗಳ ತಡೆಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು

ಮತದಾನದ ಹಕ್ಕು ಇಲ್ಲದಿದ್ದರೆ ಸೌಲಭ್ಯ ಇಲ್ಲ

ರಾಜ್ಯದಲ್ಲಿ ಸದ್ಯದಲ್ಲೇ ಎಸ್‌ಐಆರ್ ಪ್ರಕ್ರಿಯೆ ಆರಂಭವಾಗಲಿದ್ದು, ಎಲ್ಲರಿಗೂ ಮತದಾನದ ಹಕ್ಕು ಸಿಗಬೇಕು. ಹಾಗಾಗಿ ಎಲ್ಲ ಜಿಲ್ಲಾ ಉಸ್ತುವಾರಿ ಸಚಿವರು, ಡಿಸಿಗಳು ಕಡ್ಡಾಯವಾಗಿ ಪ್ರತಿ ತಾಲೂಕಿಗೆ ಭೇಟಿ ನೀಡಿ ಬಿಎಲ್‌ಒಗಳಿಗೆ ಮಾರ್ಗದರ್ಶನ ನೀಡಬೇಕು ಎಂದು ಸಿಎಂ ಡಿಕೆ ಶಿವಕುಮಾರ್ ಸಲಹೆ ನೀಡಿದರು.

''ಯಾವುದೇ ಪಕ್ಷದ ಬಿಎಲ್‌ಎ ಇದ್ದರೂ ಅವರೊಂದಿಗೆ ಸಂಪರ್ಕ ಸಾಧಿಸಿ ಮತದಾನದ ಹಕ್ಕು ಉಳಿಸಲು ಕ್ರಮ ವಹಿಸಬೇಕು. ಡಿ.ಕೆ.ಶಿವಕುಮಾರ್ ಆಗಲಿ, ಯಾರೇ ಸಚಿವರಾಗಲಿ, ಯಾರೇ ಆಗಲಿ ತಮ್ಮ ಮತ ಉಳಿಸಿಕೊಳ್ಳಬೇಕೆಂದರೆ ಕಡ್ಡಾಯವಾಗಿ ಬಿಎಲ್‌ಒ ನೀಡುವ ಅರ್ಜಿ ಭರ್ತಿ ಮಾಡಿ ಕೊಡಬೇಕು ಆಗಷ್ಟೇ ಮತದಾನದ ಹಕ್ಕು ಉಳಿಯಲಿದೆ. ಇಲ್ಲದಿದ್ದರೆ ಅವರ ಮತ ಉಳಿಯದು. ಬಿಎಲ್‌ಒಗಳು ಮೂರು ಬಾರಿ ಬರಲಿದ್ದು, ಸರಿಯಾದ ದಾಖಲೆ ಸಲ್ಲಿಸಿ ಸಹಿ ಹಾಕಬೇಕು. ಈ ಬಗ್ಗೆ ವ್ಯಾಪಕ ಜಾಗೃತಿ ಮೂಡಿಸಿ ಅರ್ಹರಿಗೆ ವಾಸ ದೃಢೀಕರಣ ಪತ್ರ ವಿತರಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ,'' ಎಂದರು.

''ಮುಂದಿನ ದಿನಗಳಲ್ಲಿ ಮತದಾನದ ಹಕ್ಕು ಇಲ್ಲ ಎಂದರೆ ಗೃಹಲಕ್ಷ್ಮಿ ಯೋಜನೆ ನೆರವು, ಪಿಂಚಣಿ ಸೌಲಭ್ಯಗಳು, ಸರಕಾರಿ ಸೌಲಭ್ಯ ಪಡೆಯುವುದು ಕಷ್ಟವಾಗಲಿದೆ. ಹಾಗಾಗಿ ಅರ್ಹರೆಲ್ಲರೂ ಕಡ್ಡಾಯವಾಗಿ ತಮ್ಮ ಮತದಾನದ ಹಕ್ಕು ಉಳಿಸಿಕೊಳ್ಳಬೇಕು ಎಂದು ಜಾಗೃತಿ ಮೂಡಿಸುವಂತೆ ಸೂಚನೆ ನೀಡಲಾಗಿದೆ,'' ಎಂದರು.

ಖಡಕ್ ಸೂಚನೆ

ಮೀಟರ್ ಬಡ್ಡಿ ದಂಧೆ ಮಟ್ಟ ಹಾಕಿ

ಹಣ ಡಬ್ಲಿಂಗ್, ದುಬಾರಿ ಬಡ್ಡಿ ನೀಡುವ ನೆಪದಲ್ಲಿ ವಂಚಿಸುವುದು ಹೆಚ್ಚಾಗಿದ್ದು, ಈ ಬಗ್ಗೆ ಗುಪ್ತಚರ ದಳ, ಪೊಲೀಸರು ಹಾಗೂ ಕಂದಾಯ ಇಲಾಖೆ ಅಧಿಕಾರಿಗಳು ಜಂಟಿಯಾಗಿ ಕಾರ್ಯ ನಿರ್ವಹಿಸಿ ನಿಯಂತ್ರಿಸಬೇಕು. ಪ್ರಕರಣಗಳನ್ನು ದಾಖಲಿಸಿ ಮಟ್ಟ ಹಾಕಬೇಕು. ಜಾಗೃತಿ ಮೂಡಿಸಬೇಕು.

ಮೊಬಿಲಿಟಿ ಪ್ಲಾನ್ ರೂಪಿಸಿ

ಪ್ರತಿ ಜಿಲ್ಲೆ, ತಾಲೂಕಿನಲ್ಲೂ ಈಗಿನಿಂದಲೇ ರಿಂಗ್ ರಸ್ತೆಗೆ ಯೋಜನೆ ರೂಪಿಸಬೇಕು. ಒಂದೇ ವರ್ಷದಲ್ಲಿ ಅದನ್ನು ಕಾರ್ಯಗತಗೊಳಿಸಲು ಸಾಧ್ಯವಾಗದಿದ್ದರೂ ಮುಂದೆ ನಗರ, ಪಟ್ಟಣ, ಜಿಲ್ಲಾ ಕೇಂದ್ರಗಳಲ್ಲಿ ದಟ್ಟಣೆ ತಪ್ಪಿಸಲು, ಆಸ್ತಿಗಳ ಮೌಲ್ಯ ಹೆಚ್ಚಳವಾಗಲು ನೆರವಾಗಲಿದೆ. ಹಾಗಾಗಿ ಯೋಜನಾ ಪ್ರಾಧಿಕಾರಗಳು ರಿಂಗ್ ರಸ್ತೆಗಳ ನಿರ್ಮಾಣಕ್ಕೆ ಪೂರಕ ನಕ್ಷೆ, ಯೋಜನೆ ರೂಪಿಸಬೇಕು.

ಭ್ರಷ್ಟಾಚಾರ ಮುಕ್ತ ಕರ್ನಾಟಕ ನಿರ್ಮಾಣ

ಭ್ರಷ್ಟಾಚಾರ ಮುಕ್ತ ಕರ್ನಾಟಕ ಮಾಡಲಾಗುವುದು. ಯಾರೊಬ್ಬರು ಕೆಲಸ ಕಾರ್ಯಗಳಿಗೆ 10 ರೂ. ಕೊಡುವಂತಿಲ್ಲ. ಜಿಲ್ಲೆ, ತಾಲೂಕು, ಪಂಚಾಯಿತಿ ಹಂತದಲ್ಲಿ ಕಚೇರಿಗಳಲ್ಲಿ ದೊಡ್ಡ ಫಲಕಗಳಲ್ಲಿ ಸಂಪರ್ಕ ಮೊಬೈಲ್ ಸಂಖ್ಯೆ ಪ್ರದರ್ಶಿಸಲಾಗುವುದು. ಯಾರಾದರೂ ಲಂಚ ಕೇಳಿದರೆ ಆ ಸಂಖ್ಯೆಗೆ ಕರೆ ಮಾಡಬೇಕು ಎಂದು ಸಿಎಂ ಮನವಿ ಮಾಡಿದರು.

ರಜಾ ದಿನವೂ ಏಳು ತಾಸು ಸುದೀರ್ಘ ಸಭೆ

ಜಿಲ್ಲಾಡಳಿತಗಳನ್ನು ಕ್ರಿಯಾಶೀಲಗೊಳಿಸಲು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಸುಮಾರು 7 ತಾಸುಗಳ ಕಾಲ ಸುದೀರ್ಘ ಸಭೆ ನಡೆಸಿದರು. 2ನೇ ಶನಿವಾರದ ರಜಾದಿನವಾದರೂ ಇಡೀ ದಿನ ಸಭೆ ನಡೆಸಿದ ಮುಖ್ಯಮಂತ್ರಿಗಳು, ಸ್ವಚ್ಛ, ಪಾರದರ್ಶಕ ಮತ್ತು ದಕ್ಷ ಆಡಳಿತದ ಭರವಸೆಯಂತೆ ಸರಕಾರವನ್ನು ಮುನ್ನಡೆಸಲು ತಮ್ಮೊಟ್ಟಿಗೆ ಕೈಜೋಡಿಸುವಂತೆ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಟೀಂನಲ್ಲಿ ಕೆಲಸ ಮಾಡೋಣ

ಸಭೆಯ ಆರಂಭದಲ್ಲೇ ತಮ್ಮ ಗೊತ್ತು-ಗುರಿಗಳ ಬಗ್ಗೆ ಅಧಿಕಾರಿಗಳನ್ನು ಉದ್ದೇಶಿಸಿ ಮಾತನಾಡಿದ ಡಿ.ಕೆ.ಶಿವಕುಮಾರ್, ''ನನಗೆ ವೈಯಕ್ತಿಕ ನಿರೀಕ್ಷೆಗಳಿಲ್ಲ, ನಾವೆಲ್ಲರೂ ಒಂದು ಟೀಂ ಆಗಿ ಕೆಲಸ ಮಾಡಬೇಕು. ಪಾರದರ್ಶಕ ಆಡಳಿತ ನೀಡುವುದು ನನ್ನ ಮತ್ತು ಸರಕಾರದ ಆದ್ಯತೆ. ಅಧಿಕಾರಿಗಳು ಯಾವುದೇ ಒತ್ತಡಕ್ಕೆ ಮಣಿಯದೆ ಪಾರದರ್ಶಕವಾಗಿ ಕೆಲಸ ಮಾಡಬೇಕು'' ಎಂದು ನಿರ್ದೇಶನ ನೀಡಿದರು.

ಲಂಚ ತಡೆಗೆ ದೂರವಾಣಿ

''ಜಿಲ್ಲಾಡಳಿತ, ತಾಲೂಕು ಮತ್ತು ನಾಡ ಕಚೇರಿಗಳು ಸೇರಿದಂತೆ ಎಲ್ಲ ಸಾರ್ವಜನಿಕರ ಕೆಲಸಕ್ಕೆ ಲಂಚ ಕೇಳಿದರೆ ಸಹಿಸುವುದಿಲ್ಲ. ಭ್ರಷ್ಟಾಚಾರ ಮುಕ್ತ ಆಡಳಿತ ನನ್ನ ಆದ್ಯತೆ. ಪ್ರತಿ ಸರಕಾರಿ ಕಚೇರಿಯಲ್ಲೂ ಲಂಚ ಕೇಳಿದರೆ ಜನರು ದೂರು ಕೊಡಲು ಫೋನ್ ನಂಬರ್ ಸಹಿತ ಫಲಕಗಳನ್ನು ಹಾಕಬೇಕು'' ಎಂದು ಮುಖ್ಯಮಂತ್ರಿಗಳು ಸಭೆಯಲ್ಲಿ ಸ್ಪಷ್ಟ ಸೂಚನೆ ನೀಡಿದರು.

ಶೀಘ್ರ ಜಿಲ್ಲಾ ಪ್ರವಾಸ

ರಾಜ್ಯದಲ್ಲಿ ಎಲ್ಲೆಲ್ಲಿ ಮಳೆ ಅಭಾವ, ಪ್ರವಾಹ ಸ್ಥಿತಿ ಎಲ್ಲಿದೆ, ಪ್ರಕೃತಿ ವಿಕೋಪ ಎದುರಿಸಲು ಏನೆಲ್ಲಾ ಪೂರ್ವಸಿದ್ಧತೆ ಆಗಿದೆ ಎಂಬ ಕುರಿತು ಜಿಲ್ಲಾಧಿಕಾರಿಗಳಿಂದ ಮುಖ್ಯಮಂತ್ರಿಗಳು ವಿವರಣೆ ಪಡೆದುಕೊಂಡರು. ಸದ್ಯದಲ್ಲೇ ತಾವು ಜಿಲ್ಲಾ ಪ್ರವಾಸ ಕೈಗೊಂಡು, ಸಮಸ್ಯೆ ಆಲಿಸಲು ನಾನು ಖುದ್ದು ಎಲ್ಲ ಜಿಲ್ಲೆಗಳಿಗೆ ಬರುತ್ತೇನೆ ಎಂದು ತಿಳಿಸಿದರು.

ಇಡೀ ಕ್ಯಾಬಿನೆಟ್ ಪ್ರೆಸೆಂಟ್

ಮುಖ್ಯಮಂತ್ರಿಗಳು ಜಿಲ್ಲಾಡಳಿತಗಳೊಂದಿಗೆ ನಡೆಸಿದ ಈ ಮೊದಲ ಸಭೆಯಲ್ಲಿ ಬಹುತೇಕ ಎಲ್ಲ ಸಚಿವರು ಭಾಗವಹಿಸಿದ್ದರು. ದಿಲ್ಲಿಯಿಂದ ವಾಪಸಾದ ಬಳಿಕ ಅನಾರೋಗ್ಯದ ಕಾರಣಕ್ಕೆ ಡಿಸಿಎಂ ಡಾ.ಜಿ.ಪರಮೇಶ್ವರ್ ಅವರು ಮನೆಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದು, ಸಭೆಗೆ ಗೈರಾದರು. ಸಚಿವರಾದ ಎಂ.ಬಿ.ಪಾಟೀಲ್, ರಾಮಲಿಂಗಾರೆಡ್ಡಿ, ಕೆ.ಜೆ. ಜಾರ್ಜ್, ಸತೀಶ್ ಜಾರಕಿಹೊಳಿ, ಕೃಷ್ಣ ಬೈರೇಗೌಡ, ಪ್ರಿಯಾಂಕ್ ಖರ್ಗೆ, ಯು.ಟಿ.ಖಾದರ್, ಡಾ.ಶರಣ ಪ್ರಕಾಶ್ ಪಾಟೀಲ್, ಕೆ.ಎಚ್.ಮುನಿಯಪ್ಪ, ಬೈರತಿ ಸುರೇಶ್, ಯತೀಂದ್ರ ಸಿದ್ದರಾಮಯ್ಯ ಹಾಗೂ ಈಶ್ವರ್ ಖಂಡ್ರೆ ಅವರು ಸಭೆಯಲ್ಲಿ ಭಾಗವಹಿಸಿದ್ದರು.

ರಾಜ್ಯಾಧ್ಯಕ್ಷರ ನೇಮಕ ಕುರಿತು ವರಿಷ್ಠರಿಂದಲೇ ತೀರ್ಮಾನ

ಮಂಗಳೂರು: ''ಬಿಜೆಪಿ ರಾಜ್ಯಾಧ್ಯಕ್ಷರ ಆಯ್ಕೆಯ ಅಂತಿಮ ತೀರ್ಮಾನವು ಪಕ್ಷದ ರಾಷ್ಟ್ರೀಯ ಅಧ್ಯಕ್ಷರ ವ್ಯಾಪ್ತಿಯ ವಿಷಯವಾಗಿದ್ದು, ಈ ಬಗ್ಗೆ ರಾಷ್ಟ್ರೀಯ ನಾಯಕರೇ ಕ್ರಮ ಕೈಗೊಳ್ಳಲಿದ್ದಾರೆ,'' ಎಂದು ರಾಜ್ಯಸಭಾ ಸದಸ್ಯ, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಡಾ.ರಾಧಾಮೋಹನ್ ದಾಸ್ ಅಗರ್ವಾಲ್ ಹೇಳಿದರು.

ಶನಿವಾರ ದಕ್ಷಿಣ ಕನ್ನಡ ಜಿಲ್ಲಾ ಬಿಜೆಪಿ ಆಯೋಜಿಸಿದ್ದ ಪ್ರಧಾನಿ ಮೋದಿಯವರ 12 ವರ್ಷದ ಸಂಕಲ್ಪ ಸಮಾವೇಶದ ಕಾರ್ಯಕ್ರಮಕ್ಕೆ ಮುನ್ನ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ''ಹಾಲಿ ರಾಜ್ಯಾಧ್ಯಕ್ಷರ ಅಧ್ಯಕ್ಷರ ಕಾರ್ಯಚಟುವಟಿಕೆಗಳನ್ನು ರಾಷ್ಟ್ರೀಯ ನಾಯಕತ್ವ ಪರಿಶೀಲಿಸಲಿದೆ,'' ಎಂದರು. ''ದಕ್ಷಿಣ ಭಾರತ ವ್ಯಾಪ್ತಿಯ ಕೇರಳ, ತಮಿಳುನಾಡು ಸೇರಿದಂತೆ ಹಲವು ರಾಜ್ಯಗಳಲ್ಲಿ ಪಕ್ಷದ ನೆಲೆ ಬಲಗೊಂಡಿದೆ. ಈ ಹಿಂದೆ ಅಸ್ತಿತ್ವವಿಲ್ಲದ ಪ್ರದೇಶಗಳಲ್ಲೂ ಬಿಜೆಪಿ ಪ್ರಭಾವ ವಿಸ್ತರಿಸಿದೆ. ಕರ್ನಾಟಕದಲ್ಲಿಯೂ ಮುಂದಿನ ಚುನಾವಣೆಯಲ್ಲಿ ಮತ್ತೊಮ್ಮೆ ಅಧಿಕಾರಕ್ಕೆ ಬರಲಿದೆ,''ಎಂದು ವಿಶ್ವಾಸ ವ್ಯಕ್ತಪಡಿಸಿದರು.

ADVERTORIAL

ಮಹಿಳೆಯರ ಪಾಲಿನ ನಾರಿ ಶಕ್ತಿ

ಲಕ್ಷ್ಮಿ ಅರುಣಾ ಜನಾರ್ದನ ರೆಡ್ಡಿ

ಬಳ್ಳಾರಿಯಲ್ಲಿ ನಾರಿಜೀವನ್ ಅರ್ಥಪೂರ್ಣ ಕಾರ್ಯಕ್ರಮ

1500ಕ್ಕೂ ಹೆಚ್ಚು ಮಹಿಳೆಯರಿಗೆ ಅನುಕೂಲ

ಬಳ್ಳಾರಿಯ ಅಭಿವೃದ್ಧಿ ಹಾದಿಯಲ್ಲಿ ಮತ್ತು ಮಹಿಳಾ ಸಬಲೀಕರಣದ ವಿಷಯದಲ್ಲಿ ಶ್ರೀಮತಿ ಗಾಲಿ ಲಕ್ಷ್ಮಿ ಅರುಣಾ ಜನಾರ್ದನ ರೆಡ್ಡಿ ಅವರ ಹೆಸರು ಈಗ ಒಂದು ಭರವಸೆಯ ಕಿರಣವಾಗಿ ಹೊರಹೊಮ್ಮಿದೆ. ರಾಜಕೀಯ ಏರಿಳಿತಗಳು ಅಥವಾ ಚುನಾವಣಾ ಫಲಿತಾಂಶಗಳು ಅವರ ಸಮಾಜಸೇವೆಯ ಸಂಕಲ್ಪಕ್ಕೆ ಎಂದಿಗೂ ಅಡ್ಡಿಯಾಗಿಲ್ಲ, ಬದಲಾಗಿ, ಜನರ ಸೇವೆಗಾಗಿ, ಅದರಲ್ಲೂ ವಿಶೇಷವಾಗಿ ಬಳ್ಳಾರಿಯ ಮಹಿಳೆಯರ ಬದುಕನ್ನು ಹಸನಾಗಿಸಲು ಅವರು ಕಂಡುಕೊಂಡ ದಾರಿ ನಿಜಕ್ಕೂ ಅನುಕರಣೀಯ.

ಪ್ರಧಾನಿ ನರೇಂದ್ರ ಮೋದಿಯವರ ನಾರಿ ಶಕ್ತಿ, ದೇಶದ ಶಕ್ತಿ ಎಂಬ ಆಶಯವನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಲಕ್ಷ್ಮಿ ಅರುಣಾ ಅವರು 'ನಾರಿ ಜೀವನ್' ಎಂಬ ಅರ್ಥಪೂರ್ಣ ಕಾರ್ಯಕ್ರಮವನ್ನು ರೂಪಿಸಿದ್ದಾರೆ. ತಮ್ಮ ನೇತೃತ್ವದ ವಿಶ್ವ ಭಾರತಿ ಕಲಾನಿಕೇತನ ಮತ್ತು ಶಿಕ್ಷಣ ಸಂಸ್ಥೆಯು 34 ವರ್ಷಗಳ ಸುದೀರ್ಘ ಪಯಣವನ್ನು ಪೂರೈಸಿರುವ ಈ ಸಂದರ್ಭದಲ್ಲಿ, ಅವರು ನಡೆಸುತ್ತಿರುವ ಈ ತರಬೇತಿ ಶಿಬಿರಗಳು ನೂರಾರು ಮಹಿಳೆಯರ ಪಾಲಿಗೆ ಆಶಾಕಿರಣವಾಗಿದೆ.

ಕಳೆದ ಮೂರು ಸೀಸನ್‌ಗಳಲ್ಲಿ ಸುಮಾರು 1500ಕ್ಕೂ ಹೆಚ್ಚು ಮಹಿಳೆಯರು ಈ ಶಿಬಿರದ ಪ್ರಯೋಜನ ಪಡೆದಿದ್ದಾರೆ. ಇಲ್ಲಿ ಮಹಿಳೆಯರಿಗೆ ಕೇವಲ ತರಬೇತಿ ನೀಡುವುದಷ್ಟೇ ಅಲ್ಲದೆ, ನಾನಾ ಕೌಶಲಗಳಲ್ಲಿ ಪರಿಣತಿ ನೀಡಲಾಗುತ್ತಿದೆ. ಈ ತರಬೇತಿಯ ಫಲವಾಗಿ, ಇಂದು ನೂರಾರು ಮಹಿಳೆಯರು ಸ್ವಂತ ಉದ್ಯೋಗಗಳನ್ನು ಪ್ರಾರಂಭಿಸಿ, ಆರ್ಥಿಕವಾಗಿ ಸ್ವಾವಲಂಬಿಗಳಾಗಿ ತಮ್ಮ ಸಂಸಾರವನ್ನು ನಡೆಸುತ್ತಿದ್ದಾರೆ. ಕೇವಲ ತರಬೇತಿ ಮಾತ್ರವಲ್ಲದೆ, ಕಲಿಯುವವರಲ್ಲಿ ಉತ್ಸಾಹವನ್ನು ಹೆಚ್ಚಿಸಲು ಪ್ರೋತ್ಸಾಹಕ ಬಹುಮಾನಗಳನ್ನು ನೀಡುತ್ತಿರುವುದು ವಿಶೇಷ.

ವಿಜೇತ ಮಹಿಳೆಯರಿಗೆ ಬಹುಮಾನ

ಸೀಸನ್ 3ರಲ್ಲಿ ವಿಜೇತರಾದ ಇಬ್ಬರು ಪ್ರತಿಭಾವಂತ ಮಹಿಳೆಯರಿಗೆ ತಲಾ 50,000, ದ್ವಿತೀಯ ಸ್ಥಾನ ಪಡೆದ ಇಬ್ಬರು ಮಹಿಳೆಯರಿಗೆ ತಲಾ 25,000, ಹಾಗೂ ತೃತೀಯ ಸ್ಥಾನ ಇಬ್ಬರು ಮಹಿಳೆಯರಿಗೆ ತಲಾ 12,500 ರೂಪಾಯಿಗಳ ನಗದು ಬಹುಮಾನ ಹಾಗೂ ಲಕ್ಕಿ ಡ್ರಾ ವಿಜೇತರಿಗೆ ಟಿವಿಎಸ್ ಆರ್ಬಿಟರ್ ಎಲೆಕ್ಟ್ರಿಕ್ ಸ್ಕೂಟರ್ ಉಡುಗೊರೆಯಾಗಿ ನೀಡುವ ಮೂಲಕ ಲಕ್ಷ್ಮಿ ಅರುಣಾ ಅವರು ಮಹಿಳೆಯರ ಸಾಧನೆಗೆ ಬೆನ್ನೆಲುಬಾಗಿ ನಿಂತಿದ್ದಾರೆ. ಕೌಶಲಾಭರಿತ ಮಹಿಳೆಯೇ ಸಶಕ್ತ ಮಹಿಳೆ ಎಂಬ ಸತ್ಯವನ್ನು ಅರಿತ ಲಕ್ಷ್ಮಿ ಅರುಣಾ ಅವರು, ನಿಸ್ವಾರ್ಥ ಸೇವೆಯ ಮೂಲಕ ಬಳ್ಳಾರಿಯಲ್ಲಿ ಹೊಸ ಕ್ರಾಂತಿಯನ್ನೇ ಮಾಡುತ್ತಿದ್ದಾರೆ. ಅವರ ಈ ಸೇವಾ ಕಾರ್ಯಗಳು ಮುಂಬರುವ ದಿನಗಳಲ್ಲಿ ಮತ್ತಷ್ಟು ಮಹಿಳೆಯರಿಗೆ ಬದುಕಿನ ಹೊಸ ದಾರಿಯನ್ನು ತೋರಿಸಲಿ ಎಂಬುದೇ ಎಲ್ಲರ ಆಶಯ.

ಬಿಡದಿ ಟೌನ್‌ಶಿಪ್: ಹಾಲಿ-ಮಾಜಿ ಸಿಎಂ ವಾಗ್ಬಾಣ

ಬೆಂಗಳೂರು: ಬಿಡದಿ ಟೌನ್‌ಶಿಪ್ ಯೋಜನೆ (ಗ್ರೇಟರ್ ಬೆಂಗಳೂರು ಇಂಟೆಗ್ರೇಟೆಡ್ ಟೌನ್‌ಶಿಪ್) ಭೂಸ್ವಾಧೀನಕ್ಕೆ ಸರಕಾರದ ಅಂತಿಮ ಅಧಿಸೂಚನೆ ಹೊರಬಿದ್ದಿರುವ ಬೆನ್ನಲ್ಲೇ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರ ನಡುವೆ ಸಂಘರ್ಷ ತೀವ್ರಗೊಂಡಿದೆ.

ಅಜ್ಜಯ್ಯ ಹೇಳಿದ್ರಾ ಎಂದು ಸಿಎಂಗೆ ಕುಮಾರಸ್ವಾಮಿ ಪ್ರಶ್ನೆ

ಬಿಡದಿ ಟೌನ್‌ಶಿಪ್ ಯೋಜನೆ ಭೂಸ್ವಾಧೀನಕ್ಕೆ ಅಧಿಸೂಚನೆ ಹೊರಡಿಸಿರುವ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ''ಈ ಟೌನ್‌ಶಿಪ್ ಲೂಟಿ ಸ್ಕೀಮ್ ಎಂಬುದರಲ್ಲಿ ಡೌಟೇ ಬೇಡ. ಎಲ್ಲದಕ್ಕೂ ಅಜ್ಜಯ್ಯನ ಬಳಿ ಹೋಗುತ್ತಾರೆ. ರೈತರನ್ನು ಒಕ್ಕಲೆಬಿಸಿ ಟೌನ್‌ಶಿಪ್ ಮಾಡು ಎಂದು ಅಜ್ಜಯ್ಯ (ಡಿಕೆಶಿ) ಹೇಳಿದ್ದಾರಾ?,'' ಎಂದು ಪ್ರಶ್ನಿಸಿದರು.

''ಬಿಡದಿ ಟೌನ್‌ಶಿಪ್ ನನ್ನ ಕನಸಿನ ಕೂಸು ನಿಜ. ಆದರೆ, ಅಂದಿನ ಟೌನ್‌ಶಿಪ್ ವಿಚಾರದಲ್ಲಿ ನನ್ನ ಉದ್ದೇಶವೇ ಬೇರೆ ಇತ್ತು.ಆದರೆ, ಈಗಿನವರ ಉದ್ದೇಶ ಬೇರೆಯದ್ದೇ ಇದೆ. ಭೂಮಿ ಬಿಟ್ಟುಕೊಡಲು ಒಪ್ಪದೆ 450 ದಿನದಿಂದ ಹೋರಾಟ ಮಾಡುತ್ತಿರುವವರ ಧ್ವನಿಯಾಗಿದ್ದೇವೆ. ಇದರಲ್ಲಿ ರಾಜಕಾರಣ ಇಲ್ಲ, ಸಂಪೂರ್ಣ ತೆಂಗಿನ ತೋಡಗಳಿವೆ. ನಾನು ಹೋರಾಟಗಾರ ರೈತರ ಜತೆಗಿರುತ್ತೇನೆ'' ಎಂದು ಹೇಳಿದರು.

''ಬೆಂಗಳೂರಿಗೆ ಮೂಲಸೌಕರ್ಯ ಕೊಡಲಾಗದ ಸರಕಾರ ಬಿಡದಿಯಲ್ಲಿ ಯಾವ ಮೂಲಸೌಕರ್ಯ ಕೊಡುತ್ತಾರೆ. ಭೂಸ್ವಾಧೀನಕ್ಕೆ ಹೊರಟಿರುವುದು ಭೂ ದಂಧೆ ನಡೆಸಲು ಅಲ್ಲವೇ? ಸಾವಿರಾರು ಕೋಟಿ ವ್ಯವಹಾರದ ಅಗ್ರಿಗೋಲ್ಡ್‌ನವರು ಆ ಭಾಗಕ್ಕೆ ನಿರಂತರ ಹೋಗಿಬರುತ್ತಿದ್ದಾರೆ. ಯಾರನ್ನೋ ಉದ್ಧಾರ ಮಾಡಲು ರೈತರನ್ನು ಬೀದಿ ಪಾಲು ಮಾಡುವುದು ಎಷ್ಟರ ಮಟ್ಟಿಗೆ ಸರಿ?'' ಎಂದು ಪ್ರಶ್ನಿಸಿದರು.

ಮೋದಿಯೇ ಮೆಚ್ಚಿದ್ದಾರೆ: ಸಿಎಂ

ವಿಧಾನಸೌಧದಲ್ಲಿ ಶನಿವಾರ ಡಿಸಿ, ಎಸ್‌ಪಿ, ಸಿಇಒಗಳ ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಡಿ.ಕೆ.ಶಿವಕುಮಾರ್, ''ದಿಲ್ಲಿಯಲ್ಲಿ ಮೊನ್ನೆ ಪ್ರಧಾನಿ ಮೋದಿ ಅವರನ್ನು ಭೇಟಿಯಾಗಿದ್ದೆ. ಬೆಂಗಳೂರಿನ ಒತ್ತಡ ತಗ್ಗಿಸಲು ಡಿಕೆ ಒಳ್ಳೆಯ ಕೆಲಸ ಮಾಡುತ್ತಿದ್ದೀರಿ. ನಾನು ಕೂಡ ಏಳೆಂಟು ಟೌನ್‌ಶಿಪ್ ಮಾಡಿದ್ದೆ ಎಂದು ಮೋದಿ ಅವರು ಮೆಚ್ಚಿದ್ದರು. ಅದನ್ನು ಗಮನದಲ್ಲಿಟ್ಟುಕೊಂಡೇ ನಾನು ಕೆಲಸ ಮಾಡುತ್ತಿದ್ದೇನೆ,'' ಎಂದು ಕುಮಾರಸ್ವಾಮಿ ಅವರಿಗೆ ಟಾಂಗ್ ನೀಡಿದರು. ಟೌನ್‌ಶಿಪ್ ವಿರೋಧಿಸಿ ಕುಮಾರಸ್ವಾಮಿ ಅವರು ಕಾನೂನು ಹೋರಾಟದ ಎಚ್ಚರಿಕೆಗೆ ಪ್ರತಿಕ್ರಿಯಿಸಿ, ''ಅವರಿಗೆ ಶುಭ ಕೋರುತ್ತೇನೆ. ಕುಮಾರಸ್ವಾಮಿ ಮಾರ್ಗದರ್ಶನದಲ್ಲೇ ಈ ಟೌನ್‌ಶಿಪ್ ಆಗುತ್ತಿದೆ'' ಎಂದರು.

ನೈಋತ್ಯ ರೈಲ್ವೆ

ಬೆಂಗಳೂರು ವಿಭಾಗದಿಂದ ಪಾರ್ಸೆಲ್ ಸ್ಥಳ, ಪಾರ್ಕಿಂಗ್ & ಜಾಹೀರಾತು ಮತ್ತು ವಿವಿಧ ಗುತ್ತಿಗೆಗಳಿಗಾಗಿ ಇ-ಹರಾಜು

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ದಿನಾಂಕಗಳಂದು ಇ-ಹರಾಜಿಗಾಗಿ ಬಿಡ್ಡರ್‌ಗಳನ್ನು ಆಹ್ವಾನಿಸಿದ್ದಾರೆ:

1. **ಪಾರ್ಕಿಂಗ್:** 17.06.2026, 22.06.2026, 30.06.2026
2. **ಜಾಹೀರಾತು:** 22.06.2026, 23.06.2026, 24.06.2026, 29.06.2026
3. **ಪಾರ್ಸೆಲ್‌ಗಳು:** 15.06.2026, 16.06.2026, 25.06.2026, 29.06.2026
4. **ಪಾವತಿ & ಬಳಕೆ:** 17.06.2026, 22.06.2026, 23.06.2026
5. **ಎಟಿಎಂ & ವಿವಿಧೋದ್ದೇಶ:** 19.06.2026, 17.06.2026, 19.06.2026, 26.06.2026
6. **ಕ್ಯಾಟರಿಂಗ್:** 12.06.2026, 30.06.2026

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಕೊನೆಯ ದಿನಾಂಕದವರೆಗೆ ಯಾವುದಾದರೂ ತಿದ್ದುಪಡಿ ಇದ್ದಲ್ಲಿ ವೆಬ್‌ಸೈಟ್‌ಅನ್ನು ನೋಡುತ್ತಲೇ ಇರಿ

ವರಿಷ್ಠ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು
ಬೆಂಗಳೂರು
PUB/201/AAF/PRB/SWR/2026-27

ಸುಲಭ ಟಿಕೆಟ್ ಬುಕಿಂಗ್, PNR ಸ್ಥಿತಿ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ RailOne ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway - SWR | SWRRLY | SWRAILWAYHQ | sw_railways

ಗ್ಯಾರಂಟಿಗೆ ಹೊಸ ಅರ್ಜಿ!

» ಮೊದಲ ಪುಟದಿಂದ

ಸಭೆ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಸಿಎಂ ಡಿ.ಕೆ.ಶಿವಕುಮಾರ್, ''ಗೃಹಲಕ್ಷ್ಮಿ ಯೋಜನೆಯ ಫಲಾನುಭವಿಗಳ ನೈಜತೆ ಪರಿಶೀಲಿಸಿದಾಗ ನೂರಾರು ಕೋಟಿ ರೂ. ಅನರ್ಹರಿಗೆ ತಲುಪಿರುವುದು ಪತ್ತೆಯಾಗಿದೆ. ಯಾರದ್ದೋ ಮೊಬೈಲ್ ಸಂಖ್ಯೆ ನೀಡಿ ನೆರವು ಪಡೆಯುತ್ತಿರುವುದು, ಮೃತಪಟ್ಟವರ ಹೆಸರಿನಲ್ಲಿ ನೆರವು, ಒಂದೇ ಕುಟುಂಬದಲ್ಲಿ ಹಲವರು ನೆರವು ಪಡೆಯುತ್ತಿರುವುದು ಕಂಡುಬಂದಿದೆ. ಹಾಗಾಗಿ ಅರ್ಹ ಫಲಾನುಭವಿಗಳಿಗೆ ನೆರವು ಸಿಗುತ್ತಿದೆಯೇ ಎಂಬುದನ್ನು ಪರಿಶೀಲಿಸಲು ತೀರ್ಮಾನಿಸಲಾಗಿದೆ,'' ಎಂದು ಡಿ.ಕೆ.ಶಿವಕುಮಾರ್ ಪ್ರಕಟಿಸಿದರು.

''ಡಿಸಿ, ಜಿಪಂ ಸಿಇಒಗಳು ಸೇರಿದಂತೆ ಇತರೆ ಅಧಿಕಾರಿಗಳು, ಗ್ಯಾರಂಟಿ ಸಮಿತಿಗಳ ಸದಸ್ಯರು ಶೀಘ್ರವೇ ಅರ್ಹರಿಗೆ ಅರ್ಜಿಗಳನ್ನು ತಲುಪಿಸುವ ಕೆಲಸ ಮಾಡಲಿದ್ದಾರೆ. ಭಾವಚಿತ್ರ ಸಹಿತವಾಗಿ ವಿವರಗಳನ್ನು ದಾಖಲಿಸಿ ಸಲ್ಲಿಸಬೇಕು. ಈ ಸಂಬಂಧ ಅಧಿಕಾರಿಗಳಿಗೆ ಮಾರ್ಗದರ್ಶನ ನೀಡಲಾಗಿದೆ,'' ಎಂದರು.

ಗೃಹಜ್ಯೋತಿ ಯೋಜನೆಯಲ್ಲೂ ದುರ್ಬಳಕೆ: ''ಗೃಹಜ್ಯೋತಿ ಯೋಜನೆಯೂ ದುರ್ಬಳಕೆಯಾಗುತ್ತಿದೆ. ಒಂದೇ ಕಟ್ಟಡದಲ್ಲಿ 5-6 ವಿದ್ಯುತ್ ಸಂಪರ್ಕ ಪಡೆದಿರುವುದು, ನೆಲಮಹಡಿಯ ಮಳಿಗೆ ಹಾಗೂ ಮೊದಲ ಮಹಡಿಯ ವಾಸದ ಮನೆಗೂ ಗೃಹಜ್ಯೋತಿ ಸೌಲಭ್ಯ ಪಡೆಯುತ್ತಿರುವುದು ಕಂಡುಬಂದಿದೆ. ಕರ್ನಾಟಕದವರಷ್ಟೇ ಈ ಸೌಲಭ್ಯ ಪಡೆಯುತ್ತಿದ್ದಾರೆಯೋ ಅಥವಾ ಅನ್ಯರು ಪಡೆಯುತ್ತಿದ್ದಾರೋ ಎಂಬ ಮಾಹಿತಿಯನ್ನು ಕಲೆ ಹಾಕಬೇಕಿದೆ. ಹಾಗಾಗಿ ಸದ್ಯ ಶೂನ್ಯ ಮೊತ್ತದ ಬಿಲ್ ನೀಡಲಾಗುತ್ತಿದ್ದು, ಸದ್ಯದಲ್ಲೇ ಗುರುತಿನ ಚೀಟಿ ವಿತರಿಸಲಾಗುವುದು. ದಿನೇದಿನೇ ವಿದ್ಯುತ್ ಬೇಡಿಕೆ ಹೆಚ್ಚಾಗುತ್ತಿದ್ದು, ದುಬಾರಿ ಬೆಲೆಯಲ್ಲಿ ಖರೀದಿಸಿ ಉಚಿತವಾಗಿ ಪೂರೈಸಲಾಗುತ್ತಿದೆ. ವಾಸದ ಮನೆಗಳಿಗಷ್ಟೇ ಉಚಿತ ಸೌಲಭ್ಯವಿದ್ದು, ವ್ಯಾಪರ ಉದ್ದೇಶಕ್ಕೆ ಇಲ್ಲ,'' ಎಂದು ತಿಳಿಸಿದರು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ತಿದ್ದುಪಡಿ

ಇ-ಹರಾಜು ಪ್ರಕಟಣೆ ಸಂಖ್ಯೆ: ಬೆಂಅಪ್ರಾ/ಅಸ/ಇ-ಹರಾಜು/ಟಿ-06/2026-27 ದಿನಾಂಕ:06.06.2026ಕ್ಕೆ ಸಂಬಂಧಿಸಿದಂತೆ ದಿನಾಂಕ: 13.06.2026 ರಂದು ಈ ದಿನಪತ್ರಿಕೆಯಲ್ಲಿ ಪ್ರಕಟವಾದಂತೆ, ಈ ಕೆಳಗೆ ನಮೂದಿಸಲಾದ ನಿವೇಶನಗಳನ್ನು ಇ-ಹರಾಜಿಗೆ ಸೇರಿಸಲಾಗಿದೆ. ಇ-ಹರಾಜಿನಲ್ಲಿ ಪಾಲ್ಗೊಳ್ಳಲು ಆಸಕ್ತ ವ್ಯಕ್ತಪಡಿಸಲು ಕೊನೆಯ ದಿನಾಂಕ ಮತ್ತು ಸಮಯ **06.07.2026 ಸಂಜೆ 5.00 ಗಂಟೆಗೆ** ಮತ್ತು ನೇರ ಬಿಡ್ಡಿಂಗ್ (ಲೈವ್ ಬಿಡ್ಡಿಂಗ್) ಪ್ರಾರಂಭವಾಗುವ **ದಿನಾಂಕ ಮತ್ತು ಸಮಯ: 08.07.2026 ಬೆಳಗ್ಗೆ 11.00 ಗಂಟೆಗೆ** ಹಾಗೂ ಬಿಡ್ ಮುಕ್ತಾಯಗೊಳ್ಳುವ ಕೊನೆಯ ದಿನಾಂಕ ಮತ್ತು ಸಮಯ: **09.07.2026 ಸಂಜೆ 5.00 ಗಂಟೆ ವರೆಗೆ (ಡೆಲ್ಟಾ ಸಮಯ 5.00 ನಿಮಿಷಗಳು).**

ಕ್ರ ಸಂ	ಬಡಾವಣೆ	ನಿವೇಶನ ಸಂಖ್ಯೆ	ಪೂ-ಪ (ಮೀಟರ್ ಗಳಲ್ಲಿ)	ಉ-ದ (ಮೀಟರ್ ಗಳಲ್ಲಿ)	ಒಟ್ಟು ವಿಸ್ತೀರ್ಣ (ಚದರ ಮೀಟರ್ ಗಳಲ್ಲಿ)	ಪ್ರತಿ ಚದರ ಮೀಟರ್ ದರ (ರೂ.ಗಳಲ್ಲಿ)
1	ಮಹಾಲಕ್ಷ್ಮಿ ಲೇಔಟ್ ಕೈಗಾರಿಕಾ ಹೊರವಲಯ, ಕೇತಮಾರನಹಳ್ಳಿ	ಕ್ಯೂಎಸ್-1	-	-	171.48	92,750.00
2	ಅರ್ಕಾವತಿ ಲೇಔಟ್ 1ನೇ ಬ್ಲಾಕ್, ಜಕ್ಕೂರು	414	12.00	7.00	84.00	73,500.00

ಪ್ರಕಟಿಸಲಾದ ಕ್ರ.ಸಂ. 59 ಮತ್ತು 60 ರ ನಿವೇಶನಗಳನ್ನು "ಬನಶಂಕರಿ 6ನೇ ಹಂತ, 8ನೇ ಬ್ಲಾಕ್, ಹೆಮ್ಮಿಗೆಪುರ" ಎಂಬುದರ ಬದಲಾಗಿ "ಬನಶಂಕರಿ 6 ನೇ ಹಂತ, 9ನೇ ಬ್ಲಾಕ್ ಹೆಮ್ಮಿಗೆಪುರ" ಎಂದು ಓದಿಕೊಳ್ಳತಕ್ಕದ್ದು.
ಇತರೆ ನಿಯಮಗಳು ಮತ್ತು ಷರತ್ತುಗಳು ಮೊದಲಿನಂತೆಯೇ ಇರಲಿವೆ. ಸಾರ್ವಜನಿಕರಿಗೆ ಉಂಟಾದ ಅನಾನುಕೂಲತೆಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ವಿಷಾದಿಸುತ್ತದೆ. **ಸಹಾಯವಾಣಿ/ವಾಟ್ಸ್‌ಪ್: 9483166622 (24x7). @BDAOfficialGok**

ಸಹಿ/- ಅಭಿಯಂತರ ಸದಸ್ಯರು

ಸಂಪುಟದಲ್ಲಿ ಆದ್ಯತೆಗೆ ಭೋವಿ ಸಮಾಜ ಆಗ್ರಹ

ಬೆಂಗಳೂರು: ಮುಂದಿನ ಸಚಿವ ಸಂಪುಟ ವಿಸ್ತರಣೆಯಲ್ಲಿ ಪುಲಿಕೇಶಿನಗರ ಮೀಸಲು ಕ್ಷೇತ್ರದ ಶಾಸಕ ಎ.ಸಿ.ಶ್ರೀನಿವಾಸ್ ಅವರಿಗೆ ಅವಕಾಶ ನೀಡುವಂತೆ ರಾಜ್ಯ ಭೋವಿ ಸಂಘದ ಪದಾಧಿಕಾರಿಗಳು ಆಗ್ರಹಿಸಿದ್ದಾರೆ. ರಾಜ್ಯ ಭೋವಿ ಬಳಗದ ಅಧ್ಯಕ್ಷ ಲೋಕೇಶ್, ಕರ್ನಾಟಕ ಭೋವಿ ಸಮಿತಿ ಅಧ್ಯಕ್ಷ ಕೃಷ್ಣಪ್ಪ ಸೇರಿದಂತೆ ಭೋವಿ ಸಂಘದ ನಾನಾ ಜಿಲ್ಲಾಧ್ಯಕ್ಷರು ಈ ಸಂಬಂಧ ಸಿಎಂಗೆ ಮನವಿ ಸಲ್ಲಿಸಿದ್ದಾರೆ. ಶ್ರೀನಿವಾಸ್ ಅವರು ಭೋವಿ ಜನಾಂಗದ ಏಕೈಕ ಶಾಸಕರು. ಹಳೇ ಮೈಸೂರು ಭಾಗದ ಸಮುದಾಯದ ಯಾರೊಬ್ಬರಿಗೂ ಸಚಿವ ಸ್ಥಾನ ನೀಡಿಲ್ಲ, ಹಾಗಾಗಿ, ಶ್ರೀನಿವಾಸ್ ರನ್ನು ಪರಿಗಣಿಸಬೇಕು ಎಂದು ಒತ್ತಾಯಿಸಿದ್ದಾರೆ.

Published for the Proprietors, Metropolitan Media Company Limited, by Lokesh K V at No. 74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru560011. (Ph: 08040877666) and printed by him at Bennett Coleman & Co Ltd., The Times of India Press, No. 9/10/11A, 4th Main, KIADB Bommasandra Industrial Area, Anekal Taluk, Bangalore 560 099 (Ph: 08042200500) Regd. Office: No. 74/2, Sanjana Plaza, 4th & 5th Floor, Elephant Rock Road, Jayanagar 3rd block, Bengaluru560011 (Ph: 08040877666), Editor: Sudarshan Channangihalli – responsible for selection of news under PRB Act. ©All Rights Reserved. Reproduction in whole or in part without written permission is prohibited.

ರೈತರಿಗೆ ರಸಗೊಬ್ಬರ ವಿತರಣೆ ಗೊಂದಲ

ಕೇಂದ್ರ, ರಾಜ್ಯ ಸರಕಾರ ಹೊಣೆ

■ **ವಿಕ ಸುದ್ದಿಲೋಕ** ಕಲಬುರಗಿ

ರಾಜ್ಯದ ಹಲವು ಕಡೆಗಳಲ್ಲಿ ರಸಗೊಬ್ಬರದ ಅಭಾವ ಕಂಡು ಬಂದಿದೆ. ಇದಕ್ಕೆ ರಾಜ್ಯ ಹಾಗೂ ಕೇಂದ್ರ ಸರಕಾರಗಳೇ ಹೊಣೆಯಾಗಿವೆ ಎಂದು ಮಾಜಿ ಸಿಎಂ ಡಿ.ವಿ. ಸದಾನಂದಗೌಡ ಹೇಳಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ''ರಸಗೊಬ್ಬರದ ವಿಷಯದಲ್ಲಿ ನಮ್ಮ ದೇಶ ಸ್ವಾವಲಂಬಿ ಆಗುವುದು ಬಹು ಕಷ್ಟವಾಗಿದೆ. ಅದನ್ನು ತಯಾರು ಮಾಡಲು ಬೇಕಾದ ಕಚ್ಚಾ ಸಾಮಗ್ರಿ ವಿದೇಶಗಳಿಂದ ಪೂರೈಕೆಯಾಗಬೇಕು. ಆದರೆ, ಯುದ್ಧದ ಕಾರಣ ಕಚ್ಚಾವಸ್ತು ಬರುತ್ತಿಲ್ಲ,'' ಎಂದರು.

> ರಾಜ್ಯಸಭೆಗೆ ಆಯ್ಕೆಯಾಗಲು ಲಾಬಿ ಮಾಡಿಲ್ಲ. ನನ್ನನ್ನು ಪಕ್ಷಸೈಡ್‌ಲೈನ್ ಮಾಡಿಲ್ಲ.
> **- ಸದಾನಂದ ಗೌಡ**

''ರಾಜ್ಯ ಸರಕಾರವು ಕೂಡ ಯಾವ ತಿಂಗಳಲ್ಲಿ ಎಷ್ಟು ರಸಗೊಬ್ಬರ ಬೇಕು ಎಂದು ಮುಂಗಡವಾಗಿ ಕೇಂದ್ರಕ್ಕೆ ಸಂಪೂರ್ಣ ಮಾಹಿತಿ ನೀಡಬೇಕು ಮತ್ತು ಸಂವಹನ ಮಾಡಬೇಕು. ಆಗ ಮಾತ್ರ ಸಮಸ್ಯೆ ಬಗೆಹರಿಯಲಿದೆ,'' ಎಂದು ಹೇಳಿದರು.

ಕೇಂದ್ರದಿಂದಲೇ ತಾರತಮ್ಯ

ಬೆಂಗಳೂರು: ''ರೈತರ ಆವಶ್ಯಕತೆಗೆ ಅನುಗುಣವಾಗಿ ರಾಜ್ಯಗಳಿಗೆ ರಸಗೊಬ್ಬರ ಪೂರೈಸಬೇಕಾದ್ದು ಕೇಂದ್ರ ಸರಕಾರದ ಜವಾಬ್ದಾರಿಯಾಗಿದ್ದು, ತಾರತಮ್ಯ ತೋರದೆ ಸಮರ್ಪಕವಾಗಿ ಬೇಡಿಕೆಯಷ್ಟು ರಸಗೊಬ್ಬರ ಪೂರೈಸಬೇಕು,'' ಎಂದು ಪಂಚಾಯತ್ ರಾಜ್ ಸಚಿವ ಈಶ್ವರ ಖಂಡ್ರೆ ಹೇಳಿದ್ದಾರೆ. ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ, ''ಕೇಂದ್ರ ಸರಕಾರ ರಾಜ್ಯಕ್ಕೆ ಬೇಡಿಕೆಗೆ ಪ್ರತಿಯಾಗಿ ಕೇವಲ ಶೇ.30ರಷ್ಟು ಮಾತ್ರ ರಸಗೊಬ್ಬರ ಪೂರೈಸಿರುವುದರಿಂದ ರಸಗೊಬ್ಬರದ ತೀವ್ರ ಕೊರತೆ ಉದ್ಭವಿಸಿದೆ. ಕೇಂದ್ರ ಸರಕಾರ ತಾರತಮ್ಯ ತೋರದೆ ರಾಜ್ಯದ ರೈತರ ಹಿತಕಾಯಲು ಪೂರ್ಣ ಪ್ರಮಾಣದಲ್ಲಿ ರಸಗೊಬ್ಬರ ಪೂರೈಕೆ ಮಾಡಬೇಕು,'' ಎಂದು ಒತ್ತಾಯಿಸಿದರು.

ರಾಜ್ಯ ಸರಕಾರದ ಬೇಜವಾಬ್ದಾರಿತನ

■ **ವಿಕ ಸುದ್ದಿಲೋಕ** ಬೆಂಗಳೂರು



ಕೃಷಿ ಚಟುವಟಿಕೆಗಳಿಗೆ ರೈತರು ಸಜ್ಜಾಗುತ್ತಿರುವಾಗ ಸಕಾಲದಲ್ಲಿ ರಸಗೊಬ್ಬರ ವಿತರಿಸಲಾಗದಷ್ಟು ನಿಷ್ಕ್ರಿಯತೆಯನ್ನು ಈ ರೈತವಿರೋಧಿ ಕಾಂಗ್ರೆಸ್ ಸರಕಾರ ಪ್ರದರ್ಶಿಸುತ್ತಿದೆ. ಕೂಡಲೇ ರೈತರ ಬೇಡಿಕೆಗೆ ಅನುಗುಣವಾಗಿ ರಸಗೊಬ್ಬರ ಪೂರೈಸಲು ಕ್ರಮ ಕೈಗೊಳ್ಳಬೇಕು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಆಗ್ರಹಿಸಿದ್ದಾರೆ.

ಈ ಬಗ್ಗೆ 'ಎಕ್ಸ್' ಪೋಸ್ಟ್ ಮಾಡಿರುವ ಅವರು ''ಕೃಷಿ ಇಲಾಖೆ 10.65 ಲಕ್ಷ ಮೆಟ್ರಿಕ್ ಟನ್ ಗೊಬ್ಬರ ದಾಸ್ತಾನಿದೆ ಎನ್ನುತ್ತಿದೆ. ಇನ್ನೊಂದೆಡೆ ಉತ್ತರ ಕರ್ನಾಟಕದ ಜಿಲ್ಲೆಗಳ ರೈತ ಕೇಂದ್ರಗಳ ಮುಂದೆ 'ಗೊಬ್ಬರ ದಾಸ್ತಾನಿಲ್ಲ' ಎಂಬ ಫಲಕಗಳಿವೆ. ಯಾವುದು ಸತ್ಯ? ರೈತರಿಗೆ ಎಕರೆಗೆ ಕೇವಲ ಒಂದು ಚೀಲ ಕೊಡುತ್ತಿರುವುದು ಘೋರ ಅಪಮಾನ,'' ಎಂದರು. ''ಇಲಾಖೆಗಳ ನಡುವಿನ ಸಮನ್ವಯದ ಕೊರತೆ ಹಾಗೂ ಸರಕಾರದ ಬೇಜವಾಬ್ದಾರಿತನದಿಂದ ಗೊಬ್ಬರದ ಕೃತಕ ಅಭಾವ ಸೃಷ್ಟಿಯಾಗಿದೆ,'' ಎಂದಿದ್ದಾರೆ.

ಅನ್ನಭಾಗ್ಯ ಅಕ್ಕಿ ಮಾರಾಟಕ್ಕೆ ಖಂಡನೆ: ''ಬೆಂಗಳೂರಿನ ನಾನಾ ಆಹಾರ ನಿಗಮದ ಗೋದಾಮುಗಳಿಂದ ನೂರಾರು ಕ್ವಿಂಟಾಲ್ ಪಡಿತರ ಅಕ್ಕಿ ಮತ್ತು ರಾಗಿಯನ್ನು ಅಕ್ರಮವಾಗಿ ಖಾಸಗಿಯವರಿಗೆ ಮಾರಾಟ ಮಾಡುತ್ತಿದ್ದದಂಥೆ ಬಯಲಾಗಿದೆ. ಇದಕ್ಕೆ ಇಲಾಖೆಯ ಅಧಿಕಾರಿಗಳು ಶಾಮೀಲಾಗಿರುವುದಕ್ಕೆ ಸಾಕ್ಷಿ,'' ಎಂದು ಹೇಳಿದ್ದಾರೆ.

ಡೀಸೆಲ್ ಬಲ್ಕ್ ಖರೀದಿಯಿಂದ ವಸ್ತುಗಳ ಬೆಲೆ ಏರಿಕೆ: ರಣದೀಪ್

ಬೆಂಗಳೂರು: ಡೀಸೆಲ್ ಸಗಟು (ಬಲ್ಕ್) ಖರೀದಿ ಮೇಲೆ ಕೇಂದ್ರ ಸರಕಾರ ವಿಧಿಸಿರುವ ನಿರ್ಬಂಧದಿಂದಾಗಿ ಅಗತ್ಯ ವಸ್ತುಗಳ ಬೆಲೆ ಮತ್ತಷ್ಟು ದುಬಾರಿಯಾಗಲಿದ್ದು, ಎಲ್ಲ ವರ್ಗದ ಜನರಿಗೆ ಹೊರೆಯಾಗಲಿದೆ ಎಂದು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ದೂರಿದ್ದಾರೆ.

200 ಲೀಟರ್‌ಗಿಂತ ಹೆಚ್ಚು ಡೀಸೆಲ್ ಮಾರಾಟಕ್ಕೆ ಹಾಕಿದ ನಿರ್ಬಂಧದಿಂದ ದಿನಬಳಕೆ ವಸ್ತುಗಳ ಸಾರಿಗೆ ವೆಚ್ಚ ಏರಿಕೆಯಾಗಿ, ಜನರಿಗೆ ಹೊರೆಯಾಗಲಿದೆ ಎಂದು ಹೇಳಿದ್ದಾರೆ.

''ಸರಕಾರದ ನಿರ್ಧಾರ ರೈತರ ಕೃಷಿ ಚಟುವಟಿಕೆಗಳಿಗೂ ತೊಂದರೆಯಾಗಲಿದೆ. ದೈನಂದಿನ ಅಗತ್ಯಕ್ಕಾಗಿ ಜನರೇಟರ್ ಅವಲಂಬಿಸಿರುವ ಅಪಾರ್ಟ್‌ಮೆಂಟ್ ವಾಸಿಗಳಿಗೂ ಸರಕಾರದ ಈ ಆದೇಶವು ಹೊರೆಯಾಗಲಿದೆ. ವಸ್ತುಗಳ ಸಾಗಾಟ ವೆಚ್ಚ ಸಹಜವಾಗಿಯೇ ಹೆಚ್ಚಳವಾಗಿ ಜನರಿಗೆ ಅದು ವರ್ಗಾವಣೆಯಾಗುತ್ತದೆ,'' ಎಂದು ತಿಳಿಸಿದ್ದಾರೆ.

ಪ್ರಶ್ನಿಸುವ ಸಮಯ: ''ಜನಸಾಮಾನ್ಯರ ನಿತ್ಯದ ಬದುಕನ್ನು ದುಬಾರಿ ಮಾಡಿರುವ ಕೇಂದ್ರ ಸರಕಾರವನ್ನು ಪ್ರಶ್ನಿಸುವ ಸಮಯ ಬಂದಿದೆ ,'' ಎಂದು ಸುರ್ಜೇವಾಲಾ ಪ್ರಕಟಣೆಯಲ್ಲಿ ಹೇಳಿದ್ದಾರೆ.

ಕಮಿಷನ್ ಮಿನಿಸ್ಟರ್: ಅಶೋಕ್ ಟೀಕೆ

ರೈತರ ಆಕ್ರೋಶದ ಜ್ವಾಲೆಯಲ್ಲಿ ಕಾಂಗ್ರೆಸ್ ಸರಕಾರ ಭಸ್ಮ

■ **ವಿಕ ಸುದ್ದಿಲೋಕ** ಬೆಂಗಳೂರು



ರೈತರ ಜಮೀನಿನ ಮೇಲೆ ಬುಲ್ಡೋಜರ್ ಓಡಿಸಿ, ರಿಯಲ್ ಎಸ್ಟೇಟ್ ಸಾಮ್ರಾಜ್ಯ ಕಟ್ಟಲು ಹೊರಟಿರುವ 'ಕಮಿಷನ್ ಮಿನಿಸ್ಟರ್' ಡಿ.ಕೆ.ಶಿವಕುಮಾರ್ ಅವರೇ, ಅನ್ನದಾತರ ಆಕ್ರೋಶದ ಜ್ವಾಲೆಯಲ್ಲಿ ಕಾಂಗ್ರೆಸ್ ಸರಕಾರ ಭಸ್ಮವಾಗಬೇಕಾಗುತ್ತದೆ ಎಂದು ವಿಧಾನಸಭೆ ಪ್ರತಿಪಕ್ಷ ನಾಯಕ ಆರ್. ಅಶೋಕ್ ಹೇಳಿದ್ದಾರೆ.

ಬಿಡದಿ ಟೌನ್‌ಶಿಪ್ ಸಂಬಂಧ ಭೂಸ್ವಾಧೀನಕ್ಕೆ ಅಧಿಸೂಚನೆ ಹೊರಡಿಸಿರುವುದನ್ನು 'ಎಕ್ಸ್'ನಲ್ಲಿ ಖಂಡಿಸಿರುವ ಅಶೋಕ್, ''ಡಿಕೆಶಿ ತಮ್ಮ ಆಡಳಿತದಲ್ಲಿ ಸಿಎಂ ಎಂದರೆ 'ಚೀಫ್ ಮಿನಿಸ್ಟರ್' ಅಲ್ಲ, ಅದು 'ಕಮಿಷನ್ ಮಿನಿಸ್ಟರ್', 'ಕರಪ್ಷನ್ ಮಿನಿಸ್ಟರ್' ಎಂಬ ಹೆಸರು ಗಳಿಸಿದ್ದಾರೆ ಎಂದು ಟೀಕಿಸಿದ್ದಾರೆ.

''ಹೋರಾಟ ನಿರತ ರೈತರ ಕಣ್ಣೀರು ಮತ್ತು ಆಕ್ರೋಶವನ್ನು ಲೆಕ್ಕಿಸದೆ ಕೃಷಿ ಭೂಮಿ ಕಬಳಿಕೆಗೆ ಅಧಿಸೂಚನೆ ಹೊರಡಿಸಿರುವುದು ಕಾಂಗ್ರೆಸ್‌ನ ನಿಜವಾದ ಮುಖವನ್ನು ಬಯಲು ಮಾಡಿದೆ,'' ಎಂದಿದ್ದಾರೆ.

''ರೈತರನ್ನು ದುರ್ಬಲರೆಂದು ಭಾವಿಸಿದ್ದರೆ ಅದು ನಿಮ್ಮ ದೊಡ್ಡ ತಪ್ಪು. ಕೇವಲ ಒಂದೂವರೆ ವರ್ಷದಲ್ಲಿ ನಿಮ್ಮ ಈ ಜನವಿರೋಧಿ ಸರಕಾರ ಇತಿಹಾಸದ ಪುಟ ಸೇರಲಿದೆ. 2028ರಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ಕೂಡಲೇ ಭೂಸ್ವಾಧೀನ ಪ್ರಕ್ರಿಯೆಯನ್ನು ರದ್ದುಪಡಿಸಿ ರೈತರಿಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳುತ್ತೇವೆ,'' ಎಂದು ಭರವಸೆ ನೀಡಿದ್ದಾರೆ.

''ರೈತರ ತೀವ್ರ ವಿರೋಧದ ನಡುವೆಯೂ ತರಾತುರಿಯಾಗಿ ಭೂಮಿ ಕಬಳಿಸಲು ಹೊರಟಿರುವುದರ ಹಿಂದಿನ ರಹಸ್ಯವೇನು? ನಿಮ್ಮ ಬಿಲ್ಡರ್ ಮಾಫಿಯಾದ ಜೇಬು ತುಂಬಿಸುವ ರಿಯಲ್ ಎಸ್ಟೇಟ್ ಅಜೆಂಡಾವೇ ಇದಕ್ಕೆ ಕಾರಣವಲ್ಲವೇ? ಸರಕಾರ ಅನ್ನದಾತರ ಜಮೀನಿನಲ್ಲೂ ರಿಯಲ್ ಎಸ್ಟೇಟ್ ಬಂಗಾರ ಹುಡುಕಲು ಹೊರಟಿದೆ,'' ಎಂದು ಕಿಡಿಕಾರಿದ್ದಾರೆ.

''ಅನ್ನದಾತರ ಹೊಟ್ಟೆಗೆ ಹೊಡೆದು ಕಟ್ಟುವ ಯಾವುದೇ ಟೌನ್‌ಶಿಪ್ ಅಭಿವೃದ್ಧಿಯಲ್ಲ, ಅದು ರೈತರ ಭವಿಷ್ಯದ ಸಮಾಧಿ. ಈ ಹೋರಾಟ ಕೇವಲ 499 ಎಕರೆ ಜಮೀನಿಗಾಗಿ ಅಲ್ಲ, ಇದು ರೈತರ ಹಕ್ಕು, ಗೌರವ ಮತ್ತು ಬದುಕಿನ ಹೋರಾಟ,'' ಎಂದು ಎಚ್ಚರಿಸಿದ್ದಾರೆ.

'ಮೀಸಲು ಅನ್ಯಾಯ: ಧ್ವನಿ ಎತ್ತಿ'

ಗದಗ: ಮೀಸಲು ವಿಷಯದಲ್ಲಿ ಆಗುತ್ತಿರುವ ಅನ್ಯಾಯದ ಬಗ್ಗೆ ಮೀಸಲು ಕ್ಷೇತ್ರದ ಜನಪ್ರತಿನಿಧಿಗಳು ಧ್ವನಿ ಎತ್ತಬೇಕು. ಎಸ್‌ಸಿ-ಎಸ್‌ಟಿ ಮೀಸಲು ಪ್ರಮಾಣವನ್ನು ಶೇ.56ಕ್ಕೆ ಹೆಚ್ಚಿಸಲು ಕೇಂದ್ರ ಹಾಗೂ ರಾಜ್ಯ ಸರಕಾರಗಳು ಕ್ರಮ ಕೈಗೊಳ್ಳಬೇಕು ಎಂದು ವಾಲ್ಮೀಕಿ ಸಮಾಜದ ಸಮಾನ ಮನಸ್ಕರ ವೇದಿಕೆ ಅಧ್ಯಕ್ಷ ಹಾಗೂ ಮಾಜಿ ಸಂಸದ ವಿ.ಎಸ್. ಉಗ್ರಪ್ಪ ಆಗ್ರಹಿಸಿದರು.



AMITY UNIVERSITY
AMITY UNIVERSITY BENGALURU

Fast-forward Your Career with Industry-Integrated Pathways

- **70+ Companies have visited** the campus for placements including Jio BP, TCS, Sheenlac Paints, HiveMinds, DeltaX, SBI Mutual Fund, Café Coffee Day, Policy Bazaar, Cognizant, Infosys, ICICI Lombard, Tata Technologies, Capgemini, JTP, Magic Pin, Mojo Hunt, Axis Bank...
- **Extensive SBW (Skill Building Workshops),** ICT enabled PPM (Pre-Placement Mock Sessions), Student Centric PMM (Profile Mapping Matrix), Exclusive Triple C Model (Corporate Counselling Club)...
- **CEO Dinner Series,** Industry Mentorship and Conversation Programs
- **A unique 3-tier mentorship model** with guidance from a corporate leader, alumni and faculty
- **Behavioural science modules** and language proficiency programs
- **Involvement of industry professionals** as panelists in admission interviews
- **Career networking opportunities** with 750,000+ well-heeled alumni
- **Optional 5-week Study Abroad Program** in New York, Singapore, London, France, Dubai or Australia
- **Market-driven curricula** to bridge academia & industry
- **Diverse Centres of Excellence** in emerging fields for research depth & domain expertise and student special clubs like GitHub, Google Developer, Environmental Awakening...
- **Several Govt funded research projects** in collaboration with CSIR, ICMR, DST, BRNS...
- **35+ Cutting-edge laboratories** and next-gen immersive learning studios & moot court
- **235+ Distinguished faculty, scientists & staff** shaping the learning experience
- **Amity Innovation Incubator** on campus to encourage entrepreneurial outlook

2026 ADMISSIONS OPEN FOR 50+ UG & PG PROGRAMMES IN

- Animation & Visual Effects
- Applied Sciences
- Biotechnology
- Business Analytics & AI
- Commerce
- Computer Sc / IT
- Construction Project Mgmt
- Cyber Security
- Data Sciences
- English Literature
- Fashion Design
- Law
- Liberal Arts
- Management
- Media & Communication
- Microbial Technology
- Pharmacy
- Psychology
- Real Estate & Urban Infrastructure
- Engineering
  - CSE
  - CSE (AI & ML / Cloud Computing / Data Analytics / DevOps / Full Stack Development / IoT / Robotics)
  - Electronics & Comm Engg
  - Electrical & Electronics Engg (Electric Vehicle Technology)
  - Embedded System & VLSI
  - Project Management

- Lateral entry & Ph.D programmes also offered
- Bus service available from various key locations
- AC hostel facility available
- Student special interest clubs across diverse domains such as music, community, literary & cultural pursuits

Scholarships	100%	50%	25%
Programmes after Class 12			
Class 12 (agg.)	95%	90%	85%
Programmes after UG (Non-MBA)			
Class 12 (agg.)	95%	90%	-
Graduate (agg.)	80%	75%	-
MBA			
CAT/MAT (%ile)	90	85	80
GMAT/GRE (Score)	650/161	600/157	500/152

For details check the website

APPLY AT : amity.edu/bengaluru
BY : 19TH JUNE 2026
CALL : 7303-399-000



World-class Amity Bengaluru Campus

AMITY UNIVERSITY BENGALURU, NH 648, DEVANAHALLI - DODDABALLAPUR RD, BENGALURU | E: admissions.blr@amity.edu

ಯುದ್ಧ, ತೈಲ ಬೆಲೆ ಏರಿಕೆಯಿಂದ ಅಕ್ಕಿ ತುಟ್ಟಿ

ಎರಡು ಬಾರಿ ರಫ್ತಿಗೆ ಅವಕಾಶ | ಸೋನಾ ಮಸೂರಿ ಕೆ.ಜಿ.ಗೆ 8–10 ರೂ.ವರೆಗೆ ಏರಿಕೆ

■ **ಎಚ್.ಪಿ. ಪುಣ್ಯವತಿ** ಬೆಂಗಳೂರು
punyavathi.hp@timesofindia.com

ಅಕ್ಕಿ ದರವು ಗಗನಮುಖಿಯಾಗುತ್ತಲೇ ಇದ್ದು, ಏಪ್ರಿಲ್ ತಿಂಗಳಿನಿಂದೀಚೆಗೆ ಸಗಟು ದರದಲ್ಲಿ ಕೆ.ಜಿಗೆ 8–10 ರೂ.ವರೆಗೆ ಏರಿಕೆಯಾಗಿದೆ.

ಭಾರತದಿಂದ ಹೊರರಾಷ್ಟ್ರಗಳಿಗೆ ಸಾಮಾನ್ಯವಾಗಿ ಜನವರಿ–ಫೆಬ್ರುವರಿಯಲ್ಲಿ ಅಕ್ಕಿ ರಫ್ತಾಗುತ್ತಿತ್ತು. ಆದರೆ ಈ ಬಾರಿ ಏಪ್ರಿಲ್‌ನಲ್ಲೂ ರಫ್ತಿಗೆ ಅವಕಾಶ ನೀಡಲಾಗಿತ್ತು. ಹೀಗಾಗಿ, ಎರಡು ಬಾರಿ ಅಕ್ಕಿ ರಫ್ತಿಗೆ ಅವಕಾಶ ಮಾಡಿಕೊಡಲಾಗಿತ್ತು. ಈ ವರ್ಷ ಬೇಸಿಗೆಯಲ್ಲಿ ನಿರೀಕ್ಷಿತ ಫಸಲು ಬಂದಿಲ್ಲ. ಜತೆಗೆ ಹೊಸ ಅಕ್ಕಿ ಸಂಗ್ರಹವಿದ್ದರೂ, ಸದ್ಯ ಬಳಕೆಗೆ ಸೂಕ್ತವಾಗಿಲ್ಲ. ಇಂಥ ಪರಿಸ್ಥಿತಿಯಲ್ಲಿ ಮಲೇಷ್ಯಾ, ಥಾಯ್ಲೆಂಡ್, ಶ್ರೀಲಂಕಾ ಸೇರಿದಂತೆ ಹಲವು ರಾಷ್ಟ್ರಗಳಿಗೆ ಸೋನಾ ಮಸೂರಿ ಅಕ್ಕಿಯನ್ನು ರಫ್ತು ಮಾಡಲಾಗಿದೆ. ಪರಿಣಾಮ, ಅಕ್ಕಿ ದರವು ಮೇ ಮತ್ತು ಜೂನ್ ತಿಂಗಳಿಂದೀಚೆಗೆ ಕೆ.ಜಿಗೆ 8–10 ರೂ. ವರೆಗೆ ಜಾಸ್ತಿಯಾಗಿದೆ.

ಮಧ್ಯಪ್ರಾಚ್ಯ ರಾಷ್ಟ್ರಗಳಲ್ಲಿ ನಡೆಯುತ್ತಿರುವ ಯುದ್ಧದಿಂದಾಗಿ ತೈಲ ಬೆಲೆಯೂ ಏರಿಕೆಯಾಗಿದೆ. ಬಹುತೇಕ ದಿನಸಿ ಪದಾರ್ಥಗಳ ಸಾಗಣೆ ವೆಚ್ಚವೂ ಹೆಚ್ಚಾಗಿದ್ದು, ಇದು ಕೂಡ ಅಕ್ಕಿ ಬೆಲೆ ಏರಿಕೆಗೆ ಕಾರಣವಾಗಿದೆ. ಬಹು ಬೇಡಿಕೆಯ ಸೋನಾ ಮಸೂರಿ ಸ್ಟೀಮ್ ಮತ್ತು ರಾ ರೈಸ್‌ಗೆ ಸಗಟು ದರವು ಪ್ರತಿ ಕೆ.ಜಿಗೆ44 ರಿಂದ 58 ರೂ. ಇತ್ತು. ಈಗ 53ರಿಂದ 62 ರೂ.ವರೆಗೆ ಹೆಚ್ಚಳವಾಗಿದೆ. ಯಶವಂತಪುರ ಎಪಿಎಂಸಿಯಲ್ಲಿ ಅಕ್ಕಿ ಆವಕವು ಋತುಮಾನ ಮತ್ತು ಬೇಡಿಕೆಗೆ ಅನುಗುಣವಾಗಿ ಪ್ರತಿದಿನ ಸುಮಾರು 1,500 ರಿಂದ 2,500 ಕ್ವಿಂಟಾಲ್ ಇರುತ್ತದೆ.

ಎಪಿಎಂಸಿ ಸಗಟು ದರ (ಕೆ.ಜಿಗೆ)	ಹಿಂದಿನ ದರ	ಪ್ರಸ್ತುತ ದರ (ರೂಗಳಲ್ಲಿ)
ಸೋನಾ ಸ್ಟೀಮ್	44	53
ಸೋನಾ ರಾ ರೈಸ್	48-58	58-62
ದೋಸಾ ಅಕ್ಕಿ	38	40
ಸೇಲಂ ಅಕ್ಕಿ (ಮಲ್ಲಿಗೆ ಇಡ್ಲಿ ಅಕ್ಕಿ)	40	43
ಬೇಯಿಸಿದ ಅಕ್ಕಿ (ಬಾಯಿಲ್ಡ್ ರೈಸ್)	32	-
ಬಾಸುಮತಿ	80-180	85-184

ಕರ್ನಾಟಕದಲ್ಲಿ ಸೋನಾ ಸ್ಟೀಮ್ ರೈಸ್ ಅನ್ನು ಹೆಚ್ಚಿನ ಪ್ರಮಾಣದಲ್ಲಿ ಬೆಳೆಯಲಾಗುತ್ತದೆ. ಈ ಅಕ್ಕಿ ಹೆಚ್ಚಿನ ಪ್ರಮಾಣದಲ್ಲಿ ಹೊರ ರಾಷ್ಟ್ರಗಳಿಗೆ ರಫ್ತಾಗಿದೆ. ಈ ವರ್ಷ ಎರಡು ಬಾರಿ ರಫ್ತು ಪ್ರಕ್ರಿಯೆಗೆ ಅವಕಾಶ ನೀಡಿದ್ದರಿಂದ ಸೋನಾ ಸ್ಟೀಮ್ ಜತೆಗೆ ಸೋನಾ ರಾ ರೈಸ್ ಅನ್ನು ರಫ್ತುದಾರರು ಖರೀದಿಸಿ ಸಂಗ್ರಹಿಸಿದ್ದಾರೆ. ಹೀಗಾಗಿ ಕೆ.ಜಿಗೆ 8 ರೂ.ವರೆಗೆ ಏರಿಕೆಯಾಗಿದೆ.

-ರಮೇಶ್‌ಚಂದ್ರ ಲಹೋಟಿ
ಅಧ್ಯಕ್ಷ, ಎಪಿಎಂಸಿ ಆಹಾರ ಧಾನ್ಯಗಳ ಸಗಟು ವರ್ತಕರ ಸಂಘ

ಬಾಸುಮತಿಯೂ ದುಬಾರಿ: ಬಿರಿಯಾನಿ, ಪಲಾವ್‌ಗೆ ಬಳಸುವ ಬಾಸುಮತಿ (200ಕ್ಕೂ ಹೆಚ್ಚು ಬಗೆಯ ಅಕ್ಕಿ ತಳಿಗಳಿವೆ) ಅಕ್ಕಿಯ ದರವೂ ಸಗಟು ದರದಲ್ಲಿಯೇ ಕೆ.ಜಿಗೆ 5–6 ರೂ.ವರೆಗೆ ಏರಿಕೆಯಾಗಿದೆ. ದೋಸೆ ಅಕ್ಕಿ, ಇಡ್ಲಿ ಅಕ್ಕಿ, ಬೇಯಿಸಿದ ಅಕ್ಕಿ ಪ್ರತಿ ಕೆ.ಜಿಗೆ 1–3 ರೂ. ಜಾಸ್ತಿಯಾಗಿದೆ. ಚಿಲ್ಲರೆ ಅಂಗಡಿಗಳಲ್ಲಿ ಸಗಟು ದರಕ್ಕೆ ಹೆಚ್ಚುವರಿಯಾಗಿ ಶೇ.10–15ರಷ್ಟು ದರ ಏರಿಕೆ (ಸಾಗಣೆ, ಕೂಲಿ ಸೇರಿ) ಮಾಡಿ ಮಾರಾಟ ಮಾಡಲಾಗುತ್ತಿದೆ. ಸಾಮಾನ್ಯವಾಗಿ ಏಪ್ರಿಲ್‌ನಿಂದ ಜೂನ್‌ವರೆಗೆ ಸಗಟು ದರದಲ್ಲಿ ಅಕ್ಕಿ ಕೆ.ಜಿಗೆ 1 – 2 ರೂ.ಏರಿಕೆಯಾಗುತ್ತಿತ್ತು. ಆದರೆ ಈ ಬಾರಿ 8–10 ರೂ.ವರೆಗೆ ಹೆಚ್ಚಾಗಿದೆ.

ಕೃಷಿ ಉತ್ಪನ್ನಗಳ ಕಚ್ಚಾ ವಸ್ತುಗಳ ಕೊರತೆಯ ಜತೆಗೆ ಭಾರತದಿಂದ ಶ್ರೀಲಂಕಾಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಅಕ್ಕಿ ರಫ್ತು ಆಗುತ್ತಿದ್ದು, ಅಲ್ಲಿಂದ ಇತರ ದೇಶಗಳಿಗೆ ಸಾಗಣೆಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ಸ್ಥಳೀಯವಾಗಿ ಅಕ್ಕಿ ದಾಸ್ತಾನು ಕಡಿಮೆಯಾಗುತ್ತಿದ್ದು, ಬೆಂಗಳೂರಿನ ಮಾರುಕಟ್ಟೆಯಲ್ಲಿ ಬೆಲೆ ಹೆಚ್ಚಾಗಿದೆ. ತೈಲ ಬೆಲೆ ಹೆಚ್ಚಳದಿಂದ ಬಹುತೇಕ ದಿನಸಿ ಪದಾರ್ಥಗಳು ಕೆ.ಜಿಗೆ 50 ಪೈಸೆಯಂತೆ ಹೆಚ್ಚಾಗಿವೆ. ಆದರೆ ಬೇಳೆ, ಕಾಳುಗಳು, ಸಕ್ಕರೆ ಇತರೆ ಪದಾರ್ಥಗಳ ದರವು ಯಥಾಸ್ಥಿತಿಯಲ್ಲಿದೆ.

ಇಂದು ಎಂಬಿಎ, ಎಂಸಿಎ ಪ್ರವೇಶ ಪರೀಕ್ಷೆ

ಬೆಂಗಳೂರು: ಎಂಬಿಎ ಮತ್ತು ಎಂಸಿಎ ಕೋರ್ಸ್‌ಗಳ ಪ್ರವೇಶಕ್ಕಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಜೂ.14ರಂದು ಪ್ರವೇಶ ಪರೀಕ್ಷೆ ನಡೆಸುತ್ತಿದ್ದು, ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಂಡಿದೆ. ಬೆಂಗಳೂರು, ದಾವಣಗೆರೆ, ಧಾರವಾಡ, ಕಲಬುರಗಿ ಮತ್ತು ಮೈಸೂರಿನಲ್ಲಿ ಪರೀಕ್ಷೆ ನಡೆಯಲಿದೆ. ಎಂಬಿಎ ಪರೀಕ್ಷೆಗೆ 30,542 ಹಾಗೂ ಎಂಸಿಎ ಪರೀಕ್ಷೆಗೆ 22,262 ವಿದ್ಯಾರ್ಥಿಗಳು ಹಾಜರಾಗಲಿದ್ದಾರೆ ಎಂದು ಪ್ರಾಧಿಕಾರದ ಕಾರ್ಯ ನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದ್ದಾರೆ. ಬೆಳಗಿನ ಅವಧಿಯಲ್ಲಿ ಎಂಬಿಎ ಪರೀಕ್ಷೆಗಳು ನಡೆಯಲಿದ್ದು, ಮಧ್ಯಾಹ್ನದ ಅವಧಿಯಲ್ಲಿ ಎಂಸಿಎ ಪರೀಕ್ಷೆ ಜರುಗಲಿವೆ ಎಂದು ಹೇಳಿದ್ದಾರೆ.

15ನೇ ವರ್ಷದ ಪುಣ್ಯಸ್ಮರಣೆ

ಶ್ರೀಮತಿ ಗೋವಿಂದಮ್ಮ
W/o ಲೇಟ್ ಜಿ. ಮುನಿನಾರಾಯಣಪ್ಪ
ಕಾವಲ್ ಭೈರಸಂದ್ರ
ಅಸ್ತಂಗತ: 14.06.2011
ನಿಮ್ಮ ಆತ್ಮಕ್ಕೆ ಚಿರಶಾಂತಿ ಲಭಿಸಲಿ ಎಂದು ಭಗವಂತನನ್ನು ಪ್ರಾರ್ಥಿಸುತ್ತಿರುವ,
ಇಂತಿ:
ಎಂ.ಎನ್. ಕುಟುಂಬದವರು

20ರಂದು ಎಸ್‌ಐಆರ್ ವಿರುದ್ಧ ಪ್ರತಿರೋಧ ಸಮಾವೇಶ

■ **ವಿಕ ಸುದ್ದಿಲೋಕ** ಬೆಂಗಳೂರು

ವಿಶೇಷ ಮತಪಟ್ಟಿಯ ಪರಿಷ್ಕರಣೆ (ಎಸ್‌ಐಆರ್) ವಿರುದ್ಧ ರಾಜ್ಯಾದ್ಯಂತ ಜಾಗೃತಿ ಮೂಡಿಸಲು ಮುಂದಾಗಿರುವ 'ಎಸ್‌ಐಆರ್ ಜಾತ್ಯತೀತ ಪಕ್ಷಗಳು–ಜನಪರ ಸಂಘಟನೆಗಳ ಒಕ್ಕೂಟ'ವು ಜೂ.20ರಂದು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಬೃಹತ್ ಪ್ರತಿರೋಧ ಸಮಾವೇಶ ಹಮ್ಮಿಕೊಂಡಿದೆ.

ಪ್ರಸ್ತುತ ನಡೆಯುತ್ತಿರುವ ಈ ಪ್ರಕ್ರಿಯೆಯನ್ನು 'ಮತದಾನದ ಹಕ್ಕನ್ನು ಕಸಿದುಕೊಳ್ಳುವ ವ್ಯವಸ್ಥಿತ ಅಸ್ತ್ರ' ಎಂದು ಕರೆದಿರುವ ಒಕ್ಕೂಟವು, ಜೂನ್ 13ರಿಂದ 18ರವರೆಗೆ ಹಂತಹಂತವಾಗಿ ರಾಜ್ಯಾದ್ಯಂತ ಜಾಗೃತಿ ಪ್ರವಾಸ ಹಮ್ಮಿಕೊಂಡಿದೆ. ಈ ಆಂದೋಲನದ ಮುಕ್ತಾಯವಾಗಿ ಜೂನ್ 20ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಬೆಂಗಳೂರು ಪ್ರತಿರೋಧ ಸಮಾವೇಶ ಆಯೋಜಿಸಿದೆ ಎಂದು ಹೋರಾಟಗಾರರಾದ ಬಿ.ಟಿ.ಲಲಿತಾ ನಾಯಕ್, ಜೆ.ಎಂ.ವೀರಸಂಗಯ್ಯ ಹಾಗೂ ಕೆ.ಎಲ್.ಅಶೋಕ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂವಿಧಾನದಡಿ ಎಲ್ಲ ನಾಗರಿಕರಿಗೂ ಸಮಾನ ಮತ ಹಕ್ಕಿದೆ. ಇದನ್ನು ರಕ್ಷಿಸುವುದು ಚುನಾವಣಾ ಆಯೋಗದ ಕರ್ತವ್ಯ. ಪ್ರಜಾಪ್ರಭುತ್ವದ ಬೇರು, ಆಶಯ ನಾಗರಿಕರ ಮತದಾನದ ಹಕ್ಕಿನ ರಕ್ಷಣೆಯ ಮೇಲೆ ನಿಂತಿದೆ. ಮತದಾನದ ಹಕ್ಕು ಕೇವಲ ಆಡಳಿತಾತ್ಮಕ ವಿಷಯವಲ್ಲ. ಅದು ನಾಗರಿಕ ಸಮಾನತೆಯ ಮತ್ತು ಸಂವಿಧಾನ ಮೌಲ್ಯಗಳ ಪ್ರತೀಕ. ಎಸ್‌ಐಆರ್ ಮೂಲಕ ನುಸುಳುಕೋರರನ್ನು ಪತ್ತೆ ಹಚ್ಚುತ್ತಿಲ್ಲ, ಬದಲಿಗೆ ಮತದಾನದ ಹಕ್ಕು ಇಲ್ಲದ ಎರಡನೇ ದರ್ಜೆಯ ಜನ ವರ್ಗವನ್ನು ಸೃಷ್ಟಿಸುವ ಹುನ್ನಾರ ಇದರಲ್ಲಿ ಅಡಗಿದೆ. ಶರಣ, ಸೂಫಿ, ಸಂತರ ನಾಡಿನಲ್ಲಿ ಇಂತಹ ಯಾವುದೇ ದುಷ್ಟ ನೀತಿಗಳು ನಡೆಯುವುದಿಲ್ಲ ಎಂದು ಚುನಾವಣಾ ಆಯೋಗಕ್ಕೆ ಎಚ್ಚರಿಸಿದ್ದಾರೆ.

ವಿವಿಧ ರಾಜ್ಯಗಳಲ್ಲಿ ನಡೆಸಿದ ಸ್ವರೂಪದಲ್ಲಿಯೇ ಎಸ್‌ಐಆರ್ ಅನ್ನು ಕರ್ನಾಟಕದಲ್ಲಿ ಜಾರಿ ಮಾಡಲು ಬಿಡುವುದಿಲ್ಲ. ಲಾಜಿಕಲ್ ಡಿಸ್ಕ್ರಿಪೆನ್ಸಿ ಸಾಫ್ಟ್‌ವೇರ್ ಬಳಸಬಾರದು, ಕರಡು ಪಟ್ಟಿ ತಯಾರಾದ ನಂತರ ಗ್ರಾಮ ಸಭೆಗಳನ್ನು ಕರೆದು ಸಾರ್ವಜನಿಕ ಪರಿಶೀಲನೆ ನಡೆಸಿ ಪಟ್ಟಿ ಅಂತಿಮಗೊಳಿಸಬೇಕು. ಮತದಾರರ ಪಟ್ಟಿಯಲ್ಲಿ ಮೆಷಿನ್ ರೀಡಬಲ್ ಫಾರ್ಮ್ಯಾಟ್ ಮೂಲಕ ಪಾರದರ್ಶಕತೆ ಪಾಲಿಸಬೇಕು ಎಂದು ಒತ್ತಾಯಿಸಿದ್ದಾರೆ.

ವೆರಿಫಿಕೇಶನ್ ಸ್ಲಿಪ್ ಪಡೆಯಲು ಸೂಚನೆ

■ **ವಿಕ ಸುದ್ದಿಲೋಕ** ಬೆಂಗಳೂರು

ಎಂಜಿನಿಯರಿಂಗ್ ಸೇರಿದಂತೆ ನಾನಾ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಕ್ರೀಡೆ ಮತ್ತು ವಿಶೇಷಚೇತನ ಕೋಟಾ ಕ್ಲೇಮು ಮಾಡಿರುವವರು ಎರಡು ದಿನಗಳ ಬಳಿಕ ವೆರಿಫಿಕೇಷನ್ ಸ್ಲಿಪ್ ಡೌನ್‌ಲೋಡ್ ಮಾಡಿಕೊಳ್ಳಬೇಕು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯ ನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ತಿಳಿಸಿದ್ದಾರೆ.

ರಕ್ಷಣೆ (ಡಿಫೆನ್ಸ್) ಮತ್ತು ಎನ್‌ಸಿಸಿ ಕೋಟಾ ಕ್ಲೇಮ್ ಮಾಡಿದ್ದವರ ಅರ್ಹತಾ ಪಟ್ಟಿ ಬಂದಿದ್ದು, ಅವರ ಕ್ಲೇಮ್ ವೆರಿಫಿಕೇಷನ್ ಸ್ಲಿಪ್‌ನಲ್ಲಿ ದಾಖಲಾಗಿದೆ. ಆದರೆ, ಕ್ರೀಡೆ ಮತ್ತು ವಿಶೇಷಚೇತನ ಕೋಟಾ ಕ್ಲೇಮ್ ಮಾಡಿದವರ ಅರ್ಹತಾ ಪಟ್ಟಿಯು ಸಂಬಂಧಪಟ್ಟ ಇಲಾಖೆಗಳಿಂದ ಬಂದಿಲ್ಲ. ಪಟ್ಟಿ ಬಂದ ತಕ್ಷಣ ಆ ಮಾಹಿತಿಯನ್ನು ಅಪ್‌ಲೋಡ್ ಮಾಡಲಾಗುವುದು. ಪುನಃ ಮತ್ತೊಮ್ಮೆ ವೆರಿಫಿಕೇಷನ್ ಸ್ಲಿಪ್ ಡೌನ್‌ಲೋಡ್ ಮಾಡಿಕೊಳ್ಳಬೇಕಾಗುತ್ತದೆ. ಈ ವಿಷಯದಲ್ಲಿ ಆತಂಕಪಡುವ ಅಗತ್ಯ ಇಲ್ಲ. ಅರ್ಹತಾ ಪಟ್ಟಿ ಬಂದ ತಕ್ಷಣವೇ ಮಾಹಿತಿಯನ್ನು ವೆರಿಫಿಕೇಷನ್ ಸ್ಲಿಪ್‌ನಲ್ಲಿ ದಾಖಲಿಸಲಾಗುವುದು ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಕ್ರೈಸ್ ವಸತಿ ನಿಲಯಗಳ ಪ್ರವೇಶಕ್ಕೆ 2ನೇ ಸುತ್ತಿನ ಸೀಟು ಹಂಚಿಕೆ ಪ್ರಕಟ

■ **ವಿಕ ಸುದ್ದಿಲೋಕ** ಬೆಂಗಳೂರು

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ವ್ಯಾಪ್ತಿಯ ಮೊರಾರ್ಜಿ ದೇಸಾಯಿ, ಕಿತ್ತೂರು ರಾಣಿ ಚನ್ನಮ್ಮ, ಅಟಲ್ ಬಿಹಾರಿ ವಾಜಪೇಯಿ, ಇಂದಿರಾ ಗಾಂಧಿ, ಡಾ. ಬಿ.ಆರ್.ಅಂಬೇಡ್ಕರ್ ಸೇರಿದಂತೆ ನಾನಾ ವಸತಿ ಶಾಲೆಗಳಿಗೆ 2026–27ನೇ ಸಾಲಿನ ಪ್ರವೇಶಕ್ಕೆ ಎರಡನೇ ಸುತ್ತಿನ ಸೀಟು ಹಂಚಿಕೆಯ ಫಲಿತಾಂಶ ಪ್ರಕಟಿಸಲಾಗಿದೆ. ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಎರಡನೇ ಸುತ್ತಿನ ಸೀಟು ಹಂಚಿಕೆಯ ಫಲಿತಾಂಶ ಪ್ರಕಟಿಸಿದ್ದು, http://cetonline.karnataka.gov.in.kea ವೆಬ್‌ಸೈಟ್ ಮೂಲಕ ಫಲಿತಾಂಶವನ್ನು ಪರಿಶೀಲಿಸಬಹುದಾಗಿದೆ ಎಂದು ತಿಳಿಸಿದೆ.

ಒಬಿಸಿಗೆ ಕುಂಚಿಟಿಗರ ಸೇರಿಸಲು ಸಹಕಾರ

ಹಿರಿಯೂರು(ಚಿತ್ರದುರ್ಗ): ''ಕೇಂದ್ರ ಸರಕಾರದ ಹಿಂದುಳಿದ ವರ್ಗಗಳ ಪಟ್ಟಿಗೆ (ಒಬಿಸಿ) ಗಡಿನಾಡ ಕುಂಚಿಟಿಗರನ್ನು ಸೇರ್ಪಡೆ ಮಾಡಲು ಅಗತ್ಯ ಸಹಕಾರ ನೀಡುವ ಜತೆಗೆ ಕೇಂದ್ರ ಸರಕಾರದ ಮೇಲೆ ಒತ್ತಡ ಹಾಕುವ ಮೂಲಕ ಮೀಸಲು ಜಾರಿಗೆ ಪ್ರಯತ್ನ ಮಾಡಲಾಗುವುದು,'' ಎಂದು ಆದಿಚುಂಚನಗಿರಿ ಪೀಠದ ನಿರ್ಮಲಾನಂದನಾಥ ಸ್ವಾಮೀಜಿ ಹೇಳಿದರು. ತಾಲೂಕಿನ ಕರ್ನಾಟಕ–ಆಂಧ್ರ ಗಡಿಭಾಗದ ಅಮರಾಪುರಂ ಮಂಡಲದ ವಿ.ಅಗ್ರಹಾರ ಗ್ರಾಮದಲ್ಲಿ ಶನಿವಾರ ಗಡಿನಾಡ ಕುಂಚಿಟಿಗ ಒಕ್ಕಲಿಗರ ಸಮಾವೇಶ ಹಾಗೂ ನಾಡಪ್ರಭು ಕೆಂಪೇಗೌಡರ ಪುತ್ಥಳಿ ಅನಾವರಣ ಕಾರ್ಯಕ್ರಮ ಉದ್ಘಾಟಿಸಿ, ಶ್ರೀಗಳು ಮಾತನಾಡಿದರು. ''ಇಂದಿನ ಯುವಜನತೆ ಕೆಂಪೇಗೌಡರ ಆದರ್ಶ, ಒಕ್ಕಲಿಗರ ಸಂಸ್ಕೃತಿ, ಪರಂಪರೆ ಬಗ್ಗೆ ತಿಳಿದರೆ ಮಾತ್ರ ಇತಿಹಾಸ ಸೃಷ್ಟಿಸಲು ಸಾಧ್ಯ. ಆಧುನಿಕ ಬೆಂಗಳೂರು ನಿರ್ಮಾಣಕ್ಕೆ ಕೆಂಪೇಗೌಡರು ನೀಡಿದ ಕೊಡುಗೆ ಸ್ಮರಣೀಯ'' ಎಂದರು.

ಆಂಧ್ರದ ಶಾಸಕ ಎಂ.ಎಸ್.ರಾಜು, ರಾಜ್ಯ ಒಕ್ಕಲಿಗ ಸಂಘದ ನಿರ್ದೇಶಕ ಡಾ.ಜೆ.ರಾಜು ಮಾತನಾಡಿದರು.

TIMES interact
Connecting People, Connecting Needs.

ನಿಮ್ಮ ಕ್ಲಾಸಿಫೈಡ್ ಜಾಹೀರಾತಿಗಾಗಿ ಸಂಪರ್ಕಿಸಿ
080-40877 666, 40877 543
ಕರೆ ಮಾಡಿ : 99160 79232
narasinha.kulkarni@timesofindia.com

tender & notices

PUBLIC NOTICE

PUBLIC NOTICE

This is to notify the general public that one Sri. P.K. **Venugopal Reddy,** son of of late Krishna Reddy has represented that he is the sole and absolute owner in possession, free of all encumbrances over the immovable property being 10000 square feet of plot area, carved out of the larger extent of converted land comprised in New Survey No. 118/1, Khata no. 118/1/964, assigned New P.I.D. No. 14141667476, situated at Singasandra Village, Begur Hobli, Bengaluru South Taluk.

Pursuant to the negotiations, my client M/s. Emerald Developers, represented by its Managing partner Mr. Balaji Panem & the Land Owner have proposed to develop the said extent of 10,000 square feet on the basis of Joint Venture .

The aforesaid plot is morefully described in the Schedule written here under and hereinafter referred to as the " Schedule Property".

Any person/s having any manner of claim, right, title and/or interest of whatsoever nature over the Schedule Property or any part thereof shall file their objections to the proposed Joint Venture, together with supporting documents to the undersigned within **10 days** from the date of the publication of this notice.

If no objections are received within the stipulated time, it shall be presumed that the Schedule Property is free of all encumbrances and my client shall proceed with the execution and registration of the proposed Joint Development Agreement in respect of the Schedule Property, without any further reference.

SCHEDULE PROPERTY

All that piece and parcel of the immovable property being vacant land measuring 10000 square feet (carved out of the larger extent of converted land comprised in erstwhile Survey No. 118, New Survey No. 118/1, Khata no. 118/1/964) assigned New P.I.D. No. 14141667476, situated at Singasandra Village, Begur Hobli, Bengaluru 560 068, B.B.M.P. Singasandra,Ward No. 191 and bounded on the:

East by : Portion of land comprised in Sy. No.118/1,
West by : Sy. No.117,
North by : Road and
South by : remaining portion of land comprised in Sy. No.118/1.

Place : Bengaluru
Date :13/06/2026
Sd/-
B.N.KUMAR,
ADVOCATE & CONSULTANT
C/O "LAW EXPRESSIONS"
Advocates and Consultants
Office : # 261/C, I Floor, 4th Main Road,5th B Cross, HAL III Stage, Bengaluru - 560 075
E-mail : lawexpressions@gmail.com
M:9448277864, Ph:080-49901210

ವ್ಯಾಪಾರ BUSINESS

FOR SALE

BUSINESS (Name Kofresh) for Sale in Uttarahalli-Manufacturing unit of Snacks business incl goodwill & customers. Machines are 1yr old only. Price 12L (Neg). Cont: 8884253229

DEALERS

ಗ್ರ್ಯಾಂಡ್ ಟೀ ಫ್ಯಾಕ್ಟರಿ ಅಸ್ಸಾಂ ಹೋಟೆಲ್ ಬ್ಲೆಂಡ್ ಡೀಲರ್/ ಏಜೆಂಟ್‌ಗಳು ಬೇಕಾಗಿದ್ದಾರೆ ಕರೆ ಮಾಡಿ.9445822946

ಆಸ್ತಿಗಳು PROPERTY

BUNGALOW & VILLA

LUXURY 4BHK Villa For Sale in Goa, Pvt Swimming Pool, Fully furnished Rs 13.50 cre call: 9881931111 Broker Excuse.

FOR SALE

BANGALORE

HMT-LAYOUT Nagasandra plot for sale (Allotment Site) 30x40 North Facing 'A' Khata near CHRIST University 9945229737 / 9740092367

2-BHK For Sale in RR Nagar, behind Nimishamba temple.Car park,Lift,Balconies north entrc. Cont-9739378789

PROPERTY ANCILLARIES

LEASE & RENT

GODOWN / Warehouse Required Commercial Go-down / Warehouse of approximately 2,000 sq. ft. required on Rent/Lease for storage purposes in Rajajinagar, Rajkumar Road or WOC Road, Bengaluru. Ground Floor with Shutter Door is a must. Good road access and loading/unloading facilities preferred. Direct Owners Only. Brokers / Agents Kindly Excuse. Ct:9980885047. Email: surgitronic@gmail.com SURGITRONIC

ಉದ್ಯೋಗ RECRUITMENT

SITUATION VACANT

ACCOUNTS

ACCOUNTANT

REQUIRED Accountant with experience in TallyPrime / Tally ERP. Knowledge of GST. 1–3 years experience. B.Com preferred. Salary negotiable. Contact: 6361231869

WANTED Accountants B.A/ B.Com/M.Com for Printing Industry New Guddadhahalli Mys Rd, 9845151730/ 9900691118 bangaloreoffset@yahoo.co.in .

ADMINISTRATION

EXECUTIVES

ಪಾರ್ಟ್ ಟೈಮ್ನಲ್ಲಿ 2ನೇ ಆದಾಯ ಬಯಸುವ ನಿವೃತ್ತರು ಮಹಿಳೆಯರು ನಿರುದ್ಯೋಗಿಗಳು ಪ್ರತಿದಿನ ನಿಮ್ಮ ಬಿಡುವಿನ ವೇಳೆಯಲ್ಲಿ ಹಣ ಸಂಪಾದಿಸುವ ಅವಕಾಶ. 9743309498

TIMES TRIBUTE
PAYING HOMAGE TO THE DEPARTED SOUL
ದಿನಪತ್ರಿಕೆಯಲ್ಲಿ ತುರ್ತು ಸ್ಮರಣೆ ಅಥವಾ ನಿಧನ ಜಾಹೀರಾತು ಪ್ರಕಟಿಸಲು ನಾವು ಲಭ್ಯ
ನಾವು ನಿಮ್ಮ ಮನವಿಯನ್ನು ಕರೆ/ಇಮೇಲ್/ವಾಟ್ಸಪ್ ಮೂಲಕ ಸ್ವೀಕರಿಸುತ್ತೇವೆ
ತ್ವರಿತಗತಿಯಲ್ಲಿ ನಿಮ್ಮ ಪ್ರಕಟಣೆ/ ಜಾಹೀರಾತು ವಿನ್ಯಾಸ ಮಾಡಲಾಗುವುದು
ನೀವು ಅನುಮೋದಿಸಿದ ನಂತರ ಶುಲ್ಕವನ್ನು ಪೇಟಿಎಂ/ಎನ್‌ಇಎಫ್‌ಟಿ/ಆರ್‌ಟಿಜಿಎಸ್ ಮೂಲಕ ಪಾವತಿಸುವುದು.
ಸಂಪರ್ಕಿಸಿ: ನರಸಿಂಹ ಕುಲಕರ್ಣಿ–99160 79232
narasinha.kulkarni@timesofindia.com

JAPAN MNC Travel Co. Rqr Male Fleet Executives, below 35 Years, Expertise in Vehicle Maintenance & Driver Management. Good In English & Kannada, near Richmond circle, Jigani & Bidadi, work in shift. Mb 9886600678, 9606968880

WE are Hiring For Banking Collection DRA Team Leader, Tele caller's & Field Executives Salary Upto 20K to 40K+ Incentives:- 9035617826/ 96115 67790

MARKETING, ADVERTISING & SALES

SALES

WANTED: VAN SLAESMAN SALARY: 15000 - 25000. HARD WORKER AND GOOD COMMUNICATION NEEDED. CONTACT: 7339222015

MEDICAL

CHEMIST

WANTED D.PHARMA with 3 Years Experience for Turuvekere Town, Tumakuru Dist. Contact:- Dr BTC Murthy-9811907711

OTHER VACANCIES

GENERAL

ಧನ್ವಂತ್ ಎಜುಕೇಶನ್ ಟ್ರಸ್ಟ್ (ರಿ.), ತಾಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿ ಸಂಯೋಜಕರಾಗಿ ಕಾರ್ಯ ನಿರ್ವಹಿಸಲು ಆಸಕ್ತ ಅಭ್ಯರ್ಥಿಗಳು ಬೇಕಾಗಿದ್ದಾರೆ. ಸಂಪರ್ಕಿಸಿ: ಹೆಚ್ಚಿನ ಮಾಹಿತಿಗಾಗಿ: 99453 40782

WE Are Hiring - Video Editor Health Herald Part-Time / Full-Time Rs 20,000 - Rs 25,000 Salary 1-2 Years Experience Call: 9738854903

TECHNICAL

ENGINEERS

URGENT req UPS 1-80 KVA Service Engineers Exp in ABB APC, Luminous in India/Gulf, Salary 1.5Lac pm with Accom, W'Ap CV+Passport: 7503-009111

JOB WANTED

HIRING NOW Cashier (Basic Computer Knowledge) Sales Man. Salary 20,000 – 35,000 Jayanagar Chickpet Contact: 9448121073

WANTED Exp Field officer near doddbalapura and office accountant near Bangalore contact: 9845044293

CAUTION NOTICE
Publication reserves the right to withhold / cancel ads without prior notice and / or assigning any reason. Refund (if any) against such unpublished ads must be claimed at the booking offices.

ಸೇವೆಗಳು SERVICES

ASTROLOGY

SRI KANAKA JYOTHISHYA
Kanakadurga M
M.A. in Astrology, Ph.D. in Astrology (Pursuing)
HOROSCOPE Analysis, Career & Job Guidance, Gemology Consultation, Dosha Analysis & Remedies. Call: 88677 13329

REPAIRS/ WATERPROOFING

WATER PROOFING
HERE IS THE SOLUTION FOR LEAKAGE ... LEAKAGE ...
OLD/NEW BUILDING, Sump, Bathroom, Terrace Wallcrack Skylight, Water proofing done by New Technology. Ph: 9880916988

ಪ್ರವಾಸ TRAVEL

TOURS & TRAVELS

9 ದಿನಗಳ ಅಸ್ಸಾಂ ಮೇಘಾಲಯ ಅರುಣಾಚಲ್ ಪ್ರದೇಶ್ ಪ್ರವಾಸ 1/7 8 ದಿನ ಗುಜರಾತ್ ಪ್ರವಾಸ 5/8/26 9 ದಿನಗಳ ಅಯೋಧ್ಯ, ನೇಪಾಳ ಮುಕ್ತಿನಾಥ ಪ್ರವಾಸ 4/8, 13 ದಿನ ಚಾರ್ಧಾಮ್ ಪ್ರವಾಸ 26/8/2026, 9 ದಿನಗಳ ರಾಜಸ್ಥಾನ ಪ್ರವಾಸ 17/9, 7 ದಿನಗಳ ಕಾಶಿ ಪ್ರವಾಸ 16/8/26. ಸುವರ್ಣ ಯಾತ್ರಾ 6360146483 / 9008381022

27/06/2026 ರಿಂದ ನೇಪಾಳ ಮುಕ್ತಿನಾಥ್ ಕಟ್ಮಾಂಡು ಅಯೋಧ್ಯೆ ಕಾಶಿ ಪ್ರಯಾಗ್ ರಾಜ್ ವಿಮಾನದಲ್ಲಿ ಎಲ್ಲಾ ಸೇರಿ ರೂ 50000/ - ಸಂಪರ್ಕಿಸಿ ಶ್ರೀ ರಾಮ್ ಟೂರ್ಸ್ 9606600383

personal

CHANGE OF NAME

I, Sai Mira D/O T Jagadeesh R/o R/o A -101 Definer Serene Drive Pethanahalli Hosakote Bangalore 562114 have changed my name to Sai Mira J Nair .

I, Saanvi Viswanadha D/o MVD Viswanadha Murthy, R/o B203, Keerthi Harmony, TC Palya Main Road, Ramamurthy Nagar, Bengaluru-16 have changed my name to Saanvi Murthy

I, Priyadarshini Kumar, Flat #113, 1st Floor, Vaasthu Hill View-3, Bangarappa Main Road, Rajarajeshwari nagar B'lore-560098, have changed my name to Priyadarshini Kumar Reddy.

I, Ayesha Sumaiya Banu R/at. 1/8, 1st cross, 1st main, Munireddypalya, J C Nagar B'luru–560066, have changed my name to Ayesha Sumaiya on 13/06/2026 at Bengaluru.

I Mohamed Ghouse Peer S/o Shaik Mahaboob R/o Arakanakatte, Dasihalli, Mayasandra, Turuvukere, Tumakuru 572221 have changed my name as Mohammed Ghouse Peer.

PRIME PROPERTY

SITES FOR SALE
DC Converted with E Khata
Near Factory Circle & Tafe Factory, 2 KM from Doddabalapura Main Road, Near Bashettihalli
100% Clear Title
Ready for Registration
Banks Loan Available
7022446922

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳನ್ನು ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಂದಿಗೆ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆಯು ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು

OBITUARY

REMEMBRANCES

7ನೇ ವರ್ಷದ ಪುಣ್ಯಸ್ಮರಣೆ

ದಿ. ಆರ್. ಶ್ರೀನಿವಾಸ್ (ವಾಸು)
(14.06.2019)
ಶ್ರೀ ರುದ್ರಪ್ಪ–ಜಯಮ್ಮನವರ ಪುತ್ರ ನೀವು ನಮ್ಮನ್ನಗಲಿ ಇಂದಿಗೆ (14.06.2026) 7ವರ್ಷವಾಯಿತು. ನಿಮ್ಮ ಆತ್ಮಕ್ಕೆ ದೇವರು ಚಿರಶಾಂತಿ ನೀಡಲಿ ಎಂದು ಪ್ರಾರ್ಥಿಸುತ್ತೇನೆ.
ಇಂತಿ, ದುಃಖಿತಪ್ತರು:
ತಾಯಿ – ಜಯಮ್ಮ,
ತಂಗಿ – ಅಭಿನಯ,
ತಮ್ಮ – ಚೆಲುವರಾಜ್,
ಅಣ್ಣ –ಶಂಕರ್ ಮತ್ತು ಬಂಧು ಮಿತ್ರರು.

ಎಚ್ಚರಿಕೆ ನೋಟೀಸು
ಪ್ರಕಾಶಕರು ಪೂರ್ವ ಸೂಚನೆ ನೀಡದೆಯೇ ಮತ್ತು /ಅಥವಾ ಯಾವುದೇ ಕಾರಣ ನೀಡದೆ ಜಾಹೀರಾತುಗಳನ್ನು ತಡೆ ಹಿಡಿಯುವ / ರದ್ದುಪಡಿಸುವ ಅಧಿಕಾರವನ್ನು ಕಾಯ್ದಿರಿಸಿಕೊಂಡಿರುತ್ತಾರೆ. ಹೀಗೆ ಪ್ರಕಟವಾಗದ ಜಾಹೀರಾತುಗಳು (ಇದ್ದಲ್ಲಿ) ಸಂಬಂಧಿತ ಮರುಪಾವತಿಗಳಿಗಾಗಿ ಬುಕಿಂಗ್ ಕಚೇರಿಗಳಲ್ಲಿ ಕ್ಲೇಮು ಸಲ್ಲಿಸಬೇಕು.

ಜೀವನ ಸಂಗಾತಿ
Love finds it's match.

WANTED BRIDES



WANTED GROOMS

ವೈವಾಹಿಕ MATRIMONIALS

WANTED BRIDES

BY RELIGION

CHRISTIAN

43 year old Malayali Christian; 5"4', working in a tech company; well settled in Bangalore 9740209438

HINDU

BRIDE Wanted for the Hindu, MBBS Doctor (44 yrs) residing in Sangli, Maharashtra. For more details call 8378050149 / 8329865948.

GENERAL

CASTE NO BAR

ಬ್ರಾಹ್ಮಣ ವರನಿಗೆ ವಧು ಬೇಕಾಗಿದೆ. ಜಾತಿಯ ಅಭ್ಯಂತರವಿಲ್ಲ. (ದಲ್ಲಾಳಿಗಳಿಗೆ ಅವಕಾಶವಿಲ್ಲ). ಮೊ.: 9535535532

40 ವರ್ಷದ ಕ್ರಿಶ್ಚಿಯನ್ ವಿಚ್ಛೇದಿತ ವರನಿಗೆ, ವಧು ಬೇಕಾಗಿದ್ದಾರೆ. ಜಾತಿಯ ಅಭ್ಯಂತರ ವಿಲ್ಲ. ಸಂಪರ್ಕಿಸಿ: 99004 26772.

HINDU Man Aged 40 years, MBA-MNC, Separated Own House well settled in Bangalore seeks Suitable Bride Divorcee/ Widow No Bars.Call: 9686864650

49 ವರ್ಷದ ವರನಿಗೆ ವಧೂ ಬೇಕಾಗಿದೆ. ಸ್ವಂತ ಉದ್ಯೋಗ ಜಾತಿ/ವಯಸ್ಸು ಅಭ್ಯಂತರವಿಲ್ಲ. ನೇರವಾಗಿ ಸಂಪರ್ಕಿಸಿ: 8548042722

BY LANGUAGE

GUJARATI

JULY 1999 B.TECH IT 5'.8" Software Engineer MNC Bengaluru 65+LPA Mumbai family seeks working-Educated girl-9224449011.

MARRIAGE BUREAUS

ವಧು–ವರ ನೊಂದಾವಣಿ ಮೇಳ ಪ್ರತಿ ದಿನ ಬನಶಂಕರಿ ವಧು–ವರ ಕೇಂದ್ರ 3ನೇ ಹಂತ, ಬೆಂಗಳೂರು-85. ಕರೆ ಮಾಡಿ ಫೋನ್ ಮೂಲಕ ನೊಂದಾವಣೆ, ರೂ. 100/-. ಸಂ.: 94480 85688. ರಾಜ್ಯದಲ್ಲಿರುವ ಕುರುಬರು, ಒಕ್ಕಲಿಗರು ಎಲ್ಲಾ ಜಾತಿ ವಧು–ವರರು ಮರು ಮದುವೆ, 23-60 ವರ್ಷ.

ಸದ್ಗುರು ಮ್ಯಾರೇಜಸ್
ಎಲ್ಲಾ ಜಾತಿಯ ವಧು-ವರರು, ವಿಧುರರು, ವಿಧವೆಯರು, ವಿಚ್ಛೇದಿತರು ನೇರ ಸಂಪರ್ಕಿಸಿ
ಡಾ. ಹಿರೇಮಠ್ ಗುರೂಜಿ
94482 29184
78996 25268

WANTED GROOMS

BY CASTE

BRAHMIN

(ಬ್ರಾಹ್ಮಣ): ವಯಸ್ಸು 18 ರಿಂದ 50 ವರ್ಷದೊಳಗಿನ PUC, Degree, Diploma ಕಲಿತಿರುವ ವಧುಗಳಿಗೆ ಗುಣವಂತ ವರಗಳು ಬೇಕಾಗಿದ್ದಾರೆ. (ಸಪ್ತಪದಿ ಬ್ರಾಹ್ಮಣ ವಿವಾಹ ವೇದಿಕೆ, ಶಿವಮೊಗ್ಗ): 8884794406

GENERAL

CASTE NO BAR

2ನೇ ಸಂಬಂಧಕ್ಕೆ ವರ ಬೇಕಾಗಿದ್ದಾರೆ. ವಯಸ್ಸು 34 ವರ್ಷ, ಜಾತಿ ಕುರುಬ, ನೇರವಾಗಿ ಸಂಪರ್ಕಿಸಿ 8861424571. ಜಾತಿ, ವಯಸ್ಸು ಅಭ್ಯಂತರವಿಲ್ಲ.

KAYASTHA 39/5'4" SW engg. Pro Manager top MNC B'lore, mutual dvc no kids, seeks boy wkg in B'lore/Pune High caste no bar 9795320972

CAUTION
This newspaper does not vouch or subscribe to the claims and representations made by the advertisers regarding the particulars of status, age and income of the brides/ bridegrooms.
ADVERTISEMENT MANAGER

ತನಿಖೆಗೆ ಸ್ಪೀಕರ್ ಅನುಮತಿ ನಿರಾಕರಿಸಲಾಗದು

ಬಿಜೆಪಿ ಸೇರಲು ಜೆಡಿಎಸ್ ಶಾಸಕರಿಗೆ ಹಣದ ಆಮಿಷ ಪ್ರಕರಣದಲ್ಲಿ ಹೈಕೋರ್ಟ್ ತೀರ್ಪು

■ **ವಿಕ ಸುದ್ದಿಲೋಕ** ಬೆಂಗಳೂರು

ಜನಪ್ರತಿನಿಧಿಗಳಾದ ಶಾಸಕರನ್ನು ನೇಮಕ ಮಾಡುವ ಅಧಿಕಾರ ತಮಗಿಲ್ಲವೆಂಬ ಕಾರಣ ನೀಡಿ ವಿಧಾನಸಭಾಧ್ಯಕ್ಷರು ಶಾಸಕರ ವಿರುದ್ಧದ ಪ್ರಾಸಿಕ್ಯೂಷನ್‌ಗೆ ಅನುಮತಿ ನಿರಾಕರಿಸಲು ಸಾಧ್ಯವಿಲ್ಲ ಎಂದು ಹೈಕೋರ್ಟ್ ಆದೇಶಿಸಿದೆ.

ಅಲ್ಲದೆ, ಸಂಸದರು, ಶಾಸಕರು ಸಾರ್ವಜನಿಕರ ಸೇವಕರೆಂದು ಸುಪ್ರೀಂಕೋರ್ಟ್ ತಿಳಿಸಿದ್ದು, ತನಿಖಾ ಸಂಸ್ಥೆಗಳು ಅಥವಾ ಖಾಸಗಿ ದೂರುದಾರರು ಆರೋಪಪಟ್ಟಿ ಸಲ್ಲಿಸುವ ಮುನ್ನ ಸದನದ ಸಭಾಧ್ಯಕ್ಷರು ಅಥವಾ ಸ್ಪೀಕರ್ ಅವರಿಂದ ಅನುಮತಿ ಪಡೆಯುವುದು ಕಡ್ಡಾಯವಾಗಿದೆ ಎಂದು ತಿಳಿಸಿದೆ.

ಬಿಜೆಪಿ ಸೇರಲು ಜೆಡಿಎಸ್ ಶಾಸಕರಿಗೆ ಹಣದ ಆಮಿಷವೊಡ್ಡಿದ ಆರೋಪ ಸಂಬಂಧ ಶಾಸಕರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನಿರಾಕರಿಸಿದ್ದ ಸ್ಪೀಕರ್ ಕಚೇರಿಯ ಕ್ರಮ ಪ್ರಶ್ನಿಸಿ ಪ್ರಕರಣದ ಖಾಸಗಿ ದೂರುದಾರ ಹಾಗೂ ಸಾಮಾಜಿಕ ಹೋರಾಟಗಾರ ಟಿ.ಜೆ. ಅಬ್ರಹಾಂ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಎಸ್.ಸುನಿಲ್‌ದತ್ ಯಾದವ್ ಅವರಿದ್ದ ಏಕಸದಸ್ಯ ಪೀಠ, ಸ್ಪೀಕರ್ ಕಚೇರಿಯ ಹಿಂಬರಹವನ್ನು ರದ್ದುಪಡಿಸಿದೆ.

ಅಲ್ಲದೆ, ''ಶಾಸಕರನ್ನು ಸ್ಪೀಕರ್ ನೇಮಕ ಮಾಡುವುದಿಲ್ಲ ಎಂಬ ಕಾರಣ ನೀಡಿ ತನಿಖೆಗೆ ಅನುಮತಿ ನೀಡಲು ನಿರಾಕರಿಸಿರುವ ಸ್ಪೀಕರ್ ಕಚೇರಿಯ ಆದೇಶ ಕಾನೂನು ಬದ್ಧವಾಗಿಲ್ಲ. ಸಂಸದರು ಮತ್ತು ಶಾಸಕರು ಸಾರ್ವಜನಿಕರ ಸೇವಕರೆಂದು ಸುಪ್ರೀಂಕೋರ್ಟ್ ಪಿ.ವಿ.ನರಸಿಂಹರಾವ್ ಪ್ರಕರಣದಲ್ಲಿ ಸ್ಪಷ್ಟಪಡಿಸಿದೆ. ಅದರಂತೆ ತನಿಖಾ ಸಂಸ್ಥೆಗಳು ಅಥವಾ ಖಾಸಗಿ

ದೂರುದಾರರು ಆರೋಪಪಟ್ಟಿ ಸಲ್ಲಿಸುವ ಮುನ್ನ ಸದನದ ಸ್ಪೀಕರ್ ಅವರಿಂದ ಅನುಮತಿ ಪಡೆಯುವುದು ಕಡ್ಡಾಯವಾಗಿದೆ,'' ಎಂದು ನ್ಯಾಯಪೀಠ ತಿಳಿಸಿದೆ.

ಸ್ಪೀಕರ್ ತಾಂತ್ರಿಕ ಕಾರಣಗಳನ್ನು ಬದಿಗಿಟ್ಟು, ದೂರುದಾರರ ಅರ್ಜಿಯನ್ನು ಕಾನೂನು ಚೌಕಟ್ಟಿನಲ್ಲಿ ಮರುಪರಿಶೀಲಿಸಿ ಸೂಕ್ತ ಆದೇಶ ಹೊರಡಿಸಬೇಕು ಎಂದು ತಿಳಿಸಿ ಪ್ರಕರಣವನ್ನು ಮತ್ತೆ ಸ್ಪೀಕರ್ ಕಚೇರಿಗೆ ರವಾನಿಸಿದೆ.

ಪ್ರಕರಣದ ಹಿನ್ನೆಲೆ: 'ಬಿಜೆಪಿಗೆ ಸೇರ್ಪಡೆಯಾದರೆ 30 ಕೋಟಿ ರೂ. ನೀಡುವುದಾಗಿ ತಿಳಿಸಿದ್ದು, ಮುಂಗಡವಾಗಿ 5 ಕೋಟಿ ರೂ.ಗಳನ್ನು ನೀಡಲಾಗಿದೆ. ಆ ಹಣವನ್ನು ಎರಡು ತಿಂಗಳು ಕಾಲ ತನ್ನ ಮನೆಯಲ್ಲಿರಿಸಿಕೊಂಡು ಮಾಜಿ ಸಿಎಂ ಕುಮಾರಸ್ವಾಮಿ ಸಮ್ಮುಖದಲ್ಲಿ ಹಿಂದಿರುಗಿಸಲಾಯಿತು' ಎಂದು ಕೋಲಾರ ಶಾಸಕ ಕೆ.ಶ್ರೀನಿವಾಸ ಗೌಡ ಬಹಿರಂಗವಾಗಿ ಹೇಳಿಕೆ ನೀಡಿದ್ದರು.

ಆ ಸಂಬಂಧ ಭ್ರಷ್ಟಾಚಾರ ನಿಗ್ರಹ ದಳಕ್ಕೆ ದೂರು ನೀಡಿದ್ದ ಅರ್ಜಿದಾರ ಅಬ್ರಹಾಂ, ಅಂದಿನ ಡಿಸಿಎಂ ಡಾ. ಸಿ.ಎನ್.ಅಶ್ವಥ್ ನಾರಾಯಣ, ಶಾಸಕ ಎಸ್.ಆರ್. ವಿಶ್ವನಾಥ್, ವಿಧಾನ ಪರಿಷತ್ ಸದಸ್ಯರಾಗಿದ್ದ ಸಿ.ಪಿ.ಯೋಗೇಶ್ವರ್, ಮಾಜಿ ಸಿಎಂ ಎಚ್.ಡಿ.ಕುಮಾರಸ್ವಾಮಿ ವಿರುದ್ಧ ದೂರು ನೀಡಿದ್ದರು. ಎಸಿಬಿ ದೂರು ದಾಖಲಿಸಿಕೊಳ್ಳದ ಹಿನ್ನೆಲೆಯಲ್ಲಿ ವಿಶೇಷ ನ್ಯಾಯಾಲಯದಲ್ಲಿ ಖಾಸಗಿ ದೂರು ದಾಖಲಿಸಿದ್ದರು.

ಪ್ರಕರಣದ ವಿಚಾರಣೆ ನಡೆಸಿದ್ದ ವಿಶೇಷ ನ್ಯಾಯಾಲಯ, ದೂರಿನ ತನಿಖೆ ಮುಂದುವರಿಸಲು ಭ್ರಷ್ಟಾಚಾರ ಪ್ರತಿಬಂಧಕ ಕಾಯಿದೆಯಡಿ ಸ್ಪೀಕರ್ ಅವರಿಂದ ಪೂರ್ವಾನುಮತಿ ಪಡೆಯುವಂತೆ ದೂರುದಾರರಿಗೆ ಸೂಚಿಸಿತ್ತು. ಅದರಂತೆ ಅಬ್ರಹಾಂ ಅನುಮತಿ ಕೋರಿ ಸ್ಪೀಕರ್‌ಗೆ ಮನವಿ ಮಾಡಿದ್ದರು. ಮನವಿ ತಿರಸ್ಕರಿಸಿದ್ದ ಸ್ಪೀಕರ್ ಕಚೇರಿ, 'ವಿಧಾನಸಭಾ ಸದಸ್ಯರು ಜನರಿಂದ ಚುನಾಯಿತರಾದವರು. ಅವರನ್ನು ಸ್ಪೀಕರ್ ನೇಮಕ ಮಾಡುವುದಿಲ್ಲ, ಆದ್ದರಿಂದ ಅವರ ವಿರುದ್ಧ ತನಿಖೆ ನಡೆಸಲು ಅನುಮತಿ ನೀಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ' ಎಂದು ಮನವಿಯನ್ನು ತಿರಸ್ಕರಿಸಿತ್ತು. ಅದನ್ನು ಪ್ರಶ್ನಿಸಿ ಅಬ್ರಹಾಂ ಹೈಕೋರ್ಟ್ ಮೊರೆ ಹೋಗಿದ್ದರು.

ಅಮೆರಿಕ ನೆರವು ಉಗ್ರವಾದ ಪೋಷಣೆಗೆ ಬಳಕೆ

ಆರು ಮಂದಿ ವಿರುದ್ಧ ಎಫ್‌ಐಆರ್ ದಾಖಲು | ತನಿಖೆಗೆ ಸಜ್ಜಾದ ಎನ್‌ಐಎ

■ **ವಿಕ ಸುದ್ದಿಲೋಕ** ಬೆಂಗಳೂರು

ಅಮೆರಿಕದ ಕ್ರಿಶ್ಚಿಯನ್ ಸ್ವಯಂ ಸೇವಾ ಸಂಸ್ಥೆಯಿಂದ ಪಡೆದ 92.55 ಕೋಟಿ ರೂ.ಗಳನ್ನು ನಕ್ಸಲ್ ಅಥವಾ ಭಯೋತ್ಪಾದನಾ ಚಟುವಟಿಕೆಗಳಿಗೆ ಬಳಕೆ ಮಾಡಿರುವ ಕುರಿತು ಅನುಮಾನ ವ್ಯಕ್ತಪಡಿಸಿರುವ ಜಾರಿ ನಿರ್ದೇಶನಾಲಯವು, ಈ ಸಂಬಂಧ ತನಿಖೆ ನಡೆಸುವಂತೆ ನಗರ ಪೊಲೀಸರಿಗೆ ದೂರು ನೀಡಿದೆ.

ಈ ಬೆನ್ನಲ್ಲೇ ಅಮೆರಿಕದ ' ದಿ ತಿಮೋತಿ ಇನ್ನಿಷಿಯೇಟಿವ್' (ಟಿಟಿಐ) ಸಂಸ್ಥೆ ಹಾಗೂ ಸಂಸ್ಥೆಯ ಪ್ರತಿನಿಧಿಗಳಾದ ದೊಡ್ಡಗುಬ್ಬಿಯ ಜೊನಾಥನ್ ಎಸ್.ರಾಜನ್, ಮೈಕ್ ಮಾರ್ಕ್, ಅಜಿತ್ ವರ್ಗೀಸ್ ಮಥಾಯ್, ಛತ್ತೀಸ್‌ಗಢದ ವರ್ಗೀಸ್ ಚಾಕೋ, ಅಸ್ಸಾಂನ ಬಬ್ಲುಕುರ್ರಿ, ಮೈಸೂರಿನ ಸುಪ್ರೀಂ ಜಾಯ್ ವಿರುದ್ಧ ಕೊತ್ತನೂರು ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಕ್ರಿಮಿನಲ್ ಪಿತೂರಿ, ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯಿದೆ, ವಂಚನೆ, ಫೆಮಾ ಉಲ್ಲಂಘನೆ, ನಕಲಿ ದಾಖಲೆ ಸೃಷ್ಟಿ ಸೇರಿ ಗಂಭೀರ ಆರೋಪಗಳ ಅನ್ವಯ ಆರೋಪಿಗಳ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ. ಪ್ರಕರಣದ ತನಿಖೆ ಕೈಗೆತ್ತಿಕೊಳ್ಳಲು ಮುಂದಾಗಿರುವ ರಾಷ್ಟ್ರೀಯ ಭದ್ರತಾ ತನಿಖಾ ದಳದ(ಎನ್ಐಎ) ಅಧಿಕಾರಿಗಳು ನಗರ ಪೊಲೀಸ್ ಆಯುಕ್ತರ ಜತೆ ಚರ್ಚೆ ನಡೆಸಿದ್ದಾರೆ. ಪ್ರಕರಣವನ್ನು ವರ್ಗಾಯಿಸುವಂತೆ

ನಕ್ಸಲ್ ಅಥವಾ ಭಯೋತ್ಪಾದನಾ ಚಟುವಟಿಕೆಗಳಿಗೆ 92.55 ಕೋಟಿ ರೂ.ಬಳಕೆ ಅನುಮಾನ

ಕೋರಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಇ.ಡಿ ತನಿಖೆಯಲ್ಲಿ ಬಯಲು: ಅಮೆರಿಕ ಮೂಲದ ಸ್ವಯಂಸೇವಾ ಸಂಸ್ಥೆಯಿಂದ ನೆರವು ಸ್ವೀಕರಿಸಿ ಅಕ್ರಮವಾಗಿ ವರ್ಗಾವಣೆ ಮಾಡಿರುವ ಮಾಹಿತಿ ಮೇರೆಗೆ ಇ.ಡಿ ಅಧಿಕಾರಿಗಳು ಏಪ್ರಿಲ್ 18 ಹಾಗೂ 19ರಂದು ಜೋನಾಥನ್ ಕಚೇರಿ ಸೇರಿ ಹಲವೆಡೆ ದಾಳಿ ನಡೆಸಿ ಹಣಕಾಸು ವಹಿವಾಟಿನ ದಾಖಲೆ ಜಪ್ತಿ ಮಾಡಿದ್ದರು.

ಹಣಕಾಸು ವಹಿವಾಟು ಪರಿಶೀಲಿಸಿದಾಗ ಜೋನಾಥನ್ ಮತ್ತು ಇತರರು ಟಿಟಿಐ ಸಂಸ್ಥೆಯ ಸಹಭಾಗಿತ್ವದಲ್ಲಿ 2025ರಿಂದ 2026ರ ಏಪ್ರಿಲ್‌ವರೆಗೆ ನಿಯಮಗಳನ್ನು ಉಲ್ಲಂಘಿಸಿ 92.55 ಕೋಟಿ ರೂ. ಪಡೆದಿರುವುದು ಗೊತ್ತಾಗಿದೆ. ಬಳಿಕ ಟ್ರೂಯಿಸ್ಟ್ ಬ್ಯಾಂಕ್ ಯುಎಸ್‌ಎ ನೀಡಿರುವ ವಿದೇಶಿ ಡೆಬಿಟ್ ಕಾರ್ಡ್‌ಗಳನ್ನು ಬಳಸಿ ಅಸ್ಸಾಂ, ಛತ್ತೀಸ್‌ಗಢ ಹಾಗೂ ಕರ್ನಾಟಕದಲ್ಲಿ 44 ಕೋಟಿ ರೂ. ಡ್ರಾ ಮಾಡಿದ್ದಾರೆ ಎಂದು ಇ.ಡಿ ಅಧಿಕಾರಿಗಳು ದೂರಿನಲ್ಲಿ ವಿವರಿಸಿದ್ದಾರೆ.

ಪ್ರಮುಖವಾಗಿ ಛತ್ತೀಸ್‌ಗಢದ ನಕ್ಸಲ್ ಪೀಡಿತ ಪ್ರದೇಶಗಳಾದ ಬಸ್ತಾರ್, ಧಮತರಿಯಲ್ಲಿ 6.34 ಕೋಟಿ ರೂ. ವಿತ್ ಡ್ರಾ ಮಾಡಲಾಗಿದೆ. ಪ್ರತ್ಯೇಕವಾಗಿ 3.2 ಕೋಟಿ ರೂ.ಗಳನ್ನು ಡ್ರಾ ಮಾಡಲಾಗಿದೆ. ಒಟ್ಟಾರೆ 3,200 ಸಲ ವಹಿವಾಟು ನಡೆಸಲಾಗಿದೆ ಎಂದು ಎಫ್‌ಐಆರ್‌ನಲ್ಲಿ ವಿವರಿಸಲಾಗಿದೆ. ಅಮೆರಿಕದಿಂದ ನೆರವು ಪಡೆದು ಧರ್ಮೋಪದೇಶ, ಎಡಪಂಥೀಯ ಉಗ್ರವಾದಕ್ಕೆ ಯುವಕರನ್ನು ಅಣಿಗೊಳಿಸಲು ಬಳಕೆ ಮಾಡಿರುವ ಶಂಕೆಯಿದೆ. ಇದಕ್ಕೆ ಪೂರಕವಾಗಿ ಆರೋಪಿಗಳು ವಂಚನೆ ಉದ್ದೇಶಕ್ಕೆ ನಕಲಿ ದಾಖಲೆ ಸೃಷ್ಟಿಸಿರುವುದು, ಭಯೋತ್ಪಾದಕ ಕೃತ್ಯವೆಸಗಲು ಒಳಸಂಚು ನಡೆಸಿದ್ದಾರೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಒಬ್ಬನ ಹೆಸರಲ್ಲಿ ಕಾರ್ಡ್: ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಆರೋಪಿ ಮೈಕ್ ಮಾರ್ಕ್‌ನನ್ನು ವಶಕ್ಕೆ ಪಡೆದಾಗ ಆತನ ಬಳಿ 24 ವಿದೇಶಿ ಡೆಬಿಟ್ ಕಾರ್ಡ್‌ಗಳು ಸಿಕ್ಕಿದ್ದವು. ಈ ಕಾರ್ಡ್‌ಗಳನ್ನು ತರುವ ಸಲುವಾಗಿಯೇ ವಿದೇಶಕ್ಕೆ ತೆರಳುತ್ತಿದ್ದ. ಪ್ರತಿ ಡೆಬಿಟ್ ಕಾರ್ಡ್‌ನಲ್ಲಿ ಸಂತೋಷ್‌ಕುಮಾರ್ ಎಂಬಾತನ ಹೆಸರಿದೆ. ಇದೇ ಮಾದರಿಯಲ್ಲಿ 1,000ಕ್ಕೂ ಹೆಚ್ಚು ಡೆಬಿಟ್ ಕಾರ್ಡ್‌ಗಳು ಬಳಕೆಯಾಗಿದ್ದು, ಹಣ ವಿತ್ ಡ್ರಾ ಮಾಡಲು ಬಳಸಲಾಗಿದೆ ಎಂದು ದೂರಿನಲ್ಲಿ ವಿವರಿಸಲಾಗಿದೆ.

ಮೂವರು ನೀರು ಪಾಲು

■ **ವಿಕ ಸುದ್ದಿಲೋಕ** ಬೆಂಗಳೂರು

ಬೆಂಗಳೂರಿನ ರಾಮಚಂದ್ರ ಪುರಂನಿಂದ ಡೋರನಹಳ್ಳಿ ಜಾತ್ರೆಗೆ ಬಂದಿದ್ದ ವೇಳೆ ಕಾಲು ಜಾರಿ ನಾಲೆಗೆ ಬಿದ್ದ ತಮ್ಮ ಇಬ್ಬರು ಮಕ್ಕಳನ್ನು ತಂದೆ ರಕ್ಷಿಸಿರು, ಆದರೆ ಅವರು ನೀರುಪಾಲಾದರು. ಪ್ರಭುದೇವ (42) ಮೃತರು. ಬೆಂಗಳೂರಿನಿಂದ ಜಾತ್ರೆಗೆಂದು ಆಟೊದಲ್ಲಿಯೇ ಬಂದಿದ್ದ ಕುಟುಂಬ ಬಲದಂಡೆ ನಾಲೆ ಬಳಿ ತೆರಳುತ್ತಿದ್ದಾಗ ಐದು ವರ್ಷದ ಮಗು ಆಯತಪ್ಪಿ ಕಾಲುವೆಗೆ ಬಿತ್ತು. ಮಗುವನ್ನು ಹಿಡಿಯಲು ಹೋದ 12 ವರ್ಷದ ಬಾಲಕ ಕೂಡ ನಾಲೆಗೆ ಬಿದ್ದ ಮಕ್ಕಳನ್ನು ರಕ್ಷಿಸಲೆಂದು

ಪ್ರಭುದೇವ ನಾಲೆಗೆ ಜಿಗಿದು, ಇಬ್ಬರು ಮಕ್ಕಳನ್ನು ರಕ್ಷಿಸಿದರು ಆದರೆ ಅವರು ನಾಲೆಯಿಂದ ಮೇಲೇರಲಾಗದೆ ಮುಳುಗಿ ಮೃತಪಟ್ಟರು.

ಇಬ್ಬರು ಮಕ್ಕಳ ದುರ್ಮರಣ: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ತಾಲೂಕಿನ ತೊಗರಿ ಘಟ್ಟದಲ್ಲಿ ಕೃಷಿ ಹೊಂಡಕ್ಕೆ ಬಿದ್ದ ದಕ್ಷಾ (11), ಧನುಷ (4) ಮೃತಪಟ್ಟಿದ್ದಾರೆ. ಮಕ್ಕಳು ಶನಿವಾರವಾದ ಕಾರಣ ಆಟವಾಡಲು ತೆರಳಿದ್ದ ವೇಳೆ ಈ ಅವಘಡ ಸಂಭವಿಸಿದೆ.

ವಿಕಸಿತ ಭಾರತಕ್ಕೆ ವಿಜ್ಞಾನವೇ ದಿಕ್ಸೂಚಿ

'ರೈಸ್ ಕಾನ್‌ಕ್ಲೇವ್–2026'ಕ್ಕೆ ಚಾಲನೆ ನೀಡಿದ ಕೇಂದ್ರ ಸಚಿವ ಜಿತೇಂದ್ರ ಸಿಂಗ್

■ **ವಿಕ ಸುದ್ದಿಲೋಕ** ಬೆಂಗಳೂರು

'ವಿಕಸಿತ ಭಾರತ 2047'ರ ಗುರಿ ತಲುಪಲು ವಿಜ್ಞಾನ, ತಂತ್ರಜ್ಞಾನ ಮತ್ತು ನಾವೀನ್ಯತೆಗಳು ಪ್ರಮುಖ ಪಾತ್ರ ವಹಿಸಲಿವೆ ಎಂದು ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಡಾ. ಜಿತೇಂದ್ರ ಸಿಂಗ್ ತಿಳಿಸಿದರು.

ಸಿಎಸ್‌ಐಆರ್–ಎನ್‌ಎಎಲ್ ಹಾಗೂ ಸಿಎಸ್‌ಐಆರ್–4ಪಿಐ ಸಂಸ್ಥೆಗಳು ಜಂಟಿಯಾಗಿ ಆಯೋಜಿಸಿರುವ 'ರೈಸ್ ಕಾನ್‌ಕ್ಲೇವ್–2026'ಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

''2015ರಲ್ಲಿ ಆರಂಭವಾದ ಭಾರತದ ಸ್ಟಾರ್ಟ್‌ಅಪ್ ಆಂದೋಲನ ಒಂದು ಹೊಸ ಪರಿಕಲ್ಪನೆಯಿಂದ ದೇಶದ ಆರ್ಥಿಕ ದಿಕ್ಸೂಚಿ ಬದಲಾಯಿಸಿದೆ. ಕಳೆದ ದಶಕದಲ್ಲಿ ಸುಮಾರು 25 ಲಕ್ಷ ಉದ್ಯೋಗಗಳನ್ನು ಸೃಷ್ಟಿಸಿರುವ 2,30,000ಕ್ಕೂ ಹೆಚ್ಚು ಮಾನ್ಯತೆ ಪಡೆದ ಸ್ಟಾರ್ಟ್‌ಅಪ್‌ಗಳನ್ನು ಭಾರತ ಹೊಂದಿದೆ,'' ಎಂದರು.

''ಯಾರಿಗೆ ಉತ್ಸಾಹ, ಬದ್ಧತೆ ಮತ್ತು ತಾಂತ್ರಿಕ ಜ್ಞಾನವಿದೆಯೋ ಅವರಿಗೆ ಯಶಸ್ವಿ ಸ್ಟಾರ್ಟ್‌ಅಪ್ ಕಟ್ಟುವ ಅವಕಾಶ ಮುಕ್ತವಾಗಿದೆ. ಅಂಥವರ ಶೈಕ್ಷಣಿಕ ಅರ್ಹತೆ ಏನೇ ಇರಲಿ, ಅಗತ್ಯವಿರುವ ತಾಂತ್ರಿಕ ಮಾರ್ಗದರ್ಶನ ನೀಡಲು ಸರಕಾರ ಬದ್ಧವಾಗಿದೆ,'' ಎಂದರು.

ರಕ್ಷಣಾ ರಫ್ತಿನಲ್ಲಿ ಐತಿಹಾಸಿಕ ಗುರಿ: ''ಭಾರತ 2025–26ನೇ ಹಣಕಾಸು ವರ್ಷದಲ್ಲಿ ರಕ್ಷಣಾ ರಫ್ತಿನಲ್ಲಿ ಐತಿಹಾಸಿಕ 23,000 ಕೋಟಿ ರೂ. ಗುರಿ ಸಾಧಿಸಿದೆ. 2047ರ ಸ್ವಾತಂತ್ರ್ಯದ ಶತಮಾನೋತ್ಸವ ಸಂದರ್ಭದಲ್ಲಿ ಇಂದಿನ ಯುವ ಪೀಳಿಗೆಯೇ ದೇಶ ಮುನ್ನಡೆಸಲಿದೆ,'' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಇಸ್ರೊ ಮಹಾನಿರ್ದೇಶಕಿ ಡಾ. ಕಲ್ಪೆಸೆಲ್ವಿ ಮಾತನಾಡಿ, ''ಈ ಸಮಾವೇಶದಲ್ಲಿ ಬಾಷ್, ಐಬಿಎಂ, ಇಸ್ರೊ, ಐಐಎಸ್‌ಸಿ ಮುಂತಾದ ಪ್ರಮುಖ ಸಂಸ್ಥೆಗಳ ತಜ್ಞರು ಭಾಗವಹಿಸುತ್ತಿದ್ದಾರೆ. ಪ್ರದರ್ಶನದಲ್ಲಿ ಸಿರಿಧಾನ್ಯ ಕ್ರಾಂತಿ, ಪ್ರೋಟೀನ್ ಆವಿಷ್ಕಾರಗಳಂತಹ ಕ್ಷೇತ್ರಗಳಲ್ಲಿ ಮಹಿಳಾ ಉದ್ಯಮಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗ ವಹಿಸಿರುವುದು ಮಹಿಳಾ ಸಬಲೀಕರಣಕ್ಕೆ ಹಿಡಿದ ಕನ್ನಡಿಯಾಗಿದೆ,'' ಎಂದರು.

ಸಿಎಸ್‌ಐಆರ್–ಎನ್‌ಎಎಲ್ ನಿರ್ದೇಶಕ ಡಾ. ಅಭಯ್ ಎ. ಪಾಶಿಲ್ಕರ್, ಸಿಎಫ್‌ಟಿಆರ್‌ಐ ನಿರ್ದೇಶಕ ಡಾ. ಗಿರಿಧರ್ ಪರ್ವತಂ ಮತ್ತು ಸಿಎಸ್‌ಐಆರ್–4ಪಿಐ ನಿರ್ದೇಶಕ ಡಾ. ಜಿ.ಕೆ. ಪಾತ್ರಾ, ಇಸ್ರೊ ಅಧ್ಯಕ್ಷ ಡಾ.ವಿ.ನಾರಾಯಣನ್ ಸೇರಿದಂತೆ ಉದ್ಯಮ ಹಾಗೂ ಶೈಕ್ಷಣಿಕ ವಲಯದ 800ಕ್ಕೂ ಹೆಚ್ಚು ಪ್ರತಿನಿಧಿಗಳು ಉಪಸ್ಥಿತರಿದ್ದರು.

ಸಮಾವೇಶದಲ್ಲಿ ಜಂಟಿ ಸಂಶೋಧನೆ ಮತ್ತು ಉದ್ಯಮಶೀಲತೆಯನ್ನು ಉತ್ತೇಜಿಸಲು ತಿಳುವಳಿಕಾ ಪತ್ರಗಳಿಗೆ ಸಹಿ ಹಾಕಲಾಯಿತು.

ಗಮನಸೆಳೆದ ಸ್ಟಾರ್ಟ್‌ಅಪ್‌ಗಳು

ಸಮ್ಮೇಳನದಲ್ಲಿ ವಾಣಿಜ್ಯ ಪೈಲಟ್ ಪರವಾನಗಿಗಾಗಿ ದೇಶಿಯವಾಗಿ ವಿನ್ಯಾಸಗೊಳಿಸಲಾದ ತರಬೇತಿ ವಿಮಾನ ಹಂಸ-3 ಎಲ್ಲರ ಗಮನಸೆಳೆಯಿತು. ಇದು 19 ಸೀಟರ್ ಲಘು ಸಾರಿಗೆ ವಿಮಾನವಾಗಿದ್ದು, ಶ್ರೇಣಿ-1 ಮತ್ತು ಶ್ರೇಣಿ-2 ನಗರಗಳನ್ನು ಜೋಡಿಸಲಿದೆ. ಹೈ ಆಲ್ಟಿಟ್ಯೂಡ್ ಪ್ಲಾಟ್‌ಫಾರ್ಮ್ ಎಂಬ ನಿರಂತರ ಕಣ್ಗಾವಲು ನಡೆಸಲು ಸೌರಶಕ್ತಿಯಿಂದ ಚಲಿಸುವ ಡ್ರೋನ್ ತಂತ್ರಜ್ಞಾನ ಕೂಡ ಸಮ್ಮೇಳನದಲ್ಲಿ ಗಮನಸೆಳೆಯಿತು. ವಾಯುಮಂಡಲದ 20 ಕಿಲೋಮೀಟರ್ ಗಿಂತಲೂ ಹೆಚ್ಚಿನ ಎತ್ತರದಲ್ಲಿ ಹಾರಬಲ್ಲ 'ಹೈ ಆಲ್ಟಿಟ್ಯೂಡ್ ಸೂಡೊ-ಸ್ಯಾಟಲೈಟ್‌ಗಳನ್ನು' ಭಾರತ ಅಭಿವೃದ್ಧಿಪಡಿಸುತ್ತಿದ್ದು, ಈ ಮೂಲಕ ಅಮೆರಿಕ, ಬ್ರಿಟನ್, ಜಪಾನ್‌ನಂತಹ ಆಯ್ದ ದೇಶಗಳ ಸಾಲಿಗೆ ಭಾರತವೂ ಸೇರಲಿದೆ.

ಒಪ್ಪಂದಕ್ಕೆ ಸಹಿ

ಈ ಸಮಾವೇಶದಲ್ಲಿ ಜಂಟಿ ಸಂಶೋಧನೆ ಮತ್ತು ಉದ್ಯಮಶೀಲತೆಯನ್ನು ಉತ್ತೇಜಿಸಲು ಐಐಟಿ-ಧಾರವಾಡ, ಐಐಟಿಎಂ-ಚೆನ್ನೈ, ಸತ್ಯಸಾಯಿ ವಿಶ್ವವಿದ್ಯಾಲಯ, ಐಸಿಎಆರ್-ನಿವೇದಿ ಮತ್ತು ಐಐಎಂ-ನಾಗಪುರ ಸಂಸ್ಥೆಗಳೊಂದಿಗೆ ಪ್ರಮುಖ ತಿಳುವಳಿಕಾ ಪತ್ರಗಳಿಗೆ (MoU) ಸಹಿ ಹಾಕಲಾಯಿತು. ಅಲ್ಲದೆ, ಸ್ಟಾರ್ಟ್ ಅಪ್ ಸಂಸ್ಥೆಯಾದ ಚೆನ್ನೈನ ಮೆಸರ್ಸ್ ಟ್ರೈಡೆಂಟ್ ಟೆಕ್ ಎಂಜಿನಿಯರಿಂಗ್‌ಗೆ 'ವಾಂಕೆಲ್ ಎಂಜಿನ್' ಹಸ್ತಾಂತರಿಸಲಾಯಿತು.

ಕಲುಷಿತ ನೀರು ಸೇವಿಸಿ 35 ಶಾಲಾ ಮಕ್ಕಳು ಅಸ್ವಸ್ಥ

ಕೊಡೇಕಲ್(ಯಾದಗಿರಿ): ಮಧ್ಯಾಹ್ನ ಬಿಸಿಯೂಟದ ನಂತರ ಶಾಲಾ ಮಕ್ಕಳು ಕಲುಷಿತ ನೀರು ಸೇವಿಸಿದ ಪರಿಣಾಮ 35 ಮಕ್ಕಳು ತೀವ್ರ ಅಸ್ವಸ್ಥಗೊಂಡ ಘಟನೆ ಹುಣಸಗಿ ತಾಲೂಕಿನ ಕೊಡೇಕಲ್ ಸಮೀಪದ ಹೊರಹಟ್ಟಿ ಗ್ರಾಮದಲ್ಲಿ ಶನಿವಾರ ನಡೆದಿದೆ. ಸಮೀಪದ ಹೊರಹಟ್ಟಿ ಗ್ರಾಮದಲ್ಲಿರುವ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯ ಮಕ್ಕಳು ಅಸ್ವಸ್ಥಗೊಂಡಿದ್ದು, ಕೊಡೇಕಲ್ ಗ್ರಾಮದ ಸರಕಾರಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದು, 17 ಮಕ್ಕಳು ಗುಣಮುಖರಾಗಿದ್ದು, ಇನ್ನುಳಿದ 18 ಮಕ್ಕಳಿಗೆ ಚಿಕಿತ್ಸೆ ಮುಂದುವರಿದಿದೆ. ಹೊರಹಟ್ಟಿ ಗ್ರಾಮದ ಶಾಲಾ ಮುಂಭಾಗದಲ್ಲಿರುವ ಬೋರವೆಲ್ ನೀರು ಕಲುಷಿತಗೊಂಡಿರುವ ಕಾರಣ ಆರೋಗ್ಯ ಇಲಾಖೆಯವರು ನೀರನ್ನು ಪರೀಕ್ಷೆಗೆ ಕಳುಹಿಸಿದ್ದಾರೆ.

ರಾಜ್ಯ ಸರಕಾರದ ಕ್ರಮ ಎತ್ತಿಹಿಡಿದ ಕೋರ್ಟ್

■ **ವಿಕ ಸುದ್ದಿಲೋಕ** ಬೆಂಗಳೂರು

ಸರಕಾರಿ ಆಸ್ಪತ್ರೆಗಳು ಮತ್ತು ಸಾರ್ವಜನಿಕ ಆರೋಗ್ಯ ಕೇಂದ್ರಗಳಿಗೆ ಕಳಪೆ ಔಷಧಗಳನ್ನು ಪೂರೈಸಿ, ನಿಯಮಾವಳಿಗಳ ಪ್ರಕಾರ ಅವುಗಳನ್ನು ಬದಲಿಸಿಕೊಡದ ಔಷಧ ಕಂಪನಿಯನ್ನು ಕಪ್ಪು ಪಟ್ಟಿಗೆ ಸೇರಿಸಿದ್ದ ಸರಕಾರದ ಕ್ರಮವನ್ನು ಹೈಕೋರ್ಟ್ ಎತ್ತಿ ಹಿಡಿದಿದೆ.

ಕಬ್ಬಿಣ ಅಂಶದ ಕಳಪೆ ಮಾತ್ರೆಗಳನ್ನು ಪೂರೈಸಿದ ಹಿನ್ನೆಲೆಯಲ್ಲಿ ಮೂರು ವರ್ಷಗಳ ಕಾಲ ಕಪ್ಪು ಪಟ್ಟಿಗೆ ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮದ ಆದೇಶ ಪ್ರಶ್ನಿಸಿ ಜೈಪುರ ಮೂಲದ ಬಯೋಜೆನೆಟಿಕ್ ಡ್ರಗ್ಸ್ ಪ್ರೈವೇಟ್ ಲಿಮಿಟೆಡ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾ.ಸೂರಜ್ ಗೋವಿಂದರಾಜು ಅವರಿದ್ದ ಏಕಸದಸ್ಯ ಪೀಠ ಈ ಆದೇಶ ನೀಡಿದೆ. ''ಸರಕಾರಿ ಆಸ್ಪತ್ರೆಗಳಿಗೆ ಬರುವ ಬಡ ರೋಗಿಗಳಿಗೆ ಗುಣಮಟ್ಟದ ಔಷಧ ತಲುಪಿಸುವುದು ಮತ್ತು ಸಾರ್ವಜನಿಕ ಆರೋಗ್ಯ ವ್ಯವಸ್ಥೆ ರಕ್ಷಿಸುವುದು ನಿಗಮದ ಆದ್ಯ ಕರ್ತವ್ಯವಾಗಿದೆ. ಔಷಧ ಕಳಪೆ ಎಂದು ಸಾಬೀತಾದ ಮೇಲೆಯೂ ಅದನ್ನು ಬದಲಿಸಿಕೊಡದ ಕಂಪನಿಯ ನಡೆ ಒಪ್ಪಲು ಸಾಧ್ಯವಿಲ್ಲ, ಆದ್ದರಿಂದ ನಿಗಮದ ಆದೇಶದಲ್ಲಿ ಯಾವುದೇ ಕಾನೂನು ಬಾಹಿರತೆ ಕಂಡುಬಂದಿಲ್ಲ'' ಎಂದು ತಿಳಿಸಿ ಅರ್ಜಿಯನ್ನು ವಜಾಗೊಳಿಸಿದೆ.

''ನಿಗಮವು ಕೈಗೊಂಡಿರುವ ಕ್ರಮವು ಕೆಟಿಪಿಪಿ ನಿಯಮ 26ಎ ಅಡಿಯಲ್ಲಿ ಬರುವುದಿಲ್ಲ, ಬದಲಿಗೆ, ಇದು ಟೆಂಡರ್ ಒಪ್ಪಂದದ ಷರತ್ತು 21.1(ಜಿ) ಅಡಿಯಲ್ಲಿ ಕೈಗೊಳ್ಳಲಾದ ಕಾಂಟ್ರ್ಯಾಕ್ಟ್ ಆಧಾರಿತ ಕ್ರಮವಾಗಿದೆ. ಆದ್ದರಿಂದ ಇದಕ್ಕಾಗಿ ಪ್ರತ್ಯೇಕ 'ಡಿಬಾರ್‌ಮೆಂಟ್ ಕಮಿಟಿ' ರಚಿಸುವ ಅಥವಾ ಲಿಖಿತ ಶಿಫಾರಸು ಪಡೆಯುವ ಅಗತ್ಯವಿರುವುದಿಲ್ಲ'' ಎಂದು ನ್ಯಾಯಪೀಠ ತಿಳಿಸಿದೆ. ''ಕಂಪನಿಗೆ ಮೂರು ಬಾರಿ ಮಾತ್ರೆಗಳನ್ನು ಬದಲಿಸಲು ನೋಟಿಸ್ ನೀಡಲಾಗಿತ್ತು ಮತ್ತು ಕಪ್ಪು ಪಟ್ಟಿಗೆ ಸೇರಿಸುವ ಮುನ್ನ ಕಾರಣ ಕೇಳಿ ಶೋಕಾಸ್ ನೋಟಿಸ್ ನೀಡಲಾಗಿತ್ತು. ಅದಕ್ಕೆ ಕಂಪನಿಯು ಸವಿಸ್ತಾರವಾದ ಲಿಖಿತ ಉತ್ತರವನ್ನೂ ಸಲ್ಲಿಸಿತ್ತು. ಸಹಜ ನ್ಯಾಯ ಎಂದರೆ ಕೇವಲ ಮುಖಾಮುಖಿ ಮೌಖಿಕ ವಿಚಾರಣೆ ಮಾತ್ರವಲ್ಲ. ಆಕ್ಷೇಪಣೆ ಸಲ್ಲಿಸಲು ಸೂಕ್ತ ಅವಕಾಶ ನೀಡುವುದೂ ಹೌದು. ಇಲ್ಲಿ ಕಂಪನಿಗೆ ತನ್ನ ವಾದ ಮಂಡಿಸಲು ಸಂಪೂರ್ಣ ಅವಕಾಶ ಸಿಕ್ಕಿರುವುದರಿಂದ ಯಾವುದೇ ನಿಯಮದ ಉಲ್ಲಂಘನೆಯಾಗಿಲ್ಲ'' ಎಂದು ನ್ಯಾಯಪೀಠ ಆದೇಶದಲ್ಲಿ ವಿವರಿಸಿದೆ.

ಪ್ರಕರಣದ ಹಿನ್ನೆಲೆ: 2023ರಲ್ಲಿ ಬಯೋಜೆನೆಟಿಕ್ ಡ್ರಗ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿಯು ಕೆಎಸ್‌ಎಂಎಸ್ ಸಿಎಲ್ ಕರೆದಿದ್ದ ಟೆಂಡರ್‌ನಲ್ಲಿ ಭಾಗವಹಿಸಿ, ಸುಮಾರು 46.45 ಲಕ್ಷ ರೂ. ಮೌಲ್ಯದ 4.46 ಲಕ್ಷಕ್ಕೂ ಅಧಿಕ 'ಫೆರಸ್ ಸಾಲ್ಟ್ಸ್ + ಫೋಲಿಕ್ ಆಸಿಡ್' ಮಾತ್ರೆಗಳನ್ನು ಸರಬರಾಜು ಮಾಡುವ ಗುತ್ತಿಗೆ ಪಡೆದಿತ್ತು. ಪೂರೈಕೆಯಾದ ಮಾತ್ರೆಗಳನ್ನು ಔಷಧ ನಿಯಂತ್ರಣ ಇಲಾಖೆಯ ಮೂಲಕ ಪರೀಕ್ಷೆಗೆ ಒಳಪಡಿಸಿದಾಗ, ಅವು ಕಳಪೆಯಿಂದ ಕೂಡಿವೆ ಎಂಬುದು ಗೊತ್ತಾಗಿತ್ತು.

ಕಳಪೆ ಔಷಧ ಪೂರೈಕೆ ಮಾಡಿದ್ದ ಕಂಪನಿ ಕಪ್ಪು ಪಟ್ಟಿಗೆ

ಪ್ರಕರಣ ರದ್ದು ಕೋರಿ ಶಿವಮೂರ್ತಿ ಶರಣರ ಅರ್ಜಿ: ಸರಕಾರಕ್ಕೆ ನೋಟಿಸ್

■ **ವಿಕ ಸುದ್ದಿಲೋಕ** ಬೆಂಗಳೂರು

ಚಿತ್ರದುರ್ಗದ ಮುರುಘರಾಜೇಂದ್ರ ಬೃಹನ್ಮಠ ನಡೆಸುತ್ತಿರುವ ಮಡಿಲು ವಿಶೇಷ ದತ್ತು ಕೇಂದ್ರದಲ್ಲಿ ಅಪ್ರಾಪ್ತ ಅನಾಥೆಗೆ ಆಶ್ರಯ ಕಲ್ಪಿಸಿದ ಬಗ್ಗೆ ಮಾಹಿತಿ ನೀಡದ ಆರೋಪದ ಮೇಲೆ ತಮ್ಮ ವಿರುದ್ಧ ಬಾಲ ನ್ಯಾಯ ಕಾಯಿದೆಯಡಿ ದಾಖಲಿಸಿರುವ ಪ್ರಕರಣ ರದ್ದು ಕೋರಿ ಡಾ. ಶಿವಮೂರ್ತಿ ಮುರುಘಾ ಶರಣರು ಸಲ್ಲಿಸಿರುವ ಅರ್ಜಿ ಸಂಬಂಧ ಹೈಕೋರ್ಟ್, ರಾಜ್ಯ ಸರಕಾರಕ್ಕೆ ನೋಟಿಸ್ ಜಾರಿಗೊಳಿಸಿದೆ. ಕೆಲ ಕಾಲ ಅರ್ಜಿ ಆಲಿಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ಪೀಠ ಪ್ರತಿವಾದಿಗಳಾದ ಚಿತ್ರದುರ್ಗ ಗ್ರಾಮಾಂತರ ಠಾಣಾ ಪೊಲೀಸರು ಹಾಗೂ ದೂರುದಾರರಾಗಿರುವ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಅಧಿಕಾರಿ ಲೋಕೇಶ್ವರಪ್ಪಗೆ ನೋಟಿಸ್ ಜಾರಿಗೊಳಿಸಿ ವಿಚಾರಣೆ ಮುಂದೂಡಿತು.

JAWAHAR NAVODAYA VIDYALAYA

An Autonomous Organization under Ministry of Human Resources Development,
(Dept. Of School Education & Literacy, Government of India)
Gollahally-572140, Tumkur District - Karnataka
Phone: 9481707188 | e-mail: jnvtumkuru@gmail.com

NOTIFICATION REGARDING ADMISSION INTO CLASS XI FOR THE SESSION 2026-27

Offline applications are invited for admission of students to Class XI Science/ Commerce Stream in **Jawahar Navodaya Vidyalaya, Gollahally, Tumkur** District for the academic year 2026-27.

Eligible candidates can apply by submitting the application form through Office Mode by visiting the JNV concerned or by obtaining application form from JNV concerned or downloading from the website www.navodaya.gov.in or JNV website https://www.navodaya.gov.in/nvs/nvs-school/TUMKURU/en/home. The last date for submission of application is **25.06.2026**

Eligiblity: **1.** Date of birth of the candidate must be between 01.06.2009 to 31.07.2011 (both dates are inclusive)

2. The candidate must have passed Class X from a recognized school (affiliated to CBSE or any other State Education Board) of the district where the Jawahar Navodaya Vidyalaya is located during the academic session 2025-26.

3. Only a student securing 60% or above (First class) in class X is eligible to apply.

4. The candidate opting for Science Stream must have atleast 60% marks in Science subject & candidate opting for Mathematics in any stream must have atleast 60% marks in Mathematics in class X.

For further details contact vidyalaya Phone No: 9481707188.

Date: 13.06.2026 **Sd/- I/C Principal**

ಮೊಬೈಲ್ ಬಿಡುಗಡೆಗೆ ಹೈಕೋರ್ಟ್ ಆದೇಶ

ಬೆಂಗಳೂರು: ಹಿಂದೂ ಕಾರ್ಯಕರ್ತ ಸುಹಾಸ್ ಶೆಟ್ಟಿ ಕೊಲೆ ಪ್ರಕರಣದಲ್ಲಿ ಸಾಕ್ಷಿದಾರರೊಬ್ಬರಿಂದ ವಶಪಡಿಸಿಕೊಂಡಿದ್ದ 2 ಮೊಬೈಲ್‌ಗಳಲ್ಲಿ ಅಪರಾಧಕ್ಕೆ ಪೂರಕವಾದ ಯಾವುದೇ ಅಂಶಗಳು ಪತ್ತೆಯಾಗದ ಹಿನ್ನೆಲೆಯಲ್ಲಿ ಮೊಬೈಲ್‌ಗಳನ್ನು ಮಾಲೀಕನಿಗೆ ಹಿಂದಿರುಗಿಸುವಂತೆ ಹೈಕೋರ್ಟ್, ಎನ್‌ಐಎ ವಿಶೇಷ ನ್ಯಾಯಾಲಯಕ್ಕೆ ಆದೇಶಿಸಿದೆ. ಮೊಬೈಲ್ ಫೋನ್‌ಗಳನ್ನು ಹಿಂದಿರುಗಿಸುವಂತೆ ಕೋರಿ ಮಂಗಳೂರಿನ ಬಜಪೆ ಸಮೀಪದ ಮಲವೂರು ಗ್ರಾಮದ ಅಬ್ದುಲ್ ರಹೀಮಾನ್ ಸಲ್ಲಿಸಿದ್ದ ಕ್ರಿಮಿನಲ್ ಮೇಲ್ಮನವಿಯನ್ನು ನ್ಯಾಯಮೂರ್ತಿ ಮೊಹಮ್ಮದ್ ನವಾಜ್ ಹಾಗೂ ನ್ಯಾ. ಜಿ. ಬಸವರಾಜ ಅವರಿದ್ದ ವಿಭಾಗೀಯ ಪೀಠ ಮಾನ್ಯ ಮಾಡಿದೆ.

ಕಾರ್ಮಿಕರ ರಾಜ್ಯ ವಿಮಾ ನಿಗಮ
ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯ, ಭಾರತ ಸರ್ಕಾರ
कर्मचारी राज्य बीमा निगम
(श्रम एवं रोजगार मंत्रालय, भारत सरकार)
Employees' State Insurance Corporation
(Ministry of Labour & Employment, Govt. of India)

ಉಪ ಪ್ರಾದೇಶಿಕ ಕಚೇರಿ - ಬೆಂಗಳೂರು-ದಕ್ಷಿಣ (ಬೊಮ್ಮಸಂದ್ರ)/ उप क्षेत्रीय कार्यालय–बेंगलूर दक्षिण (बोम्मसंद्रा) / Sub Regional Office-Bangalore-South (Bommasandra)
नं. 23, 9 सी, मेन रिंग रोड, बीटीएम प्रथम मंच, बैंगलोर–560029,
No. 23, 9th 'C' Main Ring Road B.T.M. I stage, Bangalore-560 029,
Phone No: 26786391 Fax: 2678692, e-mail: sro-bommasandra@esic.nic.in
Website : www.esic.nic.in/www.esic.in

ಎಂ. ಬಿ. ಬಿ. ಎಸ್./ಬಿ. ಡಿ. ಎಸ್./ಬಿ. ಎಸ್ಸಿ. ನರ್ಸಿಂಗ್ ಕೋರ್ಸ್ ಗಳಿಗೆ ಪ್ರವೇಶಾತಿ ಪ್ರಕಟಣೆ

ಸ್ನಾತಕ ಪದವಿ ಕೋರ್ಸ್ (ಎಂ. ಬಿ. ಬಿ. ಎಸ್./ಬಿ. ಡಿ. ಎಸ್./ಬಿ. ಎಸ್ಸಿ ನರ್ಸಿಂಗ್.) ಗಳಿಗೆ 'ವಿಮಾದಾರರ ಮಕ್ಕಳ' (Wards of IPs) ಮೀಸಲಾತಿ ಅಡಿಯಲ್ಲಿ ಪ್ರವೇಶಾತಿಗಾಗಿ ಈ ಪ್ರಕಟಣೆ ನೀಡಲಾಗಿದ್ದು, ಇ. ಎಸ್. ಐ. ಸಿ. ವೈದ್ಯಕೀಯ/ದಂತ/ನರ್ಸಿಂಗ್ ಕಾಲೇಜುಗಳು ಮತ್ತು ಇ. ಎಸ್. ಐ. ಯೋಜನೆಯಡಿ ಇತರ ಕೆಲವು ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ನಿಗದಿಪಡಿಸಿದ ಅರ್ಹತಾ ಮಾನದಂಡಗಳನ್ನು ಪೂರೈಸುವ ಮತ್ತು ಭಾರತ ಸರ್ಕಾರ/ಇ. ಎಸ್. ಐ. ನಿಗಮವು ಅನುಮೋದಿಸಿದ ಪ್ರವೇಶಾತಿ ನೀತಿ ಮತ್ತು ಕಾರ್ಯವಿಧಾನದ ಪ್ರಕಾರ 2026-27ರ ಶೈಕ್ಷಣಿಕ ವರ್ಷಕ್ಕೆ ರಾಷ್ಟ್ರೀಯ ಅರ್ಹತಾ ಪ್ರವೇಶ ಪರೀಕ್ಷೆ (ಯುಜಿ)-2026 [NEET (UG) – 2026] ಗೆ ಅರ್ಜಿ ಸಲ್ಲಿಸಿರುವವರು ಅರ್ಹರಾಗಿರುತ್ತಾರೆ. ವಿವರಗಳು ಇ. ಎಸ್. ಐ. ಸಿ. ವೆಬ್ ಸೈಟ್ esic.gov.in ಯ 'Admission' ಲಿಂಕ್ ನಲ್ಲಿ ಲಭ್ಯವಿವೆ.

ಜಂಟಿನಿರ್ದೇಶಕರು (ಉಸ್ತುವಾರಿ)

ಖಾತೆ ಕಥೆ, ಬಹುವಿಧ ಗಾಥೆ

ರಾಜ್ಯಕಾರಣ
ಶಶಿಧರ ಹೆಗಡೆ
shashidhar.nandikal@timesofindia.com

2009ರಲ್ಲಿ ಮಲ್ಲಿಕಾರ್ಜುನ ಖರ್ಗೆಯವರು ಮನಸ್ಸಿಲ್ಲದ ಮನಸ್ಸಿನಿಂದ ದಿಲ್ಲಿಗೆ ಹೋದಾಗ ಸಿಕ್ಕಿದ್ದು ವಜನ್ ಇಲ್ಲದ ಕಾರ್ಮಿಕ ಖಾತೆ! ಅಷ್ಟರಲ್ಲಾಗಲೇ ಕರ್ನಾಟಕದಲ್ಲಿ ಹಲವು ಬಾರಿ ಮಂತ್ರಿಯಾಗಿ, ಪ್ರತಿಪಕ್ಷದ ನಾಯಕರಾಗಿ ಕಾರ್ಯನಿರ್ವಹಿಸಿದ್ದ ಅಗಾಧ ಅನುಭವ ಖರ್ಗೆಯವರ ಬೆನ್ನಿಗಿತ್ತು. ಮುಖ್ಯಮಂತ್ರಿ ಪದವಿ ಒಲಿಯಲಿಲ್ಲ ಎಂಬುದನ್ನು ಬಿಟ್ಟರೆ ಗೃಹ ಸೇರಿದಂತೆ ಹಲವು ಖಾತೆಗಳನ್ನು ಸಮರ್ಥವಾಗಿ ತೂಗಿಸಿದ್ದ ಖರ್ಗೆ ಅವರಿಗೆ ಕೇಂದ್ರದಲ್ಲಿ ಮಹತ್ವದ ಇಲಾಖೆಯ ಜವಾಬ್ದಾರಿಯನ್ನು ನಿರೀಕ್ಷಿಸಲಾಗಿತ್ತು. ಆದರೆ, ಲೇಬರ್ ಮಿನಿಸ್ಟ್ರಿಯೊಳಗೆ ಖರ್ಗೆ ಅವರನ್ನು ಹೊಕ್ಕಿಸಿದಾಗ ನಿರಾಶೆಯಾಗಿತ್ತು. ಖರ್ಗೆ ಅವರೇನೋ ಪಾಲಿಗೆ ಬಂದದ್ದೇ ಪಂಚಾಮೃತ ಎಂಬಂತೆ ಸಕಾರಾತ್ಮಕ ಹೆಜ್ಜೆಯಿಟ್ಟಿದ್ದರು. ಕ್ರಿಯಾಶೀಲರಿಗೆ ಸಾಧಾರಣ ಖಾತೆ ಕೊಟ್ಟರೂ ಅಸಾಧಾರಣ ಸಾಧನೆ ಮಾಡಿ ತೋರಿಸುತ್ತಾರೆ. ಖರ್ಗೆಯವರ ವಿಚಾರದಲ್ಲೂ ಈ ಮಾತು ನಿಜವಾಯ್ತು. ಅವರ ಪ್ರಯತ್ನದಿಂದಾಗಿ ರಾಜ್ಯದಲ್ಲೂ ಇಎಸ್‌ಐ ಆಸ್ಪತ್ರೆಗಳಾದವು. ಕಲ್ಯಾಣ ಕರ್ನಾಟಕಕ್ಕೆ ವಿಶೇಷ ಸ್ಥಾನಮಾನ ಕಲ್ಪಿಸುವ 371(ಜೆ) ವಿಧಿ ತರುವಾಗ ಸಂಸತ್ತಿನಲ್ಲಿ ಖರ್ಗೆ ಮಾಡಿದ ಭಾಷಣಕ್ಕೆ ಬೆರಗಾಗಿದ್ದ ಸೋನಿಯಾ ಗಾಂಧಿ ಮುಕ್ತಕಂಠದಿಂದ ಶ್ಲಾಘಿಸಿದ್ದರು. ಯುಪಿಎ ಆಡಳಿತದ ಕಡೆಯ 6 ತಿಂಗಳ ಕಾಲ ರೈಲ್ವೆ ಖಾತೆ ನಿರ್ವಹಿಸಿದ್ದ ಖರ್ಗೆ ಅಷ್ಟು ಕಿರು ಅವಧಿಯಲ್ಲೇ ಛಾಪು ಒತ್ತಿದ್ದರು.

2014ರಲ್ಲಿ ನರೇಂದ್ರ ಮೋದಿ ಪ್ರಧಾನಿಯಾದಾಗ ಅನುಭವಿ ಅನಂತಕುಮಾರ್ ಅವರಿಗೆ ಬಹುದೊಡ್ಡ ಖಾತೆಯ ನಿರೀಕ್ಷೆಯಿತ್ತು. ಆದರೆ, ಮೋದಿ ತಮ್ಮ 'ಹಳೆಯ ಸ್ನೇಹಿತ'ನಿಗೆ ಕೊಟ್ಟಿದ್ದು ರಸಗೊಬ್ಬರ ಮಂತ್ರಾಲಯ! ಆಗ ಬಹಳ ಮಂದಿ ಗೊಬ್ಬರದ ಮಂತ್ರಿಯೆಂದು ಅನಂತಕುಮಾರ್ ಬಗ್ಗೆ ಅಣಕವಾಡಿದ್ದರು. ಇಲಾಖೆಯಲ್ಲಿ ಸುಧಾರಣೆ ತಂದ ಅನಂತಕುಮಾರ್, ದೇಶದಲ್ಲಿ ರಸಗೊಬ್ಬರದ ಕೊರತೆಯೇ ಆಗದಂತೆ ನೋಡಿಕೊಂಡಿದ್ದರು. ರಾಸಾಯನಿಕ ಖಾತೆಯನ್ನೂ ನಿಭಾಯಿಸಿದ್ದ ಅನಂತಕುಮಾರ್, ದೇಶಾದ್ಯಂತ ಜನೌಷಧ ಮಳಿಗೆ ತೆರೆಯುವ ವ್ಯವಸ್ಥೆ ಮಾಡಿದ್ದರು. ಕೊನೆಗೆ ಸಂಸತ್ ಅಧಿವೇಶನ ಸುಸೂತ್ರಗೊಳಿಸುವ ದೃಷ್ಟಿಯಿಂದ ಅನಂತಕುಮಾರ್ ಅವರಿಗೆ ಸಂಸದೀಯ ವ್ಯವಹಾರಗಳ ಖಾತೆಯನ್ನೂ ಮೋದಿ ವಹಿಸಿದ್ದರು.

ಮೋದಿಯವರ ಮೊದಲ ಸಂಪುಟದಲ್ಲಿ ಕರ್ನಾಟಕ ಬಿಜೆಪಿಯ ವರಿಷ್ಠ ನಾಯಕರೂ, ಹಗಲಿರುಳೂ ಶ್ರಮಿಸಿ ಪಕ್ಷವನ್ನು ಅಧಿಕಾರಕ್ಕೆ ತಂದವರು ಮತ್ತು ಪುತ್ತೂರಿನಂಥ ಕ್ಷೇತ್ರದ ಲೆವೆಲ್‌ಗಿಂತ ಭಾರಿ ಎತ್ತರದಲ್ಲಿರುವ ಮಾನನೀಯರಾದ ಡಿ.ವಿ. ಸದಾನಂದಗೌಡರು ರೈಲ್ವೆ ಸಚಿವರಾಗಿ ಸೇರ್ಪಡೆಯಾಗಿದ್ದರು. ಕೆಲವೇ ಸಮಯದಲ್ಲಿ ಖಾತೆ ಬದಲಿಸಿದ ಮೋದಿ ಬಹುಮುಖ್ಯವಾದ ಕಾನೂನು ಇಲಾಖೆಯನ್ನು ಡಿವಿಎಸ್ ಸುಪರ್ದಿಗೆ ಒಪ್ಪಿಸಿದ್ದರು. ಮುಂದಿನ ಹಂತದಲ್ಲಿ ಅಂಕಿ-ಅಂಶ ಖಾತೆ ಇವರನ್ನೇ ಹುಡುಕಿಕೊಂಡು ಬಂದಿತ್ತು. ವಿಭಿನ್ನ ಉದಾಹರಣೆದೃಷ್ಟಿಯಿಂದ ಈ ವಿಚಾರ ಪ್ರಸ್ತಾಪಿಸಬೇಕಾಯಿತು.

ಮೋದಿ 2.0 ಹಾದಿಯಲ್ಲಿ ಸೇರಿಕೊಂಡ ಪ್ರಲ್ಹಾದ ಜೋಶಿ ಕಲ್ಲಿದ್ದಲು ಖಾತೆ ಸಚಿವರಾಗಿ ಬಿಗ್‌ಬಾಸ್ ವಹಿಸಿದ ಅಸೈನ್ಮೆಂಟ್ ಕೈಗೆತ್ತಿಕೊಳ್ಳಲು ಶ್ರಮಿಸಿದ್ದರು. ಸಂಸದೀಯ ವ್ಯವಹಾರ ಖಾತೆಯನ್ನೂ 2019–2024ರ ಅವಧಿಯಲ್ಲಿ ಜೋಶಿ ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ಸದ್ಯ ಆಹಾರ, ಗ್ರಾಹಕ ವ್ಯವಹಾರ ಮತ್ತು ನವೀಕರಿಸಬಹುದಾದ ಇಂಧನ ಮೂಲಗಳ ಇಲಾಖೆಯನ್ನು ನೋಡಿಕೊಳ್ಳುತ್ತಿದ್ದಾರೆ. ದಿಲ್ಲಿ ರಾಜಕಾರಣದ ರೀತಿ ರಿವಾಜುಗಳನ್ನು ರೂಢಿಸಿಕೊಂಡಿರುವ ಜೋಶಿಯವರು ಏಳು ಸುತ್ತಿನ ಕೋಟೆಯಂತಿರುವ ಮೋದಿ ಅಂತರಂಗದ ಸೌಧಕ್ಕೆ ಬಾಗಿಲು, ಕಿಟಕಿಗಳೆಲ್ಲಿವೆ ಎನ್ನುವುದನ್ನು ಬಲ್ಲವರು. ಕರ್ನಾಟಕದ ಹಿತಾಸಕ್ತಿ ಕಾಪಾಡುವ ವಿಷಯದಲ್ಲಿ ಅನಂತಕುಮಾರ್ ಅವರಂತೆ ಜಾಣ್ಮೆ ತೋರುವ ಮಟ್ಟಕ್ಕೆ ಬೆಳೆಯುವ ಭರವಸೆಯನ್ನು ಜೋಶಿ ಮೂಡಿಸಿದ್ದಾರೆ.

ಅಮಿತ್ ಶಾ ಅವರ ವಿಶೇಷ ಕಾಳಜಿಯಿಂದ ಕೇಂದ್ರದಲ್ಲಿ ಜಲಶಕ್ತಿ, ರೈಲ್ವೆ ಖಾತೆಗಳ ಸಹಾಯಕ ಸಚಿವರಾಗಿರುವ ವಿ. ಸೋಮಣ್ಣ ಅವರೂ ಕೆಲಸಗಾರರು. ಸೋಮಣ್ಣ ಅಧಿಕಾರದಲ್ಲಿದ್ದಾಗ ಪಾದರಸದಷ್ಟು ಚುರುಕಾಗಿರುತ್ತಾರೆ. ಯಾವುದೇ ಇಲಾಖೆಯಾದರೂ ಸರಿ. ಅಲ್ಲೊಂದಿಷ್ಟು ಜನಪರ ಕೆಲಸ ಮಾಡುವುದು ಸೋಮಣ್ಣ ವೈಶಿಷ್ಟ್ಯ. ದಿಲ್ಲಿಯಲ್ಲೂ ಅವರಿಗೆ ಭಾಷೆ, ಭೌಗೋಳಿಕತೆ ಯಾವುದೂ ಅಡ್ಡಿಯಾಗಿಯೇ ಇಲ್ಲ.

ಈ ಬಾರಿ ಮೋದಿ ಕ್ಯಾಬಿನೆಟ್‌ನಲ್ಲಿ ಕರ್ನಾಟಕ ಬಿಜೆಪಿಯಿಂದ ಸ್ಥಾನ ತಪ್ಪಿಸಿಕೊಂಡವರು ಬಸವರಾಜ ಬೊಮ್ಮಾಯಿ. ಪ್ರಾಯಶಃ ಬೊಮ್ಮಾಯಿಯವರು ಕೇಂದ್ರ ಸಚಿವರಾಗಿದ್ದರೆ ಅವರಿಗೆ ಯಾವುದೇ ಇಲಾಖೆ ವಹಿಸಿದ್ದರೂ ಉತ್ತಮವಾಗಿ ನಿರ್ವಹಿಸುತ್ತಿದ್ದರು.

ರಾಜ್ಯದಲ್ಲೀಗ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಂಪುಟದ ಖಾತೆ ಹಂಚಿಕೆಯ ಅಸಮಾಧಾನದ ಬಗ್ಗೆ ಸುದ್ದಿಯಾಗಿದೆ. ಮಂತ್ರಿಮಂಡಲದಲ್ಲಿ 20 ಸ್ಥಾನ ತುಂಬುವುದು ಬಾಕಿಯಿದೆ. ಆ ಬಳಿಕ ಸಚಿವ ಸ್ಥಾನ ವಂಚಿತರ ಬೇಸರ, ಬಯಸಿದ ಖಾತೆ ಸಿಗಲಿಲ್ಲ ಎನ್ನುವವರ ಹತಾಶೆ ಮತ್ತೊಂದು ಸುತ್ತಿನ ಸದ್ದುಗದ್ದಲ ಉಂಟು ಮಾಡಬಹುದು. ಅದೇನಿದ್ದರೂ ಸಚಿವ ಸಂಪುಟ ರಚಿಸಿ ಖಾತೆ ಹಂಚುವಾಗ ನೂರಕ್ಕೆ ನೂರರಷ್ಟು ಎಲ್ಲ ಮಾನದಂಡ ಪಾಲಿಸಲು ಸಾಧ್ಯವಾಗುವುದಿಲ್ಲ. ಸಾಮಾಜಿಕ ನ್ಯಾಯದಡಿಯ ಪ್ರಾತಿನಿಧ್ಯ ಸಂಪುಟದ ಪ್ರಧಾನ ಅಳತೆಗೋಲು. ಶೋಷಿತ, ದಮನಿತ ವರ್ಗದವರ ಹಿತ ಲಕ್ಷ್ಯದಲ್ಲಿ ಇರಿಸಿಕೊಳ್ಳಬೇಕಾಗುತ್ತದೆ. ಅದಾದ ಮೇಲೆ ಪ್ರಾದೇಶಿಕ, ಜಿಲ್ಲಾ ಪ್ರಾತಿನಿಧ್ಯ. ಇಂಥ ಮಂತ್ರಿಮಂಡಲ ರಚಿಸುವಾಗ ಸಚಿವರಾಗಲೇಬೇಕಾದ ಅರ್ಹರು ಹೊರಗುಳಿಯಬೇಕಾದ ಸನ್ನಿವೇಶ ಸೃಷ್ಟಿಯಾಗುತ್ತದೆ. ಕೆಲವಷ್ಟು ಖಾತೆಗಳಿಗೆ ವಿಷಯ ಜ್ಞಾನವಿರುವ ತಜ್ಞರನ್ನೇ ನಿಯೋಜಿಸಬೇಕಾಗುತ್ತದೆ. ರಾಜಕೀಯ ಕಾರಣದಿಂದ ಇದರಲ್ಲಿ ಏರುಪೇರಾದಾಗಲೂ ಸವಾಲು ಎದುರಾಗುತ್ತದೆ.

ಎಚ್.ಕೆ. ಪಾಟೀಲರಂಥ ಅನುಭವಿಗಳು, ಜನಪರ ಕಾಳಜಿಯುಳ್ಳವರು ಸಂಪುಟದಲ್ಲಿ ಇರಬೇಕಿತ್ತು. ಜಾತಿಯೊಂದೇ ಮಾನದಂಡವಾಗಬಾರದು. ಮೆರಿಟ್ ಪರಿಗಣನೆಯಾಗಬೇಕು ಎಂಬ ದಿನೇಶ್ ಗುಂಡೂರಾವ್ ಹೇಳಿಕೆಯಲ್ಲಿ ಅರ್ಥವಿದೆ. ಯುವ ಕಾಂಗ್ರೆಸ್ ಅಧ್ಯಕ್ಷ, ಕೆಪಿಸಿಸಿ ಕಾರ್ಯಾಧ್ಯಕ್ಷ, ಕೆಪಿಸಿಸಿ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿರುವ ದಿನೇಶ್ ಗುಂಡೂರಾವ್ ಮತ್ತು ಹಿರಿಯ ಎಚ್.ಕೆ. ಪಾಟೀಲ್ ಅವರನ್ನು ಮೊದಲ ಹಂತದಲ್ಲೇ ಸಂಪುಟಕ್ಕೆ ತೆಗೆದುಕೊಳ್ಳಬೇಕಿತ್ತು. ಆರೋಗ್ಯ ಇಲಾಖೆಯಲ್ಲಿ ಕಳೆದ 3 ವರ್ಷದಲ್ಲಿ ಸುಧಾರಣಾ ಕ್ರಮ ಜಾರಿಯಾಗಿದೆ ಎಂಬ ದಿನೇಶ್ ಗುಂಡೂರಾವ್ ಮಾತನ್ನು ಅಲ್ಲಗಳೆಯಲಾಗದು. ಎಚ್.ಕೆ. ಪಾಟೀಲರ ಸಂಸದೀಯ ಅನುಭವ, ಕಾನೂನು ಕುರಿತಾದ ತಿಳಿವಳಿಕೆ ಸರಕಾರಕ್ಕೆ ಅವಶ್ಯ. ಅಲ್ಪಸಂಖ್ಯಾತರ ವೋಟ್‌ಬ್ಯಾಂಕ್ ಪ್ರಭಾವಿಸುವ ಜಮೀರ್ ಅಹ್ಮದ್ ಖಾನ್ ಅವರಿಗೂ ಮೊದಲ ಪಟ್ಟಿಯಲ್ಲೇ ಸ್ಥಾನ ನೀಡಬೇಕಿತ್ತು ಎಂಬ ಮಾತಿನಲ್ಲಿ ತಥ್ಯವಿದೆ.

ಖಾತೆ ವಿಚಾರಕ್ಕೆ ಬಂದರೆ ರಾಮಲಿಂಗಾರೆಡ್ಡಿ ಅವರಿಗೆ ಜಲಸಂಪನ್ಮೂಲ ಇಲಾಖೆ ನೀಡಿರುವುದು 'ಟೈಪಿಂಗ್ ಎರರ್' ಅಲ್ಲ, ಬದಲಾಗಿ ಅತ್ಯಂತ ಅವೈಜ್ಞಾನಿಕ, ಅತಾರ್ಕಿಕ ನಡೆ. ಈ ಖಾತೆಯನ್ನು ನಿರಾಕರಿಸಿದ್ದ ರಾಮಲಿಂಗಾರೆಡ್ಡಿ ಅವರ ನಿರ್ಧಾರವನ್ನು ಗೌರವಿಸಬೇಕಿತ್ತು. ಈ ಸರಕಾರದಲ್ಲಿ ಜಲಸಂಪನ್ಮೂಲ ಇಲಾಖೆಯಂಥ ಖಾತೆ ನಿರ್ವಹಿಸುವ ಅರ್ಹತೆ, ಸಾಮರ್ಥ್ಯ, ಯೋಗ್ಯತೆಯುಳ್ಳವರು ಎಂ.ಬಿ. ಪಾಟೀಲ್. ಕೈಗಾರಿಕಾ ಸಚಿವರಾಗಿ ಅವರು ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ಆದ್ದರಿಂದ ಕೈಗಾರಿಕೆಯ ಜತೆಗೆ ಜಲಸಂಪನ್ಮೂಲ ಇಲಾಖೆಯನ್ನು ಎಂ.ಬಿ. ಪಾಟೀಲರಿಗೆ ಹೆಚ್ಚುವರಿಯಾಗಿ ವಹಿಸಿದ್ದರೆ ಕೃಷ್ಣಾ, ಕಾವೇರಿ ಕಣಿವೆಯ ಯೋಜನೆಗಳು ದಡ ಹತ್ತುತ್ತಿದ್ದವು. ಎರಡೂ ಖಾತೆಯನ್ನು ಯೋಗ್ಯ ರೀತಿಯಲ್ಲಿ ನಿರ್ವಹಿಸುವ ಸಾಮರ್ಥ್ಯ ಪಾಟೀಲರಿಗಿದೆ.

ಕೃಷ್ಣ ಭೈರೇಗೌಡರೂ ಅಷ್ಟೇ. ಯಾವುದೇ ಖಾತೆಗೆ ನ್ಯಾಯ ಒದಗಿಸಬಲ್ಲರು. ಪ್ರಿಯಾಂಕ್ ಖರ್ಗೆ ಸಾಮರ್ಥ್ಯದ ಬಗ್ಗೆ ಲಘುವಾಗಿ ಪ್ರತಿಕ್ರಿಯಿಸುವುದು ಯುಕ್ತವಲ್ಲ. ಪ್ರಿಯಾಂಕ್ ಅವರ ಕೆಲಸವೇ ಮಾತನಾಡುವಂತಾದರೆ ಔಚಿತ್ಯಪೂರ್ಣ. ■

ಅರ್ಹರು ಯಾವುದೇ ಖಾತೆಗೆ ನ್ಯಾಯ ಒದಗಿಸಬಲ್ಲರು. ಸಂಪುಟದಲ್ಲಿ ಸಾಮಾಜಿಕ ನ್ಯಾಯ ಅತ್ಯವಶ್ಯ. ಮೆರಿಟ್ ಜತೆಗೆ ಅನುಭವಿಗಳು, ತಜ್ಞತೆಯುಳ್ಳವರ ಸೇರ್ಪಡೆಯೂ ಅಪೇಕ್ಷಣೀಯ.



ಲಲಿತ್ ಎಂದರೆ ಕೇವಲ ರಾಗವಲ್ಲ...

ಸ್ವಾತಿ ಮಳೆ
ಚಿತ್ರಾ ಸಂತೋಷ್
Chitravathi.k@timesofindia.com

ಅದು 1942ರ ನವೆಂಬರ್ 6. ಮದ್ರಾಸ್‌ನ ಆ ಮನೆಯಲ್ಲಿ ದೀಪಾವಳಿ ಸಂಭ್ರಮ ಕಳೆಗಟ್ಟುವಾಗಲೇ ಮಗಳು ಜನಿಸಿದ್ದಳು. ಸಂಗೀತವನ್ನು ಇಷ್ಟಪಡುತ್ತಿದ್ದ ಹೆತ್ತವರು ಆ ಮಗುವಿಗೆ 'ಲಲಿತ್' ಎಂದು ಹೆಸರಿಟ್ಟರು. ಹಿಂದೂಸ್ತಾನಿ ಸಂಗೀತದಲ್ಲಿ ಲಲಿತ್ ಅಥವಾ ಲಲತ್ ಎನ್ನುವುದು ಬೆಳಗಿನ ಸಮಯದ ರಾಗ. ಅಂದರೆ, ರಾತ್ರಿಯ ಕತ್ತಲು ಸರಿದು ಬೆಳಗು ಮೂಡುವ ಹೊತ್ತಿಗೆ ಹಾಡುವ ಭಕ್ತಿ ಮತ್ತು ಗಂಭೀರ ಭಾವ ಹೊಂದಿರುವ ಸುಂದರ ರಾಗವಿದು. ಮಗಳು ಹುಟ್ಟಿದಾಗಲೆಂದು 'ಲಲಿತ್' ಎಂದು ಹೆಸರಿಟ್ಟಾಗ ಅಕ್ಕಪಕ್ಕದವರು "ಹೆಣ್ಣುಮಗುವಿಗೆ ಏಕೆ ಪುರುಷರ ಹೆಸರಿಟ್ಟೀರಿ?," ಎಂದು ಕೇಳಿದರೆ, ಮಗುವಿನ ತಂದೆ ಪ್ರಭಾಕರ ಧಾರೇಶ್ವರ, "ಲಲಿತ್ ರಾಗವಲ್ಲ, ರಾಗಿಣಿ," (ಹಿಂದೆ ರಾಗ ಎಂದರೆ ಪುರುಷ, ರಾಗಿಣಿ ಎಂದರೆ ಹೆಣ್ಣು ಎನ್ನುವ ರೂಢಿ ಇತ್ತು. ಅಂದರೆ ಮೃದು ಸ್ವಭಾವದ ಅಥವಾ ಭಾವದ ರಾಗಗಳನ್ನು ರಾಗಿಣಿ ಎನ್ನುತ್ತಿದ್ದರು) ಎಂದು ಉತ್ತರಿಸುತ್ತಿದ್ದರಂತೆ. ಸಂಗೀತವನ್ನು ಪ್ರೀತಿಸುವ ಹೆತ್ತವರು ಮಗು ಮಗ್ಗುಲು ಬದಲಿಸಿ ಅಂಬೆಗಾಲಿಕ್ಕುವಾಗಲೇ ಗ್ರಾಮಾಫೋನ್‌ಗಳಲ್ಲಿ ದಿಗ್ಗಜರ ಹಾಡುಗಳನ್ನು ಕೇಳಿಸುತ್ತಿದ್ದರು, ಅವೇ ಮಗುವಿಗೆ ಜೋಗುಳದ ಹಾಡುಗಳೂ ಹೌದು. ಎರಡು ವರ್ಷ ದಾಟುವಷ್ಟರಲ್ಲಿ ಪುಟ್ಟ ಲಲಿತ್ ರಾಗಗಳನ್ನು ಗುರುತಿಸುತ್ತಿದ್ದಳು. ಅಷ್ಟೊತ್ತಿಗೆ ಧಾರೇಶ್ವರ ಕುಟುಂಬ ಬೆಂಗಳೂರಿನಲ್ಲಿ ನೆಲೆಕಂಡಿತ್ತು.

ಅಂದೊಮ್ಮೆ ಆಗ್ರಾ ಘರಾಣೆಯ ದಿಗ್ಗಜ ಬರೋಡಾದಲ್ಲಿ ಆಸ್ಥಾನ ಕಲಾವಿದರಾಗಿದ್ದ ಉಸ್ತಾದ್ ಫಯಾಜ್ ಖಾನ್ ಮೈಸೂರಿನ ದರ್ಬಾರ್‌ನಲ್ಲಿ ಹಾಡಲು ಬಂದಿದ್ದರು. ಹಾಗೆಯೇ ಮೈಸೂರಿನಿಂದ ಹಿಂತಿರುಗುವಾಗ ಬೆಂಗಳೂರಿನಲ್ಲಿ ಅವರ ಕಛೇರಿ ಇತ್ತು, ಇಡೀ ರಾತ್ರಿ ಕಛೇರಿ. ಮೂರರ ಪುಟಾಣಿ ಲಲಿತ್ ಬೆರಗಿನಿಂದ ಆ ಕಛೇರಿಯನ್ನು ಆಲಿಸಿದ್ದೇ ಆಲಿಸಿದ್ದು. ಮಗುವಿನ ಆಸಕ್ತಿ ನೋಡಿದ ಹೆತ್ತವರು ಬೆಂಗಳೂರಿನಲ್ಲಿ ಆಗ್ರಾ ಘರಾಣೆಯ ಬೇರನ್ನು ಬೆಳೆಸಿದ ಪಂ.ರಾಮರಾವ್ ನಾಯಕ್ ಅವರ ಬಳಿ ಬಿಟ್ಟರು. ಅಲ್ಲಿ ಲಲಿತ್‌ಗೆ ಸರೆಗಮಪ ದನಿ... ಪಾಠ ಶುರುವಾಯಿತು.

ಮದುವೆಯೇ ಬದುಕಿನ ತಿರುವು: ದೀಪಾವಳಿಯಂದು ಜನಿಸಿ ಸಂಗೀತ ಮತ್ತು ಸಂಗೀತ ಶಿಕ್ಷಣ ಎರಡೂ ಕ್ಷೇತ್ರದಲ್ಲಿ ನಂದಾದೀಪದಂತೆ ಬೆಳಗಿದ ಆ ಮಹಾನ್ ಸಾಧಕಿಯೇ ಲಲಿತ್ ಜೆ. ರಾವ್. ಮೊನ್ನೆಮೊನ್ನೆ ತಮ್ಮ 84ರ ಹೊತ್ತಿಗೆ ಅಗಲಿದ್ದಾರೆ. ಗಾಯಕಿಯಾಗಿ, ಗುರುವಾಗಿ, ಸಂಗೀತದ ಅಪಾರ ಜ್ಞಾನವುಳ್ಳ ವಿದ್ವಾಂಸೆಯಾಗಿ ಅವರು ಹರಿದು ಬಂದ ದಾರಿಯೇ ಸ್ಫೂರ್ತಿದಾಯಕ. ಶಾಲೆ, ಕಾಲೇಜು ಪಠ್ಯದಲ್ಲೂ ಪ್ರತಿಭಾವಂತೆ, ಕ್ರೀಡೆಯಲ್ಲೂ ಸಾಧಕಿ, ಜತೆಗೆ ಸಂಗೀತದಲ್ಲೂ, ತನಗೆ ಹದಿನೈದು ತುಂಬಿದಾಗಲೇ ಆಕೆ ಮುಂಬಯಿಯಲ್ಲಿ ನಡೆದ ಪ್ರತಿಷ್ಠಿತ ಸ್ವಾಮಿ ಹರಿದಾಸ ಸಂಗೀತ ಸಮ್ಮೇಳನದಲ್ಲಿ ಹಾಡಿದರು. ಕೇಸರಬಾಯಿ ಕೇರ್ಕರ್ ಅವರಂಥ ಅಗ್ರಗಣ್ಯ ಕಲಾವಿದರೂ ಅಂದು ಹಾಡಿದ ವೇದಿಕೆಯಲ್ಲಿ ಲಲಿತ್ ತನ್ನ ದನಿಯ ಮೂಲಕ ಶ್ರೋತೃಗಳ ಮನಗೆದ್ದಿದ್ದರು. ಈ ಸಮ್ಮೇಳನದಲ್ಲಿ ಹಾಡಿದ ಕಿರಿಯ ಗಾಯಕಿ ಎನ್ನುವ ಹೆಗ್ಗಳಿಕೆ ಇವರದ್ದು. ಆದರೆ, ಕಾಲೇಜು ಮೆಟ್ಟಿಲೇರುವ ಹೊತ್ತಿಗೆ 'ಶಿಕ್ಷಣವೇ ಮೊದಲು' ಎಂದ ಅಪ್ಪನ ಮಾತಿಗೆ ಕಟ್ಟುಬೀಳಲೇಬೇಕಾಯಿತು. ಬೆಂಗಳೂರಿನ ಐಐಎಸ್ಸಿಯಲ್ಲಿ ಬಿಇ ಮುಗಿಸಿ, ಕೆನಡಾದ ಬ್ರೂನ್ಸ್‌ವಿಕ್ ವಿವಿಯಲ್ಲಿ ಬಯೋ ಮೆಡಿಕಲ್ ಎಲೆಕ್ಟ್ರಾನಿಕ್ಸ್‌ನಲ್ಲಿ ಎಂಎಸ್ಸಿ ಪೂರ್ಣಗೊಳಿಸಿ ಐಬಿಎಂ ಸಂಸ್ಥೆಯಲ್ಲಿ ಉನ್ನತ ಹುದ್ದೆಯನ್ನೂ ಪಡೆದರು. ಇದೇ ಸಮಯದಲ್ಲಿ ವೃತ್ತಿಯಲ್ಲಿ ಎಂಜಿನಿಯರ್, ಪ್ರವೃತ್ತಿಯಲ್ಲಿ ಶಾಸ್ತ್ರೀಯ ಸಂಗೀತದ ಅಭಿಮಾನಿಯಾಗಿದ್ದ ಆಗಿದ್ದ ಜಯವಂತ್ ರಾವ್ ಅವರನ್ನು ಕೈಹಿಡಿದಿದ್ದೇ ಬದುಕು ಮತ್ತೆ ಬದಲಾಯಿತು.

ದಾಂಪತ್ಯದಲ್ಲಿ ಸರಿಗಮಪ: "ಅವಳ ಕಛೇರಿಗೊಮ್ಮೆ ಹಾಜರಾದಾಗ ಅಂದವಳು ಲಲಿತ್ ರಾಗವನ್ನೇ ಹಾಡಿದ್ದಳು. ಆಕೆ ಅದ್ಭುತ ಗಾಯಕಿ ಎನ್ನುವುದು ನನ್ನ ಅರಿವಿಗೂ ಬಂದಿತ್ತು. ಮದುವೆಯಾಗುವಾಗ ನಿನ್ನ ಭವಿಷ್ಯ ಇರುವುದು ಸಂಗೀತದಲ್ಲಿ ಎಂದೆ. ಬಹಳ ಪ್ರೀತಿಯಿಂದ ಸಂಗೀತ ಸಾಧನೆಯತ್ತ ಮರುಹೆಜ್ಜೆಹಾಕಿದಳು. ಮದುವೆಯ ನಂತರ ಪಂ. ದಿನಕರ ಕಾಯ್ಕಿಣಿ ಬಳಿ ಒಂದಷ್ಟು ವರ್ಷ ಕಲಿತು, ತದನಂತರ ಆಗ್ರಾ ಘರಾಣೆಯ ಮೇರು ಕಲಾವಿದ ಪದ್ಮಭೂಷಣ ಖಾದೀಮ್ ಹುಸೇನ್ ಖಾನ್ ಬಳಿ 14 ವರ್ಷ ಕಠಿಣ ಅಭ್ಯಾಸ ಮಾಡಿದಳು. 1970ರಿಂದ 1993ರ ತನಕ ಅವಳ ಕಛೇರಿಯ ಪರ್ವಕಾಲ. ಅವಳು ಕಛೇರಿಗೆ ಹೋದಾಗ ಮಗ ನನ್ನ ಮಡಿಲು ಸೇರುತ್ತಿದ್ದ. ವಾರಾಂತ್ಯದಲ್ಲಿ ಕಛೇರಿಯಿದ್ದರೆ ಮಗನೊಂದಿಗೆ ಮೂರೂ ಜನ ಕಛೇರಿಗೆ ಹೋಗುತ್ತಿದ್ದೆವು. ನಾನು ಅವಳಿಗೆ ಸಹಕಾರ ಅಷ್ಟೇ ನೀಡಿದ್ದೇ, ಸಾಧನೆ ಎಲ್ಲವೂ ಅವಳದ್ದೇ," ಎನ್ನುವಾಗ ಜಯವಂತ ರಾವ್ ಅವರ ಕಣ್ಣುಗಳಲ್ಲಿ ಹೆಮ್ಮೆಯ ಹನಿಯಿತ್ತು. ಲಲಿತ್ ರಾವ್ ಕೂಡ ತಮ್ಮ ಅನೇಕ ಸಂದರ್ಶನಗಳಲ್ಲಿ ಮದುವೆಯ ನಂತರ ಪತಿ ತನಗೆ ನೀಡಿದ ಸಹಕಾರವನ್ನು ಪದೆಪದೇ ನೆನಪಿಸಿಕೊಂಡಿದ್ದಾರೆ.

ಮತ್ತೆ ಹಾಡಲಾಗಲಿಲ್ಲ!: ಆದರೆ, ಸುಮಾರು 20ಕ್ಕೂ ಹೆಚ್ಚು ವರ್ಷ ನಿರಂತರ ಕಛೇರಿಗಳಲ್ಲಿ ಸಕ್ರಿಯರಾಗಿದ್ದ ಲಲಿತ್ ಜೆ. ರಾವ್ ಅವರ ಬದುಕಿನಲ್ಲಿ 1993ರ ಅಕ್ಟೋಬರ್ ಕಹಿಘಟ್ಟ. ಯುಕೆ-ಸ್ವಿಡ್ಜರ್ಲೆಂಡ್ ಕಛೇರಿಯ ಪ್ರವಾಸದಲ್ಲಿದ್ದಾಗಲೇ ತೀವ್ರ ಸೈನಸಿಟೀಸ್ ತೊಂದರೆಯಿಂದಾಗಿ ದನಿ ಕೈಕೊಟ್ಟಿತು. ಪರಿಣಾಮವಾಗಿ ಆರು ವರ್ಷ ಖಿನ್ನತೆಯ ಸ್ಥಿತಿಯಲ್ಲಿದ್ದರು. ಚಿಕಿತ್ಸೆಯ ನಂತರ ದನಿ ಮರಳಿ ಪಡೆದರೂ ಮೊದಲಿನಂತೆ ಹಾಡುವುದು ಕಷ್ಟವಾಯಿತು. ಬದುಕಿನಲ್ಲಿ ಎಲ್ಲವನ್ನೂ ಕಳೆದುಕೊಂಡಂಥ ಭಾವ. "ಆಕೆಗದು ಬಹಳ ಕಷ್ಟದ ಸಂದರ್ಭ. ಕೊನೆಗೆ ನಮ್ಮ ಆಧ್ಯಾತ್ಮ ಗುರುಗಳನ್ನು ಭೇಟಿಯಾದಾಗ ನಿನ್ನೊಳಗೆ ಸಂಗೀತವನ್ನು ಜೀವಂತವಾಗಿಡಬೇಕಾದರೆ ಗಾಯನ ಒಂದೇ ದಾರಿಯಲ್ಲ, ಗುರುವಿನ ಸ್ಥಾನದಲ್ಲಿ ನಿಂತು ಕಲಿತ ವಿದ್ಯೆಯನ್ನು ಹಂಚು," ಎಂದು ಮಾರ್ಗದರ್ಶನ ಮಾಡಿದರು. ಅಂದಿನಿಂದ ಅಂದರೆ 1999ರಿಂದ ಆಕೆ ಮತ್ತೆ ಗುರುವಾಗಿ ನೂರಾರು ಮಂದಿಗೆ ಬೋಧಿಸಿದಳು. ಕೊನೆತನಕವೂ ಅವಳಲ್ಲಿ ಸಂಗೀತ ಜೀವಂತವಾಗಿತ್ತು," ಎಂದು ಜಯವಂತ್ ಹಳೆಯ ಕಹಿನೆನಪುಗಳನ್ನು ಮೆಲುಕು ಹಾಕಿದರು.

ಸಾಮಾನ್ಯವಾಗಿ ಹಿಂದೂಸ್ತಾನಿ ಸಂಗೀತದಲ್ಲಿ ಆಗ್ರಾ ಘರಾಣೆ ಎಂದರೆ ತೀರಾ ಹಳೆಯ ಪದ್ಧತಿ, ಆ ಗಾಯನ ಶೈಲಿ ಪುರುಷರ ದನಿಗೆ ಒಗ್ಗುವಂಥದ್ದು ಎಂದೆಲ್ಲಾ ಮಾತುಗಳಿವೆ. ಆದರೆ, ಬಾಲ್ಯದಿಂದಲೇ ಈ ಶೈಲಿಯನ್ನೇ ಪ್ರೀತಿಸುತ್ತಿದ್ದ ಲಲಿತ್ ಅವರು ಕೊನೆಯವರೆಗೂ ಅದೇ ಘರಾಣೆಯ ಕಲಾವಿದೆಯಾಗಿ ಬಹಳ ಎತ್ತರಕ್ಕೇರಿದರು. ಅವರ ಹಳೆಯ ಸಂದರ್ಶನಗಳನ್ನು ಕೇಳಿದಾಗಲೂ ಘರಾಣೆಗಳ ಬಗ್ಗೆ ಅವರ ಯೋಚನೆಗಳು ಬಹಳ ಉನ್ನತಮಟ್ಟದ್ದವು ಎಂಬುವುದು ದಿಟವಾಗುತ್ತದೆ. ಕೇಂದ್ರ ಸಂಗೀತ ಅಕಾಡೆಮಿಯಿಂದಲೂ ಪುರಸ್ಕೃತರಾದ ಲಲಿತ್ ರಾವ್ ಆಕಾಶವಾಣಿ ಅಗ್ರದರ್ಜೆಯ ಕಲಾವಿದೆಯಾಗಿ ಅನೇಕ ಕಾರ್ಯಕ್ರಮಗಳನ್ನು ನೀಡುತ್ತಾ ಬಂದರು. 'ಭೈರವ್ ಟು ಭೈರವಿ', 'ಆಗ್ರಾ ಘರಾಣಾ-ಏಕ್ ವಟವೃಕ್ಷ', 'ರಾಗ ರಂಗ್ ಸಮಯ ಯಾತ್ರಾ', 'ಪಂಚರಂಗಿ ರಾಗೊಂಕೆ ಗುಲ್‌ದಸ್ತಾ'... ಸೇರಿದಂತೆ ವಿಭಿನ್ನ ಕಲ್ಪನೆಯಲ್ಲಿ ತನ್ನ ಘರಾಣೆಯೂ ಸೇರಿದಂತೆ ಶಾಸ್ತ್ರೀಯ ಸಂಗೀತದ ಹರವನ್ನು ವಿಸ್ತರಿಸಿದರು. ಸಂಗೀತದ ಬಗ್ಗೆ ಉಪನ್ಯಾಸಗಳನ್ನೂ ನೀಡಿದರು. ಲಂಡನ್‌ನ ನವರಸ ರೆಕಾರ್ಡ್, ಫ್ರಾನ್ಸ್‌ನ ಒಕಾರೋ ರೇಡಿಯೊ ಸೇರಿದಂತೆ ಜಗತ್ತಿನ ವಿವಿಧೆಡೆ ಅವರ ಧ್ವನಿಮುದ್ರಿಕೆಗಳು ಇಂದಿಗೂ ಹಸಿರಾಗಿವೆ.

ಅಗಲಿದ ಪತ್ನಿಯ ನೆನಕೆಯಲ್ಲೇ ಇದ್ದ ಜಯವಂತ್ ಅವರನ್ನು ಭೇಟಿಯಾದಾಗ, ಅವರು ಹೇಳಿದ್ದಿಷ್ಟೇ: "ನನ್ನವಳು ಸದ್ದಿಲ್ಲದೆ ಸಾಧನೆ ಮುಂದುವರಿಸಿದವಳು. ಅವಳ ದನಿಯಲ್ಲಿ 'ದರಬಾರಿ'ಯಂಥ ಪುರುಷ ದನಿಗೆ ಸೂಕ್ತವಾಗಿರುವ ಗಂಭೀರ ರಾಗವನ್ನು ಕೇಳಲು ಹೆಚ್ಚು ಇಷ್ಟಪಡುತ್ತಿದ್ದೆ. ಆದರೆ, ಆಕೆ ಯಾವುದೇ ರಾಗ ಹಾಡಲಿ ತನ್ನ ಘರಾಣೆಯೊಳಗೆ ಸುತ್ತುತ್ತಾ ಬಂದಿಶ್‌ಗಳಿಗೆ ಜೀವಭಾವ ತುಂಬುವ ಪರಿ ವಿಶಿಷ್ಟವಾದುದು. ರಾಗ ಬಿಹಾಗ್‌ನಲ್ಲಿ ಬರುವ ಬಂದಿಶ್‌ನ 'ಕೈಸೆಸಮುಝಾವೋ...' ಎಂಬ ಒಂದೇ ಸಾಲನ್ನು ಆಕೆ ವಿಸ್ತರಿಸುತ್ತಿದ್ದ ರೀತಿಯನ್ನು ನಾ ಹೇಗೆ ಬಣ್ಣಿಸಲಿ?," ಎಂದು!

ಅವರ ಮಾತು ಮುಂದುವರಿದಿತ್ತು, ನನ್ನಲ್ಲಿ ಉತ್ತರಗಳಿರಲಿಲ್ಲ, ಬರಿಯ ಭಾವ ಅಷ್ಟೇ!. ■

ಲಲಿತ್ ಜೆ. ರಾವ್ ದಂಪತಿ

ನಿಮ್ಮ ಬುದ್ಧಿ, ಮನಸ್ಸು ನಿಮ್ಮ ಮಿದುಳಿನಲ್ಲಿಲ್ಲ... ನಂಬುವಿರಾ?

ಮನೋ-ಗಮ
ಡಾ. ಕೆ.ಎನ್. ಗಣೇಶಯ್ಯ
editor@vijaykarnataka.com

ಹೌದು. ನಂಬಲು ಕಷ್ಟವೇ ಆದರೂ ಹಲವು ದಶಕಗಳಿಂದ ಮಿದುಳಿನ ಶಸ್ತ್ರ ಚಿಕಿತ್ಸೆ ಮತ್ತು ಶುಶ್ರೂಷೆಗೆ ಒಳಗಾಗಿದ್ದ ರೋಗಿಗಳ ಅಧ್ಯಯನದಿಂದ ಸಂಗ್ರಹಿಸಿದ ಮಾಹಿತಿಯನ್ನಾಧರಿಸಿ ವಿಜ್ಞಾನಿಗಳು ಈ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಮನೋವಿಜ್ಞಾನಿಗಳ ಮತ್ತು ಮಿದುಳು ತಜ್ಞರ ಅಧ್ಯಯನಗಳ ಮೂಲಕ ಮಿದುಳಿಲ್ಲದೆಯೂ ಚಿಂತಿಸುವ, ಅವಲೋಕಿಸುವ, ತರ್ಕಿಸುವ ಶಕ್ತಿ ಮನುಷ್ಯನಿಗಿದೆ ಎನ್ನುವುದಕ್ಕೆ ದಟ್ಟ ಸೂಚನೆಗಳು ದೊರಕಿವೆ.

ಮೊದಲಿಗೆ ಇಲ್ಲಿ ಮನಸ್ಸು ಎಂದರೆ ಏನು ಎಂಬ ಬಗ್ಗೆ ಒಂದು ಸ್ಪಷ್ಟತೆ. ನಮ್ಮ ಅಂಗಾಂಗಗಳ ಚಲನವಲನವನ್ನು ನಿಗ್ರಹಿಸುವ (Motor activities), ನೆನಪುಗಳನ್ನು ಸಂಗ್ರಹಿಸುವ (Memories), ಪಂಚೇಂದ್ರಿಯಗಳ ಸಂವೇದನೆಗಳನ್ನು ಗುರುತಿಸುವ, ನಗು, ಅಳು ಮುಂತಾದ ಭಾವಗಳನ್ನು (Emotional expressions) ಹೊಮ್ಮಿಸುವ ಕ್ರಿಯೆಗಳು ಮಿದುಳಿನ ಕೆಲವು ನಿರ್ದಿಷ್ಟ ಭಾಗಗಳಿಂದ ನಿರ್ದೇಶಿತಗೊಳ್ಳುತ್ತವೆ ಎಂದು ಗುರುತಿಸಲಾಗಿದೆ. ಅವೆಲ್ಲವೂ ಬಹುಪಾಲು ನಮ್ಮಲ್ಲಿ 'ಅಂತರ್ಗತ'ವಾಗಿರುವ ಅಥವಾ ಯಾಂತ್ರಿಕವಾಗಿ (Instinctive and Invaluantary) ಮೂಡುವ ಗುಣವಿಶೇಷಗಳು ಎನ್ನಬಹುದು. ಆದರೆ, The Immortal Mind ಎಂಬ ಪುಸ್ತಕದ ಕರ್ತೃ ಹಾಗೂ ಸಾವಿರಾರು ರೋಗಿಗಳ ಮಿದುಳಿನ ಶಸ್ತ್ರಚಿಕಿತ್ಸೆ ಕೈಗೊಂಡಿರುವ ಡಾ. ಇಗ್ನೋರ್ ಪ್ರಕಾರ ಅವೆಲ್ಲವೂ ಮಿದುಳಿನ ಕಾರ್ಯಗಳೇ ಆದರೂ ಅವುಗಳನ್ನು ಬುದ್ಧಿ ಅಥವಾ ಚಿಂತಿಸುವ ಮನಸ್ಸು ಎನ್ನಲಾಗದು ಎನ್ನುತ್ತಾರೆ. ಬದಲಿಗೆ ಅಂಥ ಯಾಂತ್ರಿಕ ಗುಣಗಳ ಹೊರತಾಗಿ, ತರ್ಕವನ್ನು ಮಂಡಿಸಬಲ್ಲ, ಯೋಚಿಸಬಲ್ಲ, ಹೊಸಪರಿಕಲ್ಪನೆಗಳನ್ನು ಹುಟ್ಟುಹಾಕಬಲ್ಲ ಮಾನವ-ಸೀಮಿತ ಶಕ್ತಿಗೆ ನಿಜವಾದ ಮನಸ್ಸು ಎಂದು ಅವರು ಅರ್ಥೈಸುತ್ತಾರೆ. ಕವಿತೆ ಕಟ್ಟುವ, ಕೃತಿಗಳ ರಚನೆಯನ್ನು ಅವಲೋಕಿಸುವ, ಕಲ್ಪನೆಯ ಚಿತ್ರ ರಚಿಸುವ, ಸಂಗೀತ ಸೃಷ್ಟಿಸುವ, ಗಣಿತದಲ್ಲಿ ಹೊಸ ಆಯಾಮಗಳನ್ನು ಹುಡುಕಿ ತೆಗೆಯುವ, ಮುಂತಾದ ಸೃಜನಶೀಲ ಕ್ರಿಯೆಗಳಲ್ಲಿ ತೊಡಗಿಸಿಕೊಳ್ಳಬಲ್ಲ ಬೌದ್ಧಿಕಶಕ್ತಿಯನ್ನು ಅವರು ಮನಸ್ಸು ಎಂದು ಪರಿಗಣಿಸುತ್ತಾರೆ.

ಅಂಥ ಮನಸ್ಸು, ಸೃಜನತೆಯನ್ನು ಹೊಮ್ಮಿಸುವ ಮನಸ್ಸು, ನಮ್ಮ ಪ್ರಜ್ಞೆಯನ್ನು ಬಿಂಬಿಸುವ ಮನಸ್ಸು, ಮಿದುಳಿನಲ್ಲಿ ನೆಲೆಯಾಗಿಲ್ಲ ಎನ್ನುವುದು ಅವರ ವಾದ.

ಇದಕ್ಕೆ ಹಲವು ರೀತಿಯ ಪುರಾವೆಗಳನ್ನು ನೀಡಲಾಗಿದೆ: ಉದಾಹರಣೆಗೆ, ಹುಟ್ಟಿದಂದಿನಿಂದ ಮಿದುಳಿನ ಬಹುಪಾಲು ಭಾಗವನ್ನು ಕಳೆದುಕೊಂಡಿದ್ದ ಹಲವು ಮಂದಿ ಇತರೆ ಮಕ್ಕಳಂತೆಯೇ ಆರೋಗ್ಯವಾಗಿ ಬೆಳೆದು, ಕೆಲವರು ಸ್ನಾತಕೋತ್ತರ ಮಟ್ಟದಲ್ಲಿ ಪ್ರತಿಭಾವಂತರಾಗಿರುವ ಉದಾಹರಣೆಗಳನ್ನೂ ಡಾ. ಇಗ್ನೋರ್ ಒದಗಿಸುತ್ತಾರೆ. ಅವರಲ್ಲಿ ಒಬ್ಬ ಹುಡುಗನ ಕಥೆಯಂತೂ ವಿಚಿತ್ರ. ಜನಿಸಿದಾಗ ಮಿದುಳೇ ಇಲ್ಲದಿದ್ದ ಕಾರಣ, ಆವ ಸ್ವಾಭಾವಿಕವಾಗಿ ಬೆಳೆಯಲಾರ, ನರಳಾಟದ ಜೀವನ ನಡೆಸಬೇಕಾದ ಸ್ಥಿತಿ ಒದಗಿಬರುತ್ತದೆ. ಹಾಗಾಗಿ, ಆ ಜೀವವನ್ನು ಭ್ರೂಣ ಹಂತದಲ್ಲಿಯೇ ಕೊನೆಗೊಳಿಸುವುದು ಸೂಕ್ತ ಎಂಬ ಸೂಚನೆಗೆ ವಿರುದ್ಧವಾಗಿ ಅವನನ್ನು ಉಳಿಸಿ, ಬೆಳೆಸಲಾಗುತ್ತದೆ. ನಿರೀಕ್ಷಿಸಿದಂತೆ ಆತ ಅಂಗವಿಕಲನಾಗಿ ಬೆಳೆಯುತ್ತಾನೆ. ಆದರೂ 'ತಾನು' ಎಂಬ ಪ್ರಜ್ಞೆಯನ್ನು ಹೊತ್ತವನಾಗಿ ಬದುಕುತ್ತಾನೆ. ಅಂದರೆ 'ನಾನು' ಎಂಬ ಅರಿವು ಮೂಡಿಸಬಲ್ಲ, ಮನಃಶಕ್ತಿಗೆ ಮಿದುಳು ಬೇಕಿಲ್ಲ ಎಂದು ವಾದಿಸುತ್ತಾರೆ ಡಾ. ಇಗ್ನೋರ್. ಹಾಗಾದರೆ ನಮ್ಮ ಅಸ್ತಿತ್ವದ ಬಗ್ಗೆ ನಮ್ಮಲ್ಲಿ ಪ್ರಜ್ಞೆಯನ್ನು ಹುಟ್ಟುಹಾಕುವ ಆ ಸೃಜನಶೀಲ ಮನಸ್ಸು ನಮ್ಮಲ್ಲಿ ಎಲ್ಲಿದೆ?

ಈ ದಿಕ್ಕಿನಲ್ಲಿ ಜಸ್ಟಿನ್ ಸರ್ಗೆಂಟ್ ಎಂಬ ತಜ್ಞ ಕೈಗೊಂಡ ಅಧ್ಯಯನವೊಂದು ಅತಿ ಕುತೂಹಲಕರ ಎನ್ನಬಹುದು. ಕೆಲವು ವ್ಯಕ್ತಿಗಳಲ್ಲಿ ಕಾರಣಾಂತರದಿಂದ ಮಿದುಳಿನ ಎಡ ಮತ್ತು ಬಲ ಪಾರ್ಶ್ವಗಳ ನಡುವಿನ ಸಂಪರ್ಕವನ್ನು ಶಸ್ತ್ರ ಚಿಕಿತ್ಸೆಯ ಮೂಲಕ ಸಂಪೂರ್ಣವಾಗಿ ಕಡಿದುಹಾಕಲಾಗಿರುತ್ತದೆ. ಅಂಥ ವ್ಯಕ್ತಿಗಳ ಮಿದುಳಿನ ಎರಡೂ ಪಾರ್ಶ್ವಗಳ ನಡುವೆ ಸಂಪರ್ಕ ಸಾಧ್ಯವಿಲ್ಲ. ಹಾಗಾಗಿ ಮಿದುಳಿನ ಯಾವುದೇ ಒಂದು ಪಾರ್ಶ್ವಕ್ಕೆ ಮಾತ್ರವೇ ಮಾಹಿತಿ ಸಿಗುವಂತೆ ನಿಗ್ರಹಿಸಲು ಸಾಧ್ಯ. ಅವೆರಡರ ನಡುವೆ ಸಂಪರ್ಕ ಇಲ್ಲದ ಕಾರಣ ಒಂದು ಪಾರ್ಶ್ವಕ್ಕೆ ದೊರೆತ ಮಾಹಿತಿ ಮತ್ತೊಂದು ಪಾರ್ಶ್ವದ ಅರಿವಿಗೆ ಬರುವುದಿಲ್ಲ.

ಜಸ್ಟಿನ್ ಕೈಗೊಂಡ ಪ್ರಯೋಗ ಅತಿ ಸರಳವಾಗಿತ್ತು: ಅಂಥ ವ್ಯಕ್ತಿಗಳ ಎಡಪಾರ್ಶ್ವದ ಮಿದುಳಿಗೆ ಬಲದಿಕ್ಕಿಗೆ ಸೂಚಿಸುವ ಬಾಣದ ಗುರುತನ್ನೂ, ಬಲಪಾರ್ಶ್ವದ ಮಿದುಳಿಗೆ ಬೇರೊಂದು ದಿಕ್ಕಿಗೆ, ಉದಾಹರಣೆಗೆ ಮೇಲಕ್ಕೆ, ಸೂಚಿಸುವ ಬಾಣದ ಗುರುತನ್ನೂ ತೋರಿಸಲಾಗುತ್ತದೆ. ನಂತರ ಆ ವ್ಯಕ್ತಿಯನ್ನು "ನೀನು ಕಂಡ ಬಾಣದ ಗುರುತುಗಳು ಬೇರೆ ಬೇರೆಯಾಗಿವೆಯೇ?," ಎಂದು ಪ್ರಶ್ನಿಸಲಾಗುತ್ತದೆ. ಈ ಪ್ರಶ್ನೆಗೆ ಉತ್ತರಿಸಬೇಕಾದರೆ, ವ್ಯಕ್ತಿಯ ಎರಡೂ ಪಾರ್ಶ್ವಗಳ ಮಿದುಳುಗಳು ಕಂಡ ಚಿತ್ರಗಳನ್ನು ಒಟ್ಟಿಗೆ ತಂದು ಹೋಲಿಸಬೇಕು. ಆದರೆ, ಎರಡರ ನಡುವೆ ಸಂಪರ್ಕ ಇಲ್ಲದ ಕಾರಣ ಮಿದುಳಿನ ಎರಡೂ ಭಾಗಗಳಲ್ಲಿ ಆ ಹೋಲಿಕೆ ಸಾಧ್ಯವಿಲ್ಲ. ವಿಚಿತ್ರವೆಂದರೆ ಎರಡೂ ಪಾರ್ಶ್ವಗಳ ನಡುವೆ ಸಂಪರ್ಕವಿಲ್ಲದಿದ್ದರೂ ಆ ಪ್ರಯೋಗಕ್ಕೆ ಒಳಪಟ್ಟ ವ್ಯಕ್ತಿಗಳು ಅವೆರಡೂ ಬೇರೆ ಬೇರೆ ದಿಕ್ಕುಗಳನ್ನು ಸೂಚಿಸುತ್ತಿದ್ದವು ಎಂದು ತಿಳಿಸುತ್ತಾರೆ. ಅಂದರೆ, ಎರಡೂ ಪಾರ್ಶ್ವಗಳ ಮಾಹಿತಿಯನ್ನು ಮಿದುಳಿನ ಹೊರಗೆಲ್ಲೋ ತಂದು, ಹೋಲಿಸಿನೋಡಲಾಗುತ್ತಿದೆ ಎಂದು ಕಂಡುಬರುತ್ತದೆ. ಈ ಕ್ರಿಯೆ ಎಲ್ಲಿ ನಡೆಯುತ್ತಿದೆ?



ಅಂಥದ್ದೇ ಮತ್ತೊಂದು ಅಧ್ಯಯನ ಕೈಗೊಂಡ ಯೇರ್ ಪಿಂಟೊ ಎಂಬ ಮನೋವಿಜ್ಞಾನಿ, ಮಿದುಳಿನ ಒಂದು ಪಾರ್ಶ್ವಕ್ಕೆ ಒಡೆದು ತೂತಾಗಿರುವ ಕಿಟಕಿ ಗಾಜಿನ ಚಿತ್ರವನ್ನೂ, ಮತ್ತೊಂದು ಪಾರ್ಶ್ವಕ್ಕೆ ಒಂದು ಕ್ರಿಕೆಟ್ (ಅಥವಾ ಬೇಸ್‌ಬಾಲ್) ಚೆಂಡನ್ನು ತೋರಿಸಿ ಅದರಿಂದ ನಿಮಗೆ ಏನು ಅರ್ಥವಾಯಿತು ಎಂದು ಕೇಳಿದಾಗ, "ಚೆಂಡು ಬಿದ್ದು ಕಿಟಕಿ ಗಾಜು ಒಡೆದಿದೆ," ಎಂದು ಸರಿಯಾಗಿ ಅರ್ಥೈಸುತ್ತಾರೆ. ಅಂದರೆ, ಎರಡೂ ಪಾರ್ಶ್ವಗಳ ಮಾಹಿತಿಯನ್ನು ಮಿದುಳಿನ ಹೊರಗೆಲ್ಲೋ ತಂದು, ಹೋಲಿಸಿ, ಜೋಡಿಸಿ ನೋಡಿ, ಸೂಕ್ತವಾದ ಅರ್ಥವನ್ನು ಸಂಸ್ಕರಿಸಲಾಗುತ್ತಿದೆ. ಆದರೆ, ಎಲ್ಲಿ?

ಇಗ್ನೋರ್ ಪ್ರಕಾರ, ಮಿದುಳಿನ ಹೊರಗಿನ ಪ್ರಜ್ಞೆಯಲ್ಲಿ ಆ ಹೋಲಿಕೆ ಮತ್ತು ಸಂಸ್ಕರಣೆ ನಡೆದಿರಬೇಕು. ಅಂದರೆ ಆ ಸೃಜನಶೀಲ, ಪ್ರಜ್ಞಾವಂತ ಮನಸ್ಸು ನಮ್ಮ ಮಿದುಳಲ್ಲಿಲ್ಲ. ಬದಲಿಗೆ ಅದರಹೊರಗೆ ಎಲ್ಲೋ ಜೀವಾತ್ಮದಲ್ಲಿ ನೆಲೆಯಾದಂತೆ ತೋರುತ್ತದೆ ಎಂದು ವಾದಿಸುತ್ತಾರೆ. ಇಂಥ ಹಲವು ಘಟನೆಗಳನ್ನು, ಅಧ್ಯಯನಗಳನ್ನೂ ಒಟ್ಟಿಗೆ ತಂದು ಅವರು ನಮ್ಮಲ್ಲಿ ಕೇವಲ ಭೌತಿಕ ವಸ್ತುಗಳ ಅಥವಾ ಅಣುಗಳ ಸಂಗಮದಿಂದ ಮಾತ್ರವೇ ಸೃಷ್ಟಿಸಲಾಗದ ಪ್ರಜ್ಞಾಶಕ್ತಿ, ಆತ್ಮ (Soul) ಇದೆ ಎಂದೂ ವಾದಿಸುತ್ತಾರೆ. ಬರುಬರುತ್ತ ವಿಜ್ಞಾನ ಆಧ್ಯಾತ್ಮಿಕ ಚಿಂತನೆಗಳಿಗೆ ಪುಷ್ಟಿ ಕೊಡುತ್ತಿರುವಂತೆ ತೋರುತ್ತಿದೆ. ■

(**ಲೇಖಕರು:** ವೈಜ್ಞಾನಿಕ ಕಾದಂಬರಿಕಾರರು)

ಹರ ಹಚಿ ಬು! ಜಪಾನಿ ದೀರ್ಘಾಯಸ್ಸಿನ ಗುಟ್ಟು

ಟೋಕಿಯೊ ಮೇಲ್
ಶ್ರೀಕಲಾ ಬೋಳ್ಯಾಜೆ
editor@vijaykarnataka.com

ಅನ್ನದ ಸುತ್ತಲಿನ ನಮ್ಮ ಜೀವನ ಎಷ್ಟು ವೈವಿಧ್ಯಮಯವೋ, ಅಡುಗೆಯ ಲೋಕವೂ ಅಷ್ಟೇ ರುಚಿಕರ. ಒಂದು ತುತ್ತು ಅನ್ನಕ್ಕಾಗಿ ನಾವು ಮಾಡುವ ಸಿದ್ಧತೆ ನೋಡಿದರೆ ಆಚ್ಚರಿ ಆಗುತ್ತದೆ. ಹದವಾಗಿ ಬೇಯಿಸಿ, ಉಪ್ಪು, ಹುಳಿ, ಖಾರ, ಸಿಹಿಯ ಸಮತೋಲನದಲ್ಲಿ ಒಂದಿಷ್ಟು ಮಸಾಲೆ ಸೇರಿಸಿದರೆ ಸಾಮಾನ್ಯ ಪದಾರ್ಥವೂ ಅದ್ಭುತ ರುಚಿಗೆ ತಿರುಗುತ್ತದೆ. ಭಾರತದಲ್ಲಿ ಕಂಡುಬರುವ ಅಡುಗೆ ವೈವಿಧ್ಯ ಬಹುಶಃ ಇಡೀ ಜಗತ್ತಿನಲ್ಲೇ ಅಪರೂಪ. ಪ್ರತಿ ಕೆಲವು ಮೈಲುಗಳಿಗೆ ಭಾಷೆ ಬದಲಾಗುವಂತೆ, ರುಚಿಯೂ ಬದಲಾಗುತ್ತದೆ. ದಕ್ಷಿಣ ಭಾರತದ ತಿಂಡಿಗಳ ಸೊಗಡು ಉತ್ತರ ಭಾರತೀಯರಿಗೆ ಹೊಸದಾಗಿದ್ದರೆ, ಅವರ ಊಟದ ರುಚಿ ನಮಗೆ ವಿಭಿನ್ನ ಅನುಭವ ನೀಡುತ್ತದೆ.

ಆದರೆ, ಆಹಾರವೆಂಬುದು ಕೇವಲ ಹೊಟ್ಟೆ ತುಂಬಿಸುವ ಪದಾರ್ಥವಲ್ಲ, ಅದು ಒಂದು ಸಂಸ್ಕೃತಿಯ ಪ್ರತಿಬಿಂಬವೂ ಹೌದು ಎಂಬುದು ಜಪಾನೀಯರ ಆಹಾರ ಪದ್ಧತಿ ನೋಡಿದಾಗ ಇನ್ನಷ್ಟು ಸ್ಪಷ್ಟವಾಗುತ್ತದೆ. ಊಟಕ್ಕೆ ಇಲ್ಲಿರುವ ಪ್ರಾಮುಖ್ಯತೆ ಅದ್ಭುತ. ಕೈಯಲ್ಲಿ ಎರಡು ಉದ್ದನೆಯ ಕಡ್ಡಿಗಳನ್ನು ಹಿಡಿದು, ನಮ್ಮ ಶ್ಯಾವಿಗೆಯಂತಿರುವ ನೂಡಲ್ಸ್ ಅನ್ನು ಎತ್ತಿ, ನೀರಿನಲ್ಲಿ ಅದ್ದಿದ ಹಾಗೆ ಸಾಸ್‌ನಲ್ಲಿ ಮುಳುಗಿಸಿ ಸವಿಯುವ ಜಪಾನಿಯರನ್ನು ನೋಡಿದರೆ ಊಟವೂ ಒಂದು ಕಲೆ ಅನ್ನುವ ಭಾವನೆ ಮೂಡುತ್ತದೆ.

ಇಂದು ವಿಶ್ವದ ಐಷಾರಾಮಿ ಹೋಟೆಲುಗಳಲ್ಲಿ ಹೆಮ್ಮೆಯಿಂದ ಬಡಿಸಲಾಗುವ ಸುಶಿಯ ಹಿಂದೆ ಶತಮಾನಗಳ ಇತಿಹಾಸವಿದೆ. ಸುಮಾರು ಎರಡು ಸಾವಿರ ವರ್ಷಗಳ ಇತಿಹಾಸ ಇರುವ ಇಲ್ಲಿನ ಆಹಾರ ಪದ್ಧತಿಯಲ್ಲಿ ಬೌದ್ಧ ಧರ್ಮದ ಪ್ರವೇಶ ಮಹತ್ವದ ತಿರುವು ನೀಡಿತು. ಮೀನಿನ ಹೊರತಾಗಿ ಯಾವುದೇ ಪ್ರಾಣಿಗಳ ಆಹಾರಕ್ಕೂ ನಿಷಿದ್ಧವಾಗಿತ್ತು. ಮಾಂಸಾಹಾರಕ್ಕೆ ಬಿದ್ದ ಈ ಬ್ರೇಕ್, ಜಪಾನೀಯರನ್ನು ಸಸ್ಯಾಹಾರ ಹಾಗೂ ಮೀನಿನ ಕಡೆಗೆ ಮುಖ ಮಾಡುವಂತೆ ಮಾಡಿತು. ಇದರ ಫಲವಾಗಿಯೇ ಜಪಾನಿ ಅಕ್ಕಿ ಮತ್ತು ಮೀನಿನ ಸಮ್ಮಿಶ್ರಣದಿಂದ ಹುಟ್ಟಿದ 'ಸುಶಿ' ಇಂದು ಜಗತ್ತನ್ನೇ ಗೆದ್ದಿದೆ. ಎಡೋ ಕಾಲದಲ್ಲಿ (1603–1868) ಆಹಾರ ಪದ್ಧತಿಯ ಸ್ವರ್ಣಯುಗ ಪ್ರಾರಂಭಗೊಂಡಿತು. ನಗರದ ಬೀದಿಗಳಲ್ಲಿ ಬೇಯಿಸಿದ ಅನ್ನದ ಜತೆಗೆ ಮೀನನ್ನು ಸೇರಿಸಿ ತಯಾರಿಸಲಾದ 'ಒನಿಗಿರಿ ಸುಶಿ', ಜಪಾನೀಯರ ಫಾಸ್ಟ್‌ಫುಡ್ ಆಗಿತ್ತು. ಹಾಗೆಯೇ ತರಕಾರಿ ಮತ್ತು ಮೀನನ್ನು ಹಿಟ್ಟಿನಲ್ಲಿ ಅದ್ದಿ ಕರಿಯುವ 'ತೆಂಪುರಾ' ಜತೆಗೆ 'ಸೋಬಾ ನೂಡಲ್ಸ್'ನಂಥ ಜನಪ್ರಿಯ ತಿನಿಸುಗಳು ಹುಟ್ಟಿಕೊಂಡವು. ಯಾವಾಗ ಜಪಾನ್ ತನ್ನ ಗಡಿಗಳನ್ನು ತೆರೆಯುತ್ತಿದ್ದಂತೆ ಪಾಶ್ಚಾತ್ಯ ಪ್ರಭಾವಗಳು ಆಹಾರ ಪದ್ಧತಿಗಳಲ್ಲಿ ಸೇರ್ಪಡೆಯಾದವು. ಮಾಂಸಾಹಾರವನ್ನು ಯಥೇಚ್ಛವಾಗಿ ಬಳಸಲು ಪ್ರಾರಂಭಿಸಿದರು. ಆದರೂ ಮೂಲ ತತ್ವವನ್ನು ಬಿಡದೆ ವಿದೇಶಿ ಆಹಾರ ಪದ್ಧತಿಗಳನ್ನು ಜಪಾನೀಕರಣಗೊಳಿಸಿ ಜಪಾನೀಸ್ ಕರೀ, ರಾಮೆನ್ ಮುಂತಾದ ಜನಪ್ರಿಯ ತಿನಿಸುಗಳು ರೂಪುಗೊಂಡವು.

ಎರಡನೇ ಮಹಾಯುದ್ಧದ ಬಳಿಕ ಆಹಾರದ ಕೊರತೆ ಎಷ್ಟರ ಮಟ್ಟಿಗೆ ಉಲ್ಬಣಿಸಿತೆಂದರೆ, ಒಂದು ತುತ್ತು ಅನ್ನಕ್ಕಾಗಿ ಜನರು ಪರದಾಡಬೇಕಾದ ಪರಿಸ್ಥಿತಿ ನಿರ್ಮಾಣವಾಯಿತು. ಹೊಟ್ಟೆ ತುಂಬಿಸಿಕೊಳ್ಳಲು ಹಲವರು ಹುಲ್ಲು ಮತ್ತು ಕಾಡು ಸಸ್ಯಗಳನ್ನೇ ಆಶ್ರಯಿಸಿದರು. ಹಸಿವಿನ ಆ ಕಹಿ ನೆನಪು ಇಂದಿಗೂ ಜಪಾನೀಯರ ಆಹಾರ ಸಂಸ್ಕೃತಿಯಲ್ಲಿ ಪ್ರತಿಧ್ವನಿಸುತ್ತದೆ. ಪ್ರತಿ ಬಾರಿ ಊಟ ಆರಂಭಿಸುವ ಮೊದಲು 'ಇತದಕಿಮಸು' (ನಮ್ರತೆಯಿಂದ ಸ್ವೀಕರಿಸುತ್ತೇನೆ) ಎಂದು ಹೇಳುತ್ತಾರೆ. ಹಾಗೆಯೇ ಊಟದ ನಂತರ 'ಗೊಚಿಸೋಸಮ ದೆಶಿತಾ' (ಅದ್ಭುತ ಭೋಜನಕ್ಕೆ ಧನ್ಯವಾದಗಳು) ಎಂಬ ಪದಗಳು ಕೇವಲ ಅಡುಗೆ ಮಾಡಿದ ವ್ಯಕ್ತಿಗೆ ಮಾತ್ರವಲ್ಲ, ಆಹಾರ ಬೆಳೆಯಲು ಕಾರಣವಾದ ಪ್ರಕೃತಿಗೆ ಹಾಗೂ ಅದನ್ನು ರಕ್ಷಿಸಿಕೊಂಡು ಬಂದ ಇವರ ಪೂರ್ವಜರಿಗೆ ಕೃತಜ್ಞತೆ ವ್ಯಕ್ತಪಡಿಸುವ ರೀತಿಯಾಗಿದೆ.

ಜಪಾನೀಯರು ದೀರ್ಘಕಾಲ ಆರೋಗ್ಯವಂತರಾಗಿ ಬದುಕುತ್ತಿರುವ ಹಿಂದೆಯೂ ಬಹುದೊಡ್ಡ ರಹಸ್ಯ ಅಡಗಿದೆ. ಇಲ್ಲಿನ ಪ್ರಸಿದ್ಧ ನುಡಿ 'ಹರ ಹಚಿ ಬು' ಅಂದರೆ, ಶೇ.80 ತುಂಬುವವರೆಗೆ ಮಾತ್ರ ತಿನ್ನುವುದು ಎಂಬ ಆರೋಗ್ಯದ ದೊಡ್ಡ ಗುಟ್ಟನ್ನು ಒಂದೇ ವಾಕ್ಯದಲ್ಲಿ ಹೇಳುವ ಜೀವನದ ತತ್ವವಾಗಿದೆ. ಅಷ್ಟೇ ಅಲ್ಲ, ಜಪಾನಿನ 'ವಶೊಕು' ಎಂಬ ಸಾಂಪ್ರದಾಯಿಕ ಆಹಾರ ಸಂಸ್ಕೃತಿ ಬಹು ಮುಖ್ಯವಾದದ್ದು. ಬೇಯಿಸಿದ ಅನ್ನ, ಮಿಸೊ ಸೂಪ್, ತರಕಾರಿ ಹಾಗೂ ಉಪ್ಪಿನಕಾಯಿಯ ಜತೆಗೆ ರುಚಿ, ಪೌಷ್ಟಿಕತೆ ಮತ್ತು ಸೌಂದರ್ಯವನ್ನು ಒಂದೇ ತಟ್ಟೆಯಲ್ಲಿ ನೀಡುವ ಕಲೆಯೇ ವಶೊಕು.

ಜಪಾನಿನ ಮತ್ತೊಂದು ವಿಶಿಷ್ಟ ಸಂಪ್ರದಾಯದಲ್ಲಿ ಮನಸೆಳೆಯುವ ಆಚರಣೆಯೆಂದರೆ ಚಹಾ ಸಮಾರಂಭ (ಸದೋ). ಇಲ್ಲಿ ಅತಿಥಿಗಳಿಗೆ ನೀಡುವ ಒಂದು ಕಪ್ ಗ್ರೀನ್ ಟೀ ಕೇವಲ ಒಂದು ಪಾನೀಯವಷ್ಟೇ ಅಲ್ಲ, ಅದು ಗೌರವ, ವಿನಯ, ಮತ್ತು ಹೃದಯಪೂರ್ವಕ ಆತಿಥ್ಯದ ಸಂಕೇತ. ಈ ಸಮಾರಂಭದಲ್ಲಿ ನಡೆಯುವ ಪ್ರತಿಯೊಂದು ಚಲನೆ, ಪಾತ್ರೆಗಳ ಜೋಡಣೆ ಒಂದು ಕಲಾಕೃತಿಯಂತೆ ಭಾಸವಾಗುತ್ತದೆ. ಋತುಗಳ ಸೊಬಗನ್ನು ಸಂಭ್ರಮಿಸುತ್ತಾ, ಅತಿಥಿಯ ಆಗಮನವನ್ನು ಅಮೂಲ್ಯವೆಂದು ಪರಿಗಣಿಸುವ ಈ ಸಂಪ್ರದಾಯ ಇಂದಿಗೂ ಜಪಾನಿನ ಸಂಸ್ಕೃತಿಯ ಭಾಗವಾಗಿದೆ.

ಜಪಾನಿಯರ ಆಹಾರ ಪದ್ಧತಿಯ ಹೃದಯಭಾಗವೇ ಅನ್ನ ಮತ್ತು ಮೀನು. ಹೊಸ ವರ್ಷದ ಆರಂಭದಲ್ಲಿ ನಡೆಯುವ 'ಬ್ಲೂಫಿನ್ ಟುನಾ' ಮೀನಿನ ಹರಾಜು ದೇಶದಾದ್ಯಂತ ಗಮನ ಸೆಳೆಯುವ ಪ್ರಕ್ರಿಯೆಯಾಗಿದೆ. ಒಂದು ಕಾಲದಲ್ಲಿ ಈ ಮೀನು ಬೀದಿ ಬದಿಯ ತಿನಿಸಾಗಿತ್ತು. ಅಂದು ಸಂರಕ್ಷಣಾ ತಂತ್ರಜ್ಞಾನದ ಕೊರತೆಯಿಂದ ಹೆಚ್ಚಿನ ಬೆಲೆ ಪಡೆಯದಿದ್ದ ಬ್ಲೂಫಿನ್ ಟುನಾ ಮೀನು, ಇಂದು ಸಮುದ್ರದ ಕಪ್ಪು ವಜ್ರವಾಗಿ ಗುರುತಿಸಿಕೊಂಡಿದೆ. ಸುಮಾರು 245 ಕಿಲೋಗ್ರಾಂ ತೂಕದ ಬೃಹತ್ ಬ್ಲೂಫಿನ್ ಟುನಾವೊಂದು ಈ ವರ್ಷ 500 ಮಿಲಿಯನ್ ಯೆನ್ ಬೆಲೆಗೆ ಮಾರಾಟವಾಗಿರುವುದೇ ಇದಕ್ಕೆ ಸಾಕ್ಷಿ.

ಇಂದು ಜಗತ್ತು ಫಾಸ್ಟ್‌ಫುಡ್ ಮತ್ತು ತ್ವರಿತ ಜೀವನ ಶೈಲಿಯತ್ತ ಓಡುತ್ತಿರುವಾಗ, ಜಪಾನ್ ನಮಗೆ ಒಂದು ಸರಳ ಸತ್ಯವನ್ನು ನೆನಪಿಸುತ್ತದೆ. ವಾಶೋಕು ಸಂಸ್ಕೃತಿ ಮೂಲಕ ಜೀವನದ ಮಹತ್ವವನ್ನು ಮನದಟ್ಟು ಮಾಡುತ್ತದೆ. ಒಂದು ಅಕ್ಕಿ ಕಾಳಿನ ಹಿಂದೆಯೂ ಬೆವರಿನ ಕತೆಯಿದೆ, ಪ್ರತಿಯೊಂದು ತುತ್ತಿನಲ್ಲೂ ಪ್ರಕೃತಿಯ ಕರುಣೆಯಿದೆ. ಅದನ್ನು ಗೌರವಿಸಿ ಕೃತಜ್ಞತೆಯಿಂದ ಸ್ವೀಕರಿಸಬೇಕು. ಆಹಾರ ಹಸಿವನ್ನು ಇಂಗಿಸುವುದಷ್ಟೇ ಅಲ್ಲ, ಅದು ನಮ್ಮ ಮನಸ್ಸನ್ನು ರೂಪಿಸುತ್ತದೆ, ಸಂಸ್ಕೃತಿಯನ್ನು ಉಳಿಸುತ್ತದೆ ಮತ್ತು ಬದುಕಿಗೆ ಅರ್ಥ ನೀಡುತ್ತದೆ. ಮಿತವಾದ ಊಟ ಹಿತವಾದ ಆರೋಗ್ಯ ಎನ್ನುವಂತೆ ಸುಧಾರಣೆ ಆಸ್ಪತ್ರೆಗಳಲ್ಲಿ ಅಲ್ಲ, ಬದಲಾಗಿ ಅನ್ನದ ತಟ್ಟೆಯಲ್ಲೇ ಇದೆ ಎಂಬುದನ್ನು ಜಪಾನ್ ನಮಗೆ ಕಲಿಸುತ್ತಿದೆ. ■

(**ಲೇಖಕರು:** ಹವ್ಯಾಸಿ ಬರಹಗಾರರು, ಟೋಕಿಯೊ ನಿವಾಸಿ)

ತೀಕ್ಷ್ಣ ಮಾತುಗಾರನ ರಾಜ್ಯಸಭಾ ಪಯಣ

ವ್ಯಕ್ತಿಗನ್ನಡಿ
ದೇವಯ್ಯ ಗುತ್ತೇದಾರ್
editor@vijaykarnataka.com

ಒಂದು ಕಾಲದಲ್ಲಿ ಮುಖ್ಯಮಂತ್ರಿಗೆ ವಿಶೇಷ ಕರ್ತವ್ಯ ಅಧಿಕಾರಿ, ಸಲಹೆಗಾರನಾಗಿ ಆಡಳಿತಕ್ಕೆ ನೆರಳಾಗಿದ್ದಂಥವರು. ಸಿಎಂ ಸಂಕಷ್ಟಕ್ಕೆ ಸಿಲುಕಿದಾಗಲೆಲ್ಲ ಟ್ರಬಲ್ ಶೂಟರ್ ಆದವರು. ರಾಜಕೀಯವಾಗಿ ದೊಡ್ಡ ಹಿನ್ನೆಲೆ ಇಲ್ಲದಿದ್ದರೂ ಪವನ್ ಖೇರಾ ಈಗ ಕರ್ನಾಟಕದಿಂದ ರಾಜ್ಯಸಭಾ ಸದಸ್ಯರಾಗಿ ಆಯ್ಕೆಯಾಗಿ ಗಮನ ಸೆಳೆದಿದ್ದಾರೆ.

ಶೀಲಾ ದೀಕ್ಷಿತ್ ದಿಲ್ಲಿಯ ಸಿಎಂ ಆಗಿದ್ದಾಗ ಅವರಿಗೆ ಸಲಹೆಗಾರರಾಗಿದ್ದ ಖೇರಾ, ಈಗ ಕಾಂಗ್ರೆಸ್‌ನ ಮಾಧ್ಯಮ ಮತ್ತು ಪ್ರಚಾರ ವಿಭಾಗದ ಮುಖ್ಯಸ್ಥರು. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರಕಾರದ ವಿರುದ್ಧ ಗಟ್ಟಿಯಾಗಿ ದನಿ ಎತ್ತುವ ನೇತಾರನಾಗಿ ಕ್ರಮಿಸಿದ ದಾರಿ ಸುಲಭದ್ದಲ್ಲ.

ದಿಲ್ಲಿ ಕಾಂಗ್ರೆಸ್ ಅಧ್ಯಕ್ಷೆಯಾಗಿದ್ದ ಶೀಲಾ ದೀಕ್ಷಿತ್ ರೊಂದಿಗೆ ಕೆಲಸ ಆರಂಭಿಸಿ, ಅಲ್ಲಿ ಕಾಂಗ್ರೆಸ್ ಭರ್ಜರಿ ಗೆಲುವು ಸಾಧಿಸಿದ ಬಳಿಕ ಸಿಎಂ ಕಚೇರಿಯಲ್ಲಿ ವಿಶೇಷ ಕರ್ತವ್ಯಾಧಿಕಾರಿಯಾಗಿ ನೇಮಕಗೊಂಡರು. ಮಾಧ್ಯಮ ಹಾಗೂ ರಾಜಕೀಯ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದ ಖೇರಾ, ಶೀಲಾ ದೀಕ್ಷಿತ್ ದಶಕಕ್ಕೂ ಹೆಚ್ಚು ಕಾಲ ಸಿಎಂ ಆಗಿದ್ದ ಅವಧಿಯಲ್ಲಿ ಅವರ ವಿಶೇಷ ಕರ್ತವ್ಯ ಅಧಿಕಾರಿ (ಒಎಸ್‌ಡಿ) ಆಗಿದ್ದರು. ಕಾಮನ್‌ವೆಲ್ತ್ ಕ್ರೀಡಾಕೂಟದ ಆರೋಪಗಳು ಹಾಗೂ ಸಿಎಂ ವಿರುದ್ಧ ಪ್ರತಿಪಕ್ಷಗಳು ನಡೆಸಿದ್ದ ಭ್ರಷ್ಟಾಚಾರ ಅಭಿಯಾನದ ಸಂದರ್ಭದಲ್ಲೂ ಖೇರಾ ಬೆಂಬಲವಾಗಿ ನಿಂತಿದ್ದರು. ಅತ್ಯಂತ ವಿಶ್ವಾಸಾರ್ಹ ಸಹಾಯಕ ಹಾಗೂ ರಾಜಕೀಯ ತಂತ್ರಜ್ಞ ಎಂದು ಹೆಸರು ಮಾಡಿದರು. ಪಕ್ಷದ ಒಳಜಗಳಗಳು, ಕುತಂತ್ರಗಳು ಮತ್ತು ಸರಕಾರವನ್ನು ಅಸ್ಥಿರಗೊಳಿಸುವ ಪ್ರಯತ್ನಗಳ ವಿರುದ್ಧ ಹೋರಾಡುವಲ್ಲಿ ಅವರು ಶೀಲಾ ದೀಕ್ಷಿತ್ ಅವರಿಗೆ ಬೆನ್ನಿಗೆ ನಿಂತು ಕಾರ್ಯನಿರ್ವಹಿಸಿದರು.

2010ರ ಕಾಮನ್‌ವೆಲ್ತ್ ಕ್ರೀಡಾಕೂಟ ಸಂಬಂಧಿಸಿದಂತೆ ಶೀಲಾ ದೀಕ್ಷಿತ್ ಅವರ ಪಾತ್ರದ ಬಗ್ಗೆ ಟೀಕಾತ್ಮಕ ವರದಿಗಳು ಬಂದಾಗ, ಪವನ್ ಖೇರಾ ಮಾಧ್ಯಮದೊಂದಿಗೆ ತಮ್ಮ ಉತ್ತಮ ಸಂಬಂಧವನ್ನು ಬಳಸಿಕೊಂಡು ಹಲವು ವರದಿಗಳನ್ನು ಸಾಫ್ಟ್ ರೀತಿಯಲ್ಲಿ ಬರುವಂತೆ ಮಾಡುವಲ್ಲಿ ಯಶಸ್ವಿಯಾಗಿದ್ದರು ಎಂಬ ಮಾತುಗಳೂ ಇವೆ. ಆದಾಗ್ಯೂ, ಕೆಲವು ಮಾಧ್ಯಮಗಳು ಮತ್ತು ಪತ್ರಿಕೆಗಳು ದೀಕ್ಷಿತ್ ವಿರುದ್ಧದ ಆರೋಪಗಳ ಕುರಿತು ವರದಿಗಳನ್ನು ಪ್ರಕಟಿಸಿದವು. ಆ ಸಂದರ್ಭಗಳಲ್ಲಿಯೂ ಖೇರಾ ಸದಾ ಸ್ನೇಹಪರವಾಗಿಯೇ ವರ್ತಿಸುತ್ತಿದ್ದರು.

ಸಮರ್ಥ ವಕ್ತಾರ: ಶೀಲಾ ದೀಕ್ಷಿತ್ ಸಿಎಂ ಆಗಿದ್ದಾಗ ಮಾಧ್ಯಮದವರನ್ನು ತೀರಾ ಹತ್ತಿರದಿಂದ ಬಲ್ಲವರಾಗಿದ್ದ ಖೇರಾ, ಮಾಧ್ಯಮದವರ ಕೈಗೆ ಸಿಎಂ ಸುಲಭದಲ್ಲಿ ಸಿಗುವಂತೆ ಮಾಡಿದ್ದರು. 2018ರ ವೇಳೆಗೆ ಕಾಂಗ್ರೆಸ್‌ನ ಪ್ರಮುಖ ಟಿವಿ ವಕ್ತಾರರಾಗಿ ಹೊರಹೊಮ್ಮಿದರು. ಒಂದು ದಶಕಕ್ಕೂ ಹೆಚ್ಚು ಕಾಲ ಕೆಲಸ ಮಾಡಿದ್ದರು. ಆ ಸಮಯದಲ್ಲಿ ಅವರು ಸಚಿವರಿಗಿಂತಲೂ, ಅಧಿಕಾರಿಗಳಿಗಿಂತಲೂ ಹೆಚ್ಚು ಪ್ರಭಾವ ಶಾಲಿಯಾಗಿದ್ದರು ಎಂಬ ಅಭಿಪ್ರಾಯ ಹಲವರಲ್ಲಿತ್ತು. ಇದು ಈಗ ಪಕ್ಷದ ಮಾಧ್ಯಮ ಮತ್ತು ಪ್ರಚಾರ ವಿಭಾಗದ ಮುಖ್ಯಸ್ಥ ಜವಾಬ್ದಾರಿ ತನಕ ತಂದು ನಿಲ್ಲಿಸಿದೆ. ಟಿವಿ ಆ್ಯಂಕರ್‌ಗಳು, ಪತ್ರಕರ್ತರು ಕೇಳುವ ಪ್ರಶ್ನೆಗಳಿಗೆ ಮೊನಚಾದ ಉತ್ತರ ನೀಡುವಲ್ಲಿ ಸಿದ್ಧಹಸ್ತರು. ರಾಹುಲ್ ಗಾಂಧಿ ಅವರ ಭಾರತ್ ಏಕತಾ ಯಾತ್ರೆಯಲ್ಲೂ ಮಹತ್ವದ ಪಾತ್ರ ನಿರ್ವಹಿಸಿದ್ದರು. ದೇಶಾದ್ಯಂತ ಕಾಂಗ್ರೆಸ್‌ನ ವಕ್ತಾರರಿಗೆ ಮಾಧ್ಯಮದ ಬಗ್ಗೆ ತರಬೇತಿ ನೀಡಿ ತಂಡವನ್ನು ಸಜ್ಜುಗೊಳಿಸುವಲ್ಲಿ ಇವರ ಪಾತ್ರ ಹಿರಿದು. ಇವರು ಕೆಲಸ ಮಾಡಿಸುವ ವ್ಯಕ್ತಿ, ಉತ್ತಮ ಸಂಘಟಕ, ಸಮಸ್ಯೆ ಪರಿಹಾರಕ ಹಾಗೂ ಎಲ್ಲರಿಗೂ ಸುಲಭವಾಗಿ ಸಿಗುವ ನಾಯಕ. ಅವರು ರಾಜಕೀಯ ಭೇದವಿಲ್ಲದೆ ಜನರಿಗೆ ಸಹಾಯ ಮಾಡುತ್ತಾರೆ ಎನ್ನುವ ಮಾತು ದಿಲ್ಲಿ ವಲಯದಲ್ಲಿದೆ.

ಕಾನೂನು ಸಂಕಷ್ಟ: 2026ರ ಅಸ್ಸಾಂ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಸಿಎಂ ಹಿಮಂತ ಬಿಸ್ವಾ ಶರ್ಮಾ ಪತ್ನಿ ರಿನಿಕಿ ಭುಯಾನ್ ಶರ್ಮಾ ಯುಎಇ, ಆ್ಯಂಟಿಗುವಾ, ಬಾರ್ಬುಡಾ ಮತ್ತು ಈಜಿಪ್ಟ್ ಸೇರಿ ಹಲವು ದೇಶಗಳ ಪಾಸ್‌ಪೋರ್ಟ್ ಹೊಂದಿದ್ದಾರೆ, ವಿದೇಶದಲ್ಲಿ ಆಸ್ತಿ ಹೊಂದಿದ್ದಾರೆ ಅಂತ ಗಂಭೀರ ಆರೋಪ ಮಾಡಿದ್ದರು. ಇದಕ್ಕೆ ರಿನಿಕಿ ಅವರು ಖೇರಾ ವಿರುದ್ಧ ಮಾನಹಾನಿ ದಾವೆ ಹೂಡಿದರು. ಬೇಲ್‌ಗಾಗಿ ಸುಪ್ರೀಂಕೋರ್ಟ್ ತನಕ ಹೋಗಬೇಕಾಯಿತು. 2023ರಲ್ಲಿ ಪ್ರಧಾನಿ ನರೇಂದ್ರ ಮೋದಿ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿದ ಆರೋಪದಡಿ ದಿಲ್ಲಿ ವಿಮಾನದಲ್ಲೇ ಬಂಧಿಸಲಾಗಿತ್ತು.

57 ವರ್ಷ ಪ್ರಾಯದ ಖೇರಾ ದಿಲ್ಲಿ ವಿಶ್ವವಿದ್ಯಾಲಯದಿಂದ ಆರ್ಟ್ಸ್‌ನಲ್ಲಿ ಬ್ಯಾಚುಲರ್ ಡಿಗ್ರಿ ಪಡೆದಿದ್ದಾರೆ. ಇವರ ಪತ್ನಿ ಕೋಟಾ ನೀಲಿಮಾ. ಪತ್ರಕರ್ತೆ, ಲೇಖಕಿ ಮತ್ತು ರಾಜಕಾರಣಿಯೂ ಹೌದು.

ರಾಜಕೀಯ ಜರ್ನಿ: 1980ರ ದಶಕದಲ್ಲಿ ಉದಯಪುರದಲ್ಲಿ ಯುವ ಕಾಂಗ್ರೆಸ್ ಕಾರ್ಯಕರ್ತರಾಗಿ ರಾಜಕೀಯ ಜೀವನ ಆರಂಭಿಸಿದರು. ನೇರವಾಗಿ ಮತ್ತು ಸ್ಪಷ್ಟವಾಗಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವಲ್ಲಿ ನಿಸ್ಸೀಮರು. ಆದರೆ, ಕಾಂಗ್ರೆಸ್ ಅವರ ಸೇವೆಗೆ ತಕ್ಕ ಮಟ್ಟಿನ ರಾಜಕೀಯ ಗೌರವ ನೀಡಿಲ್ಲ ಎಂಬ ಅಸಮಾಧಾನವೂ ಇತ್ತು. 2022ರಲ್ಲೇ ರಾಜ್ಯಸಭಾ ಚುನಾವಣೆಯಲ್ಲಿ ಅವರನ್ನು ಆಯ್ಕೆ ಮಾಡಬೇಕಿತ್ತು. ಆದರೆ, ಆಗಲಿಲ್ಲ, ಇದರಿಂದ ನಿರಾಶರಾದ ಖೇರಾ "ನನ್ನ ತಪಸ್ಸಿನಲ್ಲಿ ಏನೋ ಕೊರತೆ ಉಳಿದಿರಬಹುದು," ಎಂದು ಟ್ವೀಟ್ ಮಾಡಿದ್ದರು.

ಕಾಂಗ್ರೆಸ್‌ನಲ್ಲಿ ರಾಜಕೀಯ ವಂಶ ಪಾರಂಪರ್ಯ ಇನ್ನೂ ಪ್ರಮುಖ ಪಾತ್ರ ವಹಿಸುತ್ತಿದೆ. ಖೇರಾ ಪ್ರತಿಭಾವಂತ; ಆದರೆ, ರಾಜಕೀಯ ಹಿನ್ನೆಲೆ ಇಲ್ಲದ ನಾಯಕ. ಹೀಗಾಗಿ ಹೆಚ್ಚು ಕಾಯಬೇಕಾಯಿತು. ಆದರೆ, ಅವಕಾಶ ಸಿಗದೇ ಇದ್ದಾಗಲೂ ಸಂಯಮದಿಂದ ಇದರಿಂದ ಈಗ ರಾಜ್ಯಸಭೆ ಸ್ಥಾನ ಅರಸಿಕೊಂಡು ಬಂದಿದೆ. ಇಂದು ಖೇರಾ ಕಾಂಗ್ರೆಸ್‌ನ ಅತ್ಯಂತ ಪ್ರಭಾವಿ ವಕ್ತಾರರು ಹಾಗೂ ಪ್ರಮುಖ ರಾಜಕೀಯ ತಂತ್ರಜ್ಞರಲ್ಲಿ ಒಬ್ಬರು. ■


ಪವನ್ ಖೇರಾ

ವಿಕ ಮನಿ
From The House of THE ECONOMIC TIMES
ಕನ್ನಡದ ಏಕೈಕ ಹಣಕಾಸು ವಾರಪತ್ರಿಕೆ

ನಿಮ್ಮ ಹೆಲ್ತ್ ಜತೆಗೆ 'ಆರ್ಥಿಕ ಆರೋಗ್ಯ'ವನ್ನೂ ಕಾಪಾಡಿಕೊಳ್ಳಬೇಕೆ?

ಕವರ್ ಸ್ಟೋರಿಯಲ್ಲಿ ವಿವರಿಸಿದ್ದಾರೆ ಡಾ.ಭಾಸ್ಕರ್ ಅಧ್ವೈಂತ

ಗೋಲುಗಳ ಹಿಂದೆ ₹85,000 ಕೋಟಿಗಳ ಆಟ

ಮನಿಧೀರ: ₹1,000 ಕೋಟಿಗೂ ಮೀರಿದ ಸಾಮ್ರಾಜ್ಯ!

- ಉದ್ದಿಮೆ ಸಕ್ಸೆಸ್‌ಗೆ ಬೇಕು ಬಲಿಷ್ಠ ಬಿಸಿನೆಸ್ ಬ್ಲೂಪ್ರಿಂಟ್: ಬಿಸಿನೆಸ್ ಕೆಫೆಯಲ್ಲಿ **ಜಿ.ಕೆ.ಪ್ರಮೋದ್**
- ಡಿವಿಡೆಂಡ್ ಯೀಲ್ಡ್ ಫಂಡ್ಸ್: ಮಾರುಕಟ್ಟೆ ಏರಿಳಿತಕ್ಕೆ ಸುರಕ್ಷತೆಯ ಬೇಲಿ: **ಶರತ್ ಎಂ.ಎಸ್.** ವಿವರಣೆ
- 'ಡಿವಿಡೆಂಡ್ ಹಬ್ಬ'ದ ಹಿಂದಿನ ಅಸಲಿ ಕಹಾನಿ ಏನು? **ನಾರಾಯಣ ಯಾಜಿ** ವಿಶ್ಲೇಷಣೆ
- ದೇಶದ ಇಂಧನ ಸ್ವಾವಲಂಬನೆಗೆ E85 ನೆರವಾಗಬಹುದೇ? **ಕೆ.ಎಂ.ನಾಗರಾಜ** ಲೇಖನ
- ಜಾಗತಿಕ ಆರ್ಥಿಕತೆಯಲ್ಲಿ 'ಅದೃಶ್ಯ ಸೂತ್ರಧಾರ'ರು: **ಡಾ.ವಿನೋದ್ ಕೃಷ್ಣ** ಒಳನೋಟ
- ಎಂಎಫ್ ಮತ್ತು ಸ್ಟಾಕ್‌ಗಿಂತಲೂ ಇಟಿಎಫ್ ಹೇಗೆ ಬೆಸ್ಟ್? **ಎಂ.ರಜತಾ** ಇನ್ವೆಸ್ಟ್‌ಮೆಂಟ್ ಗೈಡ್
- ಮಾರ್ಕೆಟ್ ಸ್ಕ್ಯಾನ್: ಮಾರುಕಟ್ಟೆಯಲ್ಲಿ ಚೇತರಿಕೆ ಸುಳಿವು, ನಿಮ್ಮ ಧೈರ್ಯಕ್ಕೊಂದು ಪರೀಕ್ಷೆ: **ಡಾ.ಭರತ್ ಚಂದ್ರ, ರೋಹನ್ ಚಂದ್ರ** ಅವಲೋಕನ
- ರಾಮಾಯಣ ಕಲಿಸುವ ಹಣಕಾಸು ಪಾಠಗಳು: **ವೆಂಕಟೇಶ್ ಆರ್.ವೇದಾಂತಿ, ಡಾ.ಜಿ.ಎನ್.ಜಗನ್ನಾಥ್** ಅವಲೋಕನ
- ಯುದ್ಧ ನಿಲ್ಲಬಹುದೇ? ಇದು ಉತ್ತರವಿಲ್ಲದ ಪ್ರಶ್ನೆ! **ಚೇರ್ಕಾಡಿ ಸಚ್ಚಿದಾನಂದ ಶೆಟ್ಟಿ** ಒಳನೋಟ
- **ಮೋದಿ ಸರಕಾರ @ 12 ವರ್ಷ:** ಭಾರತದ ಆರ್ಥಿಕತೆಯನ್ನು ಬದಲಿಸಿದ ಡಜನ್ ಮೈಲುಗಲ್ಲುಗಳು ಯಾವುವು?

ಕೃಷಿ-ಕಸಿವಿಸಿ
- ಕಾಫಿ ಧಾರಣೆ ಕುಸಿತ, ದಾಸ್ತಾನು ಮಾಡಿದ್ದ ಬೆಳೆಗಾರರು ಸುಸ್ತು
- ಆರ್ಥಿಕ ಅನಿಶ್ಚಿತ ದಿನಗಳಿಗೆ ಸಜ್ಜಾಗಲಿ ಮಲೆನಾಡ ಅಡಕೆ ಬೆಳೆಗಾರ
- ನಮ್ಮ ಮಾವಿನ ಹಣ್ಣನ್ನು ಜಪಾನ್ ಬ್ಯಾನ್ ಮಾಡಿದ್ದು ಏಕೆ?

ಪತ್ರಿಕೆಗಾಗಿ ಸಂಪರ್ಕಿಸಿ
72594 58080
ಪ್ರತಿ ಭಾನುವಾರ ನಿಮ್ಮ ಕೈ ಸೇರಲಿದೆ
ಬೆಲೆ ₹5
ಪ್ರತಿ ಭಾನುವಾರ ಮಾರುಕಟ್ಟೆಯಲ್ಲಿ ವಿಕ ಮನಿ ಬಿಡುಗಡೆ
ಪತ್ರಿಕೆಗಾಗಿ ಸ್ಕ್ಯಾನ್ ಮಾಡಿ ನಿಮ್ಮ ವಿಳಾಸ ಬರೆದು submit ಮಾಡಿ

ಎರಡೆರಡು ಜವಾಬ್ದಾರಿಯಿಂದ ಆಡಳಿತಾಧಿಕಾರಿಗಳು ಕಂಗಾಲು

ಹಳಿ ತಪ್ಪಿದ ಗ್ರಾ.ಪಂ ಆಡಳಿತ!

ಸುಗಮವಾಗಿ ನಡೆಯದ ಗ್ರಾಮಸ್ಥರ ಕೆಲಸಗಳು

ಮಲ್ಲಿಕಾರ್ಜುನ ಬಾಳನಗೌಡರ ಬೆಳಗಾವಿ
mallugoudra461987@gmail.com

ರಾಜ್ಯದ ಗ್ರಾಮ ಪಂಚಾಯಿತಿಗಳ 2020-25ನೇ ಸಾಲಿನ ಆಡಳಿತ ಮಂಡಳಿ ಅವಧಿ ಮುಕ್ತಾಯವಾಗಿದ್ದು ಆಡಳಿತ ನಿರ್ವಹಣೆಗೆ ನೇಮಕಗೊಂಡ ಆಡಳಿತಾಧಿಕಾರಿಗಳು ಮಾತೃ ಇಲಾಖೆ ಕಾರ್ಯದ ಜತೆಗೆ ಗ್ರಾ.ಪಂ ಕೆಲಸದ ಒತ್ತಡಕ್ಕೆ ಸಿಲುಕುವಂತಾಗಿದೆ. ಪರಿಣಾಮ ಗ್ರಾ.ಪಂಗಳಲ್ಲಿ ಸಾರ್ವಜನಿಕ ಕೆಲಸಗಳು ಮಂದಗತಿಯಲ್ಲಿ ಸಾಗಿವೆ ಎಂಬ ಆಕ್ಷೇಪ ವ್ಯಕ್ತವಾಗಿದೆ.

ರಾಜ್ಯದ 5,948 ಗ್ರಾ.ಪಂಗಳಿಗೆ 2020ರ ಡಿಸೆಂಬರ್‌ನಲ್ಲಿ ಚುನಾವಣೆ ನಡೆದಿತ್ತು. ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆ 2021-22ರಲ್ಲಿ ನಡೆದಿದ್ದರಿಂದ, ಈ ಪಂಚಾಯಿತಿಗಳ ಚುನಾಯಿತ ಸದಸ್ಯರ ಅಧಿಕಾರಾವಧಿ 2026ರ ಫೆಬ್ರವರಿ ಹಾಗೂ ಮಾರ್ಚ್‌ನಲ್ಲಿ ಕೊನೆಗೊಂಡಿದೆ. ಆದ್ದರಿಂದ ಪಂಚಾಯಿತಿ ವ್ಯಾಪ್ತಿಯಲ್ಲಿ ಜನಸಾಮಾನ್ಯರಿಗೆ ಸಮಸ್ಯೆಯಾಗದಂತೆ ಆಡಳಿತ ನಿರ್ವಹಣೆಗಾಗಿ ಕಂದಾಯ, ಶಿಕ್ಷಣ, ಕೃಷಿ, ಮೀನುಗಾರಿಕೆ ಸೇರಿ ನಾನಾ ಇಲಾಖೆಗಳ ಅಧಿಕಾರಿಗಳನ್ನು ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮದಡಿ ಆಡಳಿತ ಅಧಿಕಾರಿಗಳನ್ನಾಗಿ ನೇಮಿಸಲಾಗಿದೆ. ಆಡಳಿತಾಧಿಕಾರಿಗಳು ತಮ್ಮ ಮಾತೃ ಇಲಾಖೆ ಕೆಲಸಗಳ ಜತೆಗೆ ತಮಗೆ ವಹಿಸಿರುವ ಗ್ರಾ.ಪಂ ಕರ್ತವ್ಯ ನಿರ್ವಹಣೆಗೂ ಏಗುವಂತಾಗಿದೆ.

ಸಕಾಲಕ್ಕೆ ಬಾರದ ಆರೋಪ: ಹೆಚ್ಚುವರಿ ಕೆಲಸದಿಂದ ಆಡಳಿತಾಧಿಕಾರಿಗಳು ಗ್ರಾ.ಪಂಗಳಿಗೆ ಸಕಾಲದಲ್ಲಿ ಕರ್ತವ್ಯಕ್ಕೆ ಬರಲು ಸಾಧ್ಯವಾಗುತ್ತಿಲ್ಲ. ಸಾರ್ವಜನಿಕರ ಕುಂದು ಕೊರತೆ ಆಲಿಸುತ್ತಿಲ್ಲವೆಂಬ ಆರೋಪಗಳಿವೆ. ಬೇಸಿಗೆಯಲ್ಲಿ ಕುಡಿಯುವ ನೀರು, ಇನ್ನಿತರ ಸಮಸ್ಯೆಗಳನ್ನು ಎದುರಿಸಿದ್ದ ಸಾರ್ವಜನಿಕರು, ಪ್ರಸ್ತುತ ಮಳೆಗಾಲದ ಸಮಸ್ಯೆಗಳನ್ನು ಯಾರಿಗೆ ಹೇಳಬೇಕು ಎಂದು ಪ್ರಶ್ನಿಸುತ್ತಿದ್ದಾರೆ.

ಸಿಇಒ ಆದೇಶಕ್ಕೂ ಎಚ್ಚೆತ್ತಿಲ್ಲ: ರಾಜ್ಯದ ಹಲವು ಗ್ರಾ.ಪಂ ಆಡಳಿತಾಧಿಕಾರಿಗಳ ಕರ್ತವ್ಯಲೋಪದ ಬಗ್ಗೆ ಆಕ್ಷೇಪ ಕೇಳಿ ಬಂದಿದ್ದರಿಂದ ಎಚ್ಚೆತ್ತುಕೊಂಡ ಕೆಲ ಜಿ.ಪಂ ಸಿಇಒಗಳು, ಆಡಳಿತಾಧಿಕಾರಿಗಳಿಗೆ ಮಾರ್ಗಸೂಚಿ ಹೊರಡಿಸಿದ್ದಾರೆ. 2 ದಿನಕ್ಕೊಮ್ಮೆ ಗ್ರಾ.ಪಂಗಳಿಗೆ ಕಡ್ಡಾಯವಾಗಿ ಭೇಟಿ ನೀಡಿ, ಸಾರ್ವಜನಿಕರ ಸಮಸ್ಯೆಗಳನ್ನು ಆಲಿಸಬೇಕು ಎಂದು ಸೂಚಿಸಿದ್ದಾರೆ. ಹೀಗಿದ್ದರೂ ಬಹುತೇಕ ಆಡಳಿತಾಧಿಕಾರಿಗಳು ಗ್ರಾ.ಪಗಳನ್ನು ಉಪೇಕ್ಷಿಸಿದ್ದಾರೆ. ಇದರಿಂದ ಸಾರ್ವಜನಿಕರ ಪರದಾಟ ತಪ್ಪುತ್ತಿಲ್ಲ ಎಂಬುದು ಗ್ರಾ.ಪಂಗಳ ಮಾಜಿ ಸದಸ್ಯರ ಆರೋಪ.

ಆಡಳಿತಾಧಿಕಾರಿಗಳ ಕರ್ತವ್ಯಗಳೇನು?: ಗ್ರಾ.ಪಂಗಳಲ್ಲಿ ದೈನಂದಿನ ಆಡಳಿತ, ಮೇಲ್ವಿಚಾರಣೆ, ತೆರಿಗೆ ವಸೂಲಿ, ಅನುದಾನ ಬಳಕೆ, ದಾಖಲೆಗಳ ನಿರ್ವಹಣೆ, ಗ್ರಂಥಾಲಯಗಳ ಮೇಲ್ವಿಚಾರಣೆ ಸೇರಿ ಅನೇಕ ಜವಾಬ್ದಾರಿಗಳನ್ನು ಆಡಳಿತಾಧಿಕಾರಿಗಳು ನಿರ್ವಹಿಸುತ್ತಿದ್ದಾರೆ. ಗ್ರಾಪಂ ಸೇರಿ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸಲು ಇನ್ನಷ್ಟು ಸಮಯ ಬೇಕೆಂದು ಸರಕಾರ ಇತ್ತೀಚೆಗೆ ಕೋರ್ಟ್‌ಗೆ ಮನವಿ ಮಾಡಿದೆ. ಹೀಗಾಗಿ ಇನ್ನೂ 5-6 ತಿಂಗಳು ಚುನಾವಣೆ ನಡೆಯುವುದು ಅನುಮಾನ.

ವಿಕ ವಿಶೇಷ

ಗ್ರಾ.ಪಂ ಆಡಳಿತಾಧಿಕಾರಿಗಳು ಗ್ರಾ.ಪಂಗಳಿಗೆ ಭೇಟಿ ನೀಡುವುದು ಸೇರಿ ಕರ್ತವ್ಯ ನಿರ್ವಹಣೆ ಸಂಬಂಧ ಮಾರ್ಗಸೂಚಿ ನೀಡಲಾಗಿದೆ. ಸಾರ್ವಜನಿಕರಿಗೆ ಸ್ಪಂದಿಸುವ ಜತೆಗೆ ದೈನಂದಿನ ಕೆಲಸಗಳನ್ನು ನಿರ್ವಹಿಸಲು ಸೂಚನೆ ನೀಡಲಾಗಿದೆ.
-**ರಾಹುಲ್ ಶಿಂಧೆ** ಜಿ.ಪಂ ಸಿಇಒ, ಬೆಳಗಾವಿ

ಗ್ರಾ.ಪಂ ಸಮಸ್ಯೆಗಳೇನು?
- ನೀರು, ರಸ್ತೆ, ಚರಂಡಿ, ಬೀದಿ ದೀಪ ದುರಸ್ತಿಗೆ ತಕ್ಷಣ ಸ್ಪಂದನೆ ಸಿಗುತ್ತಿಲ್ಲ.
- ಆಡಳಿತಾಧಿಕಾರಿ ಭೇಟಿಗೆ ಗ್ರಾಮಸ್ಥರ ಅಲೆದಾಟ.
- ಸರಕಾರದ ಅನುದಾನ ಸರಿಯಾಗಿ ಬರುತ್ತಿಲ್ಲ.
- ಅನುದಾನ ಖರ್ಚಿನಲ್ಲಿ ಲೋಪವಾಗಿ ಆಡಿಟ್ ಆಕ್ಷೇಪಣೆ ಸಾಧ್ಯತೆ.
- ಆಸ್ತಿ ತೆರಿಗೆ, ನೀರಿನ ಬಿಲ್ ವಸೂಲಿ ಆಗದೆ ಆದಾಯ ಕುಸಿತ.
- ಆದಾಯ, ಜಾತಿ, ನಿವಾಸ ಪ್ರಮಾಣಪತ್ರ ಕೊಡಲು ವಿಳಂಬ.
- ಸರಕಾರಿ ಯೋಜನೆಗಳಿಂದ ಗ್ರಾಮಸ್ಥರು ವಂಚಿತ.
- ಕಾಲ ಕಾಲಕ್ಕೆ ನಡೆಯದ ಗ್ರಾಮಸಭೆಗಳು.

ಮಾತೃ ಇಲಾಖೆ ಕಾರ್ಯಕ್ಕೂ ಹಿನ್ನಡೆ
- ಕೃಷಿ ಇಲಾಖೆ ಅಧಿಕಾರಿಗಳಿಗೆ ಮುಂಗಾರು ಅವಧಿಯಲ್ಲಿ ರೈತರಿಗೆ ಸರಿಯಾಗಿ ಸ್ಪಂದಿಸಲಾಗುತ್ತಿಲ್ಲ.
- ಬಿತ್ತನೆ, ಬೀಜ, ಗೊಬ್ಬರ ಮೇಲೆ ನಿಗಾ ಕಷ್ಟವಾಗುತ್ತಿದೆ.
- ಇ-ಖಾತಾ ವಿಲೇವಾರಿ ಬಾಕಿ.
- ಶಾಲಾ-ಕಾಲೇಜು ಆರಂಭದಿಂದ ಶೈಕ್ಷಣಿಕ ಕಾರ್ಯಕ್ಕೆ ಹಿನ್ನಡೆ.

ಜಿಲ್ಲಾಮಟ್ಟದ ಜಿಡಿಪಿ ಜಾರಿ ಅಗತ್ಯ: ನಿರ್ಮಲಾ

ಉಡುಪಿಗೆ ಆಗಮಿಸಿರುವ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಶ್ರೀಕೃಷ್ಣ ಮಠಕ್ಕೆ ಶನಿವಾರ ಭೇಟಿ ನೀಡಿ, ದೇವರ ದರ್ಶನ ಪಡೆದರು.

ಪಂಡಿತ್ ದೀನದಯಾಳ್ ಉಪಾಧ್ಯಾಯ ಪ್ರಶಿಕ್ಷಣ ಮಹಾಭಿಯಾನ ಉದ್ಘಾಟನೆ

ವಿಕ ಸುದ್ದಿಲೋಕ ಪಡುಬಿದ್ರಿ(ಉಡುಪಿ)

ವಿಕಸಿತ ಭಾರತದ ಗುರಿ 2047ರೊಳಗೆ ಸಾಧಿಸಲು ಉತ್ತರ ಪ್ರದೇಶ ರಾಜ್ಯದ ಮಾದರಿಯಲ್ಲಿ ಜಿಲ್ಲಾಮಟ್ಟದ ನಿವ್ವಳ ಆಂತರಿಕ ಉತ್ಪಾದನೆ (ಜಿಡಿಪಿ) ಯೋಜನೆ ದೇಶಾದ್ಯಂತ ಜಾರಿಗೆ ಬರಬೇಕು ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದರು.

ಉಡುಪಿ ಜಿಲ್ಲಾ ಬಿಜೆಪಿ ವತಿಯಿಂದ ಪಂಡಿತ್ ದೀನದಯಾಳ್ ಉಪಾಧ್ಯಾಯ ಪ್ರಶಿಕ್ಷಣ ಮಹಾಭಿಯಾನ-2026ರ ಅಂಗವಾಗಿ ಉಚ್ಚಿಲ ಮಹಾಲಕ್ಷ್ಮೀ ಸಭಾಂಗಣದಲ್ಲಿ ಎರಡು ದಿನದ ಉಡುಪಿ ಜಿಲ್ಲಾ ಪ್ರಶಿಕ್ಷಣ ವರ್ಗವನ್ನು ಶನಿವಾರ ಉದ್ಘಾಟಿಸಿ ಅವರು ಮಾತನಾಡಿದರು.

''ಕೇಂದ್ರ,ರಾಜ್ಯಗಳ ಯೋಜನೆಗಳು ಅರ್ಹರಿಗೆ ಜಿಲ್ಲಾ ಮಟ್ಟದಲ್ಲಿ ತಲುಪಲು ನಿರ್ದಿಷ್ಟ ಗುರಿ ಅಗತ್ಯ. ಭಾರತೀಯ ಆರ್ಥಿಕತೆ, ಆಂತರಿಕ ಮಾರುಕಟ್ಟೆ, ವಿದೇಶಿ ಹೂಡಿಕೆ, ಜನರ ಖರೀದಿ ಸಾಮರ್ಥ್ಯ ಸರಿಯಾದ ಹಾದಿಯಲ್ಲಿ ಮುಂದುವರಿದಿದೆ,'' ಎಂದರು.

''ಸಿಐಐ ವರದಿ ಪ್ರಕಾರ ಭಾರತೀಯ ಕೈಗಾರಿಕೆಯಲ್ಲಿ ಶೇ.60ರಷ್ಟು ಹೂಡಿಕೆ ಹೆಚ್ಚಿದೆ. ಜಾಗತಿಕವಾಗಿ ಭಾರತದ ಜಿಡಿಪಿ ಬೆಳವಣಿಗೆ ದರ ಅತ್ಯಧಿಕ ಶೇ.7.70ರಷ್ಟಿದೆ. ಪ್ರತಿಪಕ್ಷಗಳಿಗೆ ಬೆಳವಣಿಗೆ ಸಹಿಸಲಾಗುತ್ತಿಲ್ಲ. ಭಾರತೀಯ ಆರ್ಥಿಕತೆ ಬಗ್ಗೆ ಜನರಲ್ಲಿ ಭಯ ಹುಟ್ಟಿಸುವ ಕೆಲಸ ಮಾಡುತ್ತಿವೆ,'' ಎಂದರು.

ಸಚಿವೆಗೆ ಎಲ್ ನಿನೋ ಚಿಂತೆ!
ಎಲ್‌ನಿನೋ ಪರಿಣಾಮ ದೇಶದ ಮೇಲೆ ಪರಿಣಾಮ ಬೀರದಂತೆ ಶ್ರೀಕೃಷ್ಣ, ಮಹಾಲಕ್ಷ್ಮೀಗೆ ಪ್ರಾರ್ಥನೆ ಸಲ್ಲಿಸಿದ್ದಾಗಿ ನಿರ್ಮಲಾ ಸೀತಾರಾಮನ್ ತಿಳಿಸಿದರು.

ಸಂಸದ ಕೋಟ ಶ್ರೀನಿವಾಸ ಪೂಜಾರಿ, ಶಾಸಕರಾದ ಗುರ್ಮೆ ಸುರೇಶ್ ಶೆಟ್ಟಿ ಕಾಪು, ಯಶಪಾಲ್ ಸುವರ್ಣ ಉಡುಪಿ, ವಿ. ಸುನಿಲ್‌ಕುಮಾರ್ ಕಾರ್ಕಳ, ಗುರುರಾಜ್ ಗಂಟಿಹೊಳೆ ಬೈಂದೂರು, ಕಿರಣ್ ಕುಮಾರ್ ಕೊಡ್ಗಿ ಕುಂದಾಪುರ, ವಿಧಾನ ಪರಿಷತ್ ಸದಸ್ಯ ಡಾ.ಧನಂಜಯ ಸರ್ಜಿ ಇದ್ದರು.

ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ತಾಲೂಕಿನ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಸಫಾರಿ ಮಾರ್ಗದಲ್ಲಿ ಪ್ರವಾಸಿಗರಿಗೆ ಕಾಣಿಸಿಕೊಂಡ ಜೋಡಿ ಹುಲಿಗಳು.

ಕರ್ತೋಜಿಯಲ್ಲಿ ಸುಸಜ್ಜಿತ ತಡೆಗೋಡೆ ನಿರ್ಮಾಣ | ಮಳೆಗಾಲದಲ್ಲಿ ಕುಸಿತ ಆತಂಕ ದೂರ

ಸಂಪಾಜೆ ಘಾಟಿಗೆ ಗುಡ್ಡದ ಭೂತದ ಭಯವಿಲ್ಲ

ಗಿರೀಶ್ ಪಗಡಿಗತ್ತಲ ಮಡಿಕೇರಿ
pagadigathalagiri@gmail.com

ಪ್ರತಿವರ್ಷ ಮಳೆಗಾಲದಲ್ಲಿ ಬಂದ್, ಭೂಕುಸಿತ ಎದುರಿಸುತ್ತಿದ್ದ ಸಂಪಾಜೆ ಘಾಟಿ ರಸ್ತೆಯಲ್ಲಿ ಈ ಬಾರಿ ಕೊಂಚ ನಿರಾಳವಾಗಿ ಸಂಚರಿಸಬಹುದಾಗಿದೆ. ಪದೇಪದೆ ಗುಡ್ಡ ಕುಸಿತವಾಗಿರುವ ಕರ್ತೋಜಿಯಲ್ಲಿ ತಡೆಗೋಡೆ ನಿರ್ಮಾಣವಾಗಿದ್ದು, ಈ ಬಾರಿ 'ಗುಡ್ಡದ ಭೂತದ' ಭೀತಿ ಇಲ್ಲದಾಗಿದೆ.

2018ರ ಬಳಿಕ ಮೈಸೂರು-ಮಡಿಕೇರಿ-ಬಂಟ್ವಾಳ ರಾಷ್ಟ್ರೀಯ ಹೆದ್ದಾರಿ 275ರ ಸಂಪಾಜೆ ಘಾಟಿ ರಸ್ತೆಯಲ್ಲಿ ನಿರಂತರ ಭೂಕುಸಿತಗಳು ಸಂಭವಿಸುತ್ತಿತ್ತು. ಇದರಿಂದ ಪ್ರತಿವರ್ಷ ಮಳೆಗಾಲದಲ್ಲಿ ಈ ಘಾಟಿ ರಸ್ತೆಯಲ್ಲಿ ವಾಹನ ಸಂಚಾರ ನಿರ್ಬಂಧಿಸುವುದು ಕಾಯಂ ಆಗಿತ್ತು. ಆದರೆ, ಈ ಬಾರಿ ವಾಹನ ಸವಾರರು ಸಂಪಾಜೆ ಘಾಟಿಯಲ್ಲಿ ನಿರಾತಂಕದಿಂದ ಸಂಚರಿಸಬಹುದಾಗಿದೆ. ಪ್ರತಿವರ್ಷ ನಿಧಾನಗತಿಯ ಗುಡ್ಡ ಕುಸಿತದಿಂದ ರಸ್ತೆ ಮುಚ್ಚಿಹೋಗುತ್ತಿದ್ದ ಕರ್ತೋಜಿ ಎಂಬಲ್ಲಿ ಸುಸಜ್ಜಿತ ತಡೆಗೋಡೆ ನಿರ್ಮಿಸಲಾಗಿದೆ. ಇದರಿಂದ ಈಗ ಈ ರಸ್ತೆಯಲ್ಲಿ ವಾಹನ ಸಂಚಾರ ಬಹುತೇಕ ಸುಗಮವಾಗಿದೆ.

ಸಂಪಾಜೆ ಘಾಟಿಯ ಕರ್ತೋಜಿ ಬಳಿ ಗುಡ್ಡ ಕುಸಿತದ ಸ್ಥಳದಲ್ಲಿ ನಿರ್ಮಾಣ ಮಾಡಲಾಗಿರುವ ತಡೆಗೋಡೆ.

ಮಡಿಕೇರಿಯ ಜಿಲ್ಲಾಧಿಕಾರಿ ಕಚೇರಿ ಬಳಿ ಮರು ನಿರ್ಮಾಣವಾಗಿರುವ ತಡೆಗೋಡೆ.

ಜಿಲ್ಲಾಧಿಕಾರಿ ಕಚೇರಿ ತಡೆಗೋಡೆಯ ಆತಂಕವಿಲ್ಲ
ಸಂಪಾಜೆ ಘಾಟಿ ರಸ್ತೆಯ ಆರಂಭದಲ್ಲಿಯೇ ಮಡಿಕೇರಿಯ ಕೊಡಗು ಜಿಲ್ಲಾಧಿಕಾರಿ ಕಚೇರಿಗೆ ನಿರ್ಮಿಸಲಾಗಿದ್ದ ತಡೆಗೋಡೆ ಕುಸಿಯುವ ಭೀತಿಯಿಂದ 2 ವರ್ಷ ಈ ರಸ್ತೆಯಲ್ಲಿ ಸಂಚಾರ ಬಂದ್ ಮಾಡಲಾಗಿತ್ತು. ರಸ್ತೆಯ ಕಡೆಗೆ ವಾಲಿಕೊಂಡಂತಿದ್ದ ತಡೆಗೋಡೆಯನ್ನು ಬಹುತೇಕ ತೆರವುಗೊಳಿಸಿ ಈಗ ಮರು ನಿರ್ಮಾಣ ಮಾಡಲಾಗಿದೆ. ಇದರಿಂದ ಈ ಬಾರಿ ಈ ತಡೆಗೋಡೆಯ ಆತಂಕ ಇಲ್ಲವಾಗಿದೆ.

21 ಕಡೆ ತಡೆಗೋಡೆ ನಿರ್ಮಾಣ
ಮಡಿಕೇರಿಯಿಂದ ಸಂಪಾಜೆವರೆಗಿನ 29 ಕಿ.ಮೀ ವ್ಯಾಪ್ತಿಯಲ್ಲಿ ಮಳೆಗಾಲದಲ್ಲಿ ಭೂಕುಸಿತ ಅಪಾಯವಿರುವ 19 ಸ್ಥಳಗಳಲ್ಲಿ ಮತ್ತು ಬೋಯಿಕೇರಿ ಬಳಿ 2 ಸ್ಥಳಗಳಲ್ಲಿ ಸೇರಿ ಒಟ್ಟು 21 ತಡೆಗೋಡೆಗಳಲ್ಲಿ ನಿರ್ಮಿಸಬೇಕೆಂದು ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿ ಸಚಿವಾಲಯಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಅದರಂತೆ ಒಟ್ಟು 94.08 ಕೋಟಿ ರೂ. ವೆಚ್ಚದ ಕಾಮಗಾರಿಗೆ ಅನುಮೋದನೆ ದೊರೆತು, ಇತ್ತೀಚೆಗೆ ಮೈಸೂರು-ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಈ ಕಾಮಗಾರಿಗೆ ಚಾಲನೆ ನೀಡಿದ್ದರು.

21 ತಡೆಗೋಡೆಗಳ ಪೈಕಿ ಮೊದಲ ಹಂತದಲ್ಲಿ ಭೂಕುಸಿತದ ಅಪಾಯವಿದ್ದ 12 ಕಡೆ ತಡೆಗೋಡೆ ನಿರ್ಮಾಣ ಕಾಮಗಾರಿ ನಡೆಯುತ್ತಿದೆ. ಈ ಪೈಕಿ ಕರ್ತೋಜಿ ಭಾಗದಲ್ಲಿ ಕಾಮಗಾರಿ ಪೂರ್ಣಗೊಂಡಿದೆ. ಮಳೆ ಕಡಿಮೆ ಇದ್ದರೆ ಇನ್ನು 11 ಕಡೆಗಳಲ್ಲಿ ನಡೆಯುತ್ತಿರುವ ಕಾಮಗಾರಿಯು ಒಂದೂವರೆ ತಿಂಗಳಲ್ಲಿ ಪೂರ್ಣವಾಗಲಿದ್ದು, ಬಳಿಕ ಉಳಿದ ಸ್ಥಳಗಳಲ್ಲಿ ತಡೆಗೋಡೆ ನಿರ್ಮಾಣವಾಗಲಿದೆ.
-**ಹನುಮಂತ** ಸಹಾಯಕ ಕಾರ್ಯಪಾಲಕ ಎಂಜಿನಿಯರ್, ರಾಷ್ಟ್ರೀಯ ಹೆದ್ದಾರಿ ವಿಭಾಗ

ತನಿಖೆ ದಿಕ್ಕು ತಪ್ಪಿಸುವ ತಂತ್ರ: ಮಟ್ಟೆಣ್ಣನವರ್

ವಿಕ ಸುದ್ದಿಲೋಕ ಬೆಳ್ತಂಗಡಿ (ದ.ಕ.)

ಧರ್ಮಸ್ಥಳದಲ್ಲಿ ನೂರಾರು ಶವ ಹೂತ ಪ್ರಕರಣ

ಧರ್ಮಸ್ಥಳದಲ್ಲಿ ನೂರಾರು ಶವಗಳನ್ನು ಹೂತು ಹಾಕಿದ ಪ್ರಕರಣದ ತನಿಖೆಯ ದಿಕ್ಕು ತಪ್ಪಿಸಲು ಆರೋಪಿ ಚಿನ್ನಯ್ಯನ ಮೂಲಕ ವ್ಯತಿರಿಕ್ತ ಹೇಳಿಕೆಗಳನ್ನು ಕೊಡಿಸಲಾಗುತ್ತಿದೆ. ಇದರ ಹಿಂದೆ ಯಾರಿದ್ದಾರೆ ಎಂಬುದರ ತನಿಖೆ ನಡೆಯಬೇಕು ಎಂದು ಸೌಜನ್ಯ ಪರ ಹೋರಾಟಗಾರ ಗಿರೀಶ್ ಮಟ್ಟೆಣ್ಣನವರ್ ಆಗ್ರಹಿಸಿದರು.

ಶನಿವಾರ ಬೆಳ್ತಂಗಡಿ ಎಸ್‌ಐಟಿ ಕಚೇರಿಗೆ ಈ ಬಗ್ಗೆ ದೂರು ನೀಡಲು ಆಗಮಿಸಿದ ಅವರು ಪತ್ರಕರ್ತರ ಜತೆ ಮಾತನಾಡಿ, ''ಚಿನ್ನಯ್ಯ 200 ಕೋಟಿ ರೂ. ವ್ಯವಹಾರ ಎಂದು ಹೇಳಿರುವುದು ಕಪೋಲ ಕಲ್ಪಿತ. ತನಿಖೆಯನ್ನು ವಿಳಂಬ ಮಾಡಲು ಈ ತಂತ್ರ ಅನುಸರಿಸಲಾಗಿದೆ. ಇತ್ತೀಚೆಗೆ ಎಸ್‌ಐಟಿ ತಂಡ ಬಂಗ್ಲೆಗುಡ್ಡೆಗೆ ಬಂದು ತನಿಖೆ ನಡೆಸಿದ ಬಳಿಕ ಚಿನ್ನಯ್ಯನನ್ನು ಬಳಸಿ ಈ ರೀತಿ ಹೇಳಿಕೆ ನೀಡಿರುವ ಶಂಕೆ ಇದೆ. ಎಸ್‌ಐಟಿ ತನಿಖೆ ಶೀಘ್ರ ಮುಗಿಯಲಿ ಎಂದು ಹೇಳುವ ಹಕ್ಕು ಚಿನ್ನಯ್ಯನಿಗೆ ಇಲ್ಲ. ಎಲ್ಲ ರೀತಿಯ ತನಿಖೆಗಳು ನಡೆಯಲಿ,'' ಎಂದರು.

''ಹೋರಾಟದ ಸಮಯ ಚಿನ್ನಯ್ಯನಿಗೆ ನಾನು ನೈತಿಕ ಬೆಂಬಲ ನೀಡಿರಬಹುದು. ಅನಂತರದಲ್ಲಿ ಅವರ ಸಂಪರ್ಕ ಇಲ್ಲ. ಚಿನ್ನಯ್ಯನ ಬ್ರೈನ್ ಮ್ಯಾಪಿಂಗ್ ನಡೆಸಬೇಕು. ಅಗತ್ಯವಿದ್ದರೆ ನಾನು ಕೂಡ ಲೈವ್ ಬ್ರೈನ್ ಮ್ಯಾಪಿಂಗಿಗೆ ತಯಾರಿದ್ದೇನೆ. ಎಸ್‌ಐಟಿ ಮೂರು ತಿಂಗಳ ಹಿಂದೆ ಸರಕಾರಕ್ಕೆ ನೀಡಿದೆ. ಸರಕಾರ ಅದನ್ನು ತಕ್ಷಣ ಬಿಡುಗಡೆಗೊಳಿಸಬೇಕು ಎಂದು ಆಗ್ರಹಿಸಿದರು.

ಜೈನ ಮುನಿ ಸಮಾಧಿ ಮರಣ

ರಬಕವಿ-ಬನಹಟ್ಟಿ (ಬಾಗಲಕೋಟೆ): ತಾಲೂಕಿನ ಹಳಿಂಗಳಿ ಭದ್ರಗಿರಿ ಬೆಟ್ಟದಲ್ಲಿ ಜೈನ ಮುನಿ ಶಾಂತಿಧರ್ಮ ಭೂಷಣ ಮಹಾರಾಜರು ಶನಿವಾರ ಬೆಳಗಿನ ಜಾವ ಸಮಾಧಿ ಮರಣ ಹೊಂದಿದರು.

ಭದ್ರಗಿರಿ ಬೆಟ್ಟದ ಆಚಾರ್ಯ ಕುಲರತ್ನಭೂಷಣ ಮಹಾರಾಜರಿಂದ ಸಲ್ಲೇಖನ ವ್ರತ ಸ್ವೀಕರಿಸಿದ್ದರು. ಯಮ ಸಲ್ಲೇಖನ ವ್ರತ ಜೈನ ಧರ್ಮದಲ್ಲಿ ಅತ್ಯಂತ ಕಠಿಣ ಆಚರಣೆಯಾಗಿದೆ. ಭದ್ರಗಿರಿ ಬೆಟ್ಟದಲ್ಲಿ ಶಾಂತಿಧರ್ಮ ಭೂಷಣ ಮಹಾರಾಜರ ಅಂತ್ಯಕ್ರಿಯೆ ಶನಿವಾರ ನಡೆಯಿತು. ಶ್ರಾವಕ, ಶ್ರಾವಕಿಯರು ಅಂತಿಮ ದರ್ಶನ ಪಡೆದರು.

ಪ್ರತ್ಯೇಕ ಅಪಘಾತ: ರಾಜ್ಯದಲ್ಲಿ 7 ಮಂದಿ ದುರ್ಮರಣ

ವಿಕ ಸುದ್ದಿಲೋಕ ಬೆಂಗಳೂರು

ರಾಜ್ಯದಲ್ಲಿ ಶುಕ್ರವಾರ ರಾತ್ರಿ ಮತ್ತು ಶನಿವಾರ ವಿವಿಧೆಡೆ ಸಂಭವಿಸಿದ ಅಪಘಾತಗಳಲ್ಲಿ 7 ಜನರು ಮರಣಿಸಿದ್ದಾರೆ.

ಹೊಸಕೋಟೆ ತಾಲೂಕಿನ ದೊಡ್ಡಹುಲ್ಲೂರು ಬಳಿ ಹೆದ್ದಾರಿಯಲ್ಲಿ ಮರ್ಸಿಡಿಸ್ ಬೆನ್ಸ್ ಕಾರು ಅಪಘಾತಕ್ಕೀಡಾಗಿದ್ದು, ಶಾಜಿಯಾ(28) ಮತ್ತು ರಿಜ್ವಾನ್(30) ಸ್ಥಳದಲ್ಲಿಯೇ ಸಾವನ್ನಪ್ಪಿದ್ದಾರೆ. ಹೊಸಕೋಟೆಯ ಹಲಸಹಳ್ಳಿ ಗೇಟ್ ಬಳಿ ನಡೆದ ಮತ್ತೊಂದು ಅಪಘಾತದಲ್ಲಿ ಬೈಕ್‌ಗೆ ಲಾರಿ ಡಿಕ್ಕಿ ಹೊಡೆದಿದ್ದರಿಂದ ಹಿಂಬದಿ ಸವಾರ ಯುವತಿ ಮೋನಿಷಾ(23) ಮೃತರಾದರೆ, ಸವಾರ ಪ್ರೀತಮ್ ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದಾರೆ. ದೇವನಹಳ್ಳಿಯ ರಾಣಿಕ್ರಾಸ್ ಬಳಿ ಬೈಕ್‌ಗೆ ಹಿಂಬದಿಯಿಂದ ಲಾರಿ ಡಿಕ್ಕಿ ಹೊಡೆದು ಧರ್ಮಾವರಂ ಮೂಲದ ಜಯಪ್ರಕಾಶ್(25) ಸಾವಿಗೀಡಾಗಿದ್ದಾರೆ.

ನೆಲಮಂಗಲದ ಬಳಿ ರಾಷ್ಟ್ರೀಯ ಹೆದ್ದಾರಿ 48ರ ನವಯುಗ ಟೋಲ್ ಸಮೀಪ ನಾಯಿ ಅಡ್ಡ ಬಂದು ಸಂಭವಿಸಿದ ಅಪಘಾತದಲ್ಲಿ ತುಮಕೂರು ಮೂಲದ ರಂಜನ್ ಕುಮಾರ್ (27) ಮೃತಪಟ್ಟಿದ್ದಾರೆ. ಬೆಂಗಳೂರು ಕಡೆಯಿಂದ ಸ್ನೇಹಿತನೊಂದಿಗೆ ಬೈಕ್‌ನಲ್ಲಿ ತೆರಳುತ್ತಿದ್ದಾಗ ನಾಯಿ ಅಡ್ಡ ಬಂದು ಬೈಕ್ ಸಹಿತ ಸವಾರರು ಬಿದ್ದರು. ಈ ವೇಳೆ ಹಿಂಬದಿಯಿಂದ ಬರುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್ ರಂಜನ್ ಕುಮಾರ್ ಅವರ ಮೇಲೆ ಹರಿದು ಅವರು ಸ್ಥಳದಲ್ಲೇ ಮೃತಪಟ್ಟರು.

ಹೊಸಕೋಟೆಯ ಎಸ್‌ಟಿಆರ್‌ಆರ್ ಹೆದ್ದಾರಿಯಲ್ಲಿ ನಡೆದ ಅಪಘಾತದಲ್ಲಿ ನಜ್ಜುಗುಜ್ಜಾಗಿರುವ ಕಾರು.

ಇಬ್ಬರು ಪ್ರಯಾಣಿಕರು ಸಾವು
ಬಾಗಲಕೋಟೆ ಜಿಲ್ಲೆ ಬೀಳಗಿ ತಾಲೂಕಿನ ಅನಗವಾಡಿ ಗ್ರಾಮದ ಬಳಿ ಶನಿವಾರ ಬೆಳಗ್ಗೆ ಕೆಎಸ್‌ಆರ್‌ಟಿಸಿ ಬಸ್ ಹಾಗೂ ಲಾರಿ ಡಿಕ್ಕಿಯಾಗಿ ಇಬ್ಬರು ಪ್ರಯಾಣಿಕರು ಸ್ಥಳದಲ್ಲೇ ಮೃತಪಟ್ಟಿದ್ದು, ಐವರು ತೀವ್ರವಾಗಿ ಗಾಯಗೊಂಡಿದ್ದಾರೆ. ಬಾಗಲಕೋಟೆ ತಾಲೂಕಿನ ಸಿಮೀಕೇರಿ ಗ್ರಾಮದ ನಿವಾಸಿ ವಾಣಿ ದೇಸಾಯಿ (29), ಗದಗ ಜಿಲ್ಲೆಯ ನರಗುಂದ ತಾಲೂಕಿನ ಬನ್ನಟ್ಟಿಯ ಶಿವಾನಂದ ಕೊಡ್ಲಿವಾಡ (28) ಮೃತಪಟ್ಟ ಪ್ರಯಾಣಿಕರು. ಹುಬ್ಬಳ್ಳಿ-ಸೊಲ್ಲಾಪುರ ರಾಷ್ಟ್ರೀಯ ಹೆದ್ದಾರಿ-218ರಲ್ಲಿ ಅನಗವಾಡಿ ಕೆಐಬಿ ಹತ್ತಿರ ಈ ಅಪಘಾತ ಸಂಭವಿಸಿದೆ. ಲಾರಿ ಚಾಲಕನ ನಿಯಂತ್ರಣ ತಪ್ಪಿ ಬಸ್‌ಗೆ ಜೋರಾಗಿ ಡಿಕ್ಕಿ ಹೊಡೆದ ಪರಿಣಾಮ ಬಸ್‌ನ ಹಿಂಬದಿ ಸೀಟ್‌ನಲ್ಲಿ ಕುಳಿತಿದ್ದ ಇಬ್ಬರು ಪ್ರಯಾಣಿಕರು ಮೃತಪಟ್ಟಿದ್ದಾರೆ.

ಸರಕಾರಿ ಉದ್ಯೋಗಿಗೆ ಚಪ್ಪಲಿಯಿಂದ ಹೊಡೆದ ರೈತ

ವಿಕ ಸುದ್ದಿಲೋಕ ಬಾಗಲಕೋಟೆ

ಭೂಸ್ವಾಧೀನ ಪರಿಹಾರ ವಿತರಣೆಯಲ್ಲಿ ವಿಳಂಬದಿಂದ ರೋಸಿಹೋದ ಸಂತ್ರಸ್ತ ರೈತರೊಬ್ಬರು ಸರಕಾರಿ ಉದ್ಯೋಗಿಗೆ ಚಪ್ಪಲಿಯಿಂದ ಹೊಡೆದಿದ್ದಾರೆ.

ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದಿಂದ ಸಂತ್ರಸ್ತರಿಗೆ ಸೌಲಭ್ಯ ಒದಗಿಸುವಲ್ಲಿ ನಿರ್ಲಕ್ಷ್ಯ ತೋರಲಾಗುತ್ತಿದೆ ಎಂದು ಆರೋಪಿಸಿ ನಾನಾ ಸಂಘಟನೆಗಳು ಶನಿವಾರ ಪ್ರತಿಭಟನೆ ಕೈಗೊಂಡ ವೇಳೆ ಈ ಘಟನೆ ನಡೆದಿದೆ.

ಪ್ರಾಧಿಕಾರದ ಟೈಪಿಸ್ಟ್ ನೀಲಕಂಠ ಅಂಕದ ಹಲ್ಲೆಗೊಳಗಾದವರು. ಬಾಗಲಕೋಟೆಯ ಸಂತ್ರಸ್ತ ರೈತ ಬಸಪ್ಪ ದೊಡಮನಿ ಚಪ್ಪಲಿಯಿಂದ ಹಲ್ಲೆ ಮಾಡಿದ ವಿಡಿಯೊ ಸಾಮಾಜಿಕ ತಾಣದಲ್ಲಿ ಹರಿದಾಡುತ್ತಿದೆ. ಹಲ್ಲೆಗೊಳಗಾದ ನೌಕರ ನೀಲಕಂಠ ಅಂಕದ ರೈತನ ವಿರುದ್ಧ ನವನಗರ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಪ್ರಾಧಿಕಾರದಿಂದ ಸಂತ್ರಸ್ತರಿಗೆ ಹಕ್ಕುಪತ್ರ ವಿತರಣೆ ವೇಳೆ ದಲಿತ ಸಂಘಟನೆಗಳು ಪ್ರತಿಭಟನೆ ನಡೆಸಿದ್ದವು. ಈ ಸಂದರ್ಭದಲ್ಲಿ ಆಕ್ರೋಶಗೊಂಡ ರೈತ ನೌಕರನನ್ನು ನಿಂದಿಸಿ ಚಪ್ಪಲಿಯಿಂದ ಹೊಡೆದರು. ನಂತರ ಸ್ಥಳಕ್ಕೆ ಧಾವಿಸಿದ ಬಿಟಿಡಿಎ ಅಧ್ಯಕ್ಷ ಪ್ರಕಾಶ ತಪಶೆಟ್ಟಿ, ಪುನರ್ವಸತಿ ಅಧಿಕಾರಿ ಪ್ರಶಾಂತ ಬಾರಿಗಿಡದ ಸಮಾಧಾನಪಡಿಸಲು ಯತ್ನಿಸಿದರು. ಆದರೂ ದಲಿತ ಸಂಘಟನೆಗಳ ಮುಖಂಡರು ಆಕ್ರೋಶ ವ್ಯಕ್ತಪಡಿಸಿದರು.

''ಸಂತ್ರಸ್ತರು ಪರಿಹಾರ, ನಿವೇಶನ ಪಡೆಯಲು ವರ್ಷಗಟ್ಟಲೇ ಪ್ರಾಧಿಕಾರಕ್ಕೆ ಅಲೆಯಬೇಕು. ವಿಳಂಬ ನೀತಿ ಅನುಸರಿಸುವ, ಭ್ರಷ್ಟಾಚಾರ ನಡೆಸುವ ಅಧಿಕಾರಿಗಳನ್ನು ವರ್ಗಾವಣೆಗೊಳಿಸಿ,'' ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ಕೃಷ್ಣಾ ಮೇಲ್ದಂಡೆ ಯೋಜನೆಯ ಆಲಮಟ್ಟಿ ಡ್ಯಾಂ ಹಿನ್ನೀರಿನಲ್ಲಿ ಮುಳುಗಡೆ ಪ್ರದೇಶದಲ್ಲಿ ಇದ್ದ ಬಸಪ್ಪ ಅವರ ಜಮೀನನ್ನು ಸ್ವಾಧೀನಪಡಿಸಿಕೊಂಡ ಪ್ರಾಧಿಕಾರ, ಪರಿಹಾರದ ಹಣ ಪಾವತಿಸಿಲ್ಲ, ವ್ಯಾಜ್ಯ ನ್ಯಾಯಾಲಯದಲ್ಲಿದೆ ಎನ್ನಲಾಗಿದೆ. ಹಲವು ಬಾರಿ ಪ್ರತಿಭಟನೆ ನಡೆಸಿದ್ದಾರೆ.

ಯುಕೆಪಿ ಭೂಸ್ವಾಧೀನ ಪರಿಹಾರ ವಿತರಣೆ ವಿಳಂಬಕ್ಕೆ ಆಕ್ರೋಶ

ಬಾಗಲಕೋಟೆಯಲ್ಲಿ ಶನಿವಾರ ಸರಕಾರಿ ನೌಕರರೊಬ್ಬರ ಮೇಲೆ ಚಪ್ಪಲಿಯಿಂದ ಹಲ್ಲೆ ಮಾಡಿದ ರೈತ.



ಪ್ರಶ್ನೆ: ಸಂಸಾರದಲ್ಲಿ ಸುಖ ಇಲ್ಲ, ಪರಿಹಾರ ತಿಳಿಸಿಕೊಡಿ ಗುರೂಜಿ.

ಜನ್ಮದಿನಾಂಕ: 09.09.1986 **ನಕ್ಷತ್ರ:** ಧನಿಷ್ಠ

ಪರಿಹಾರ: ಶನಿಯು ಮೂರನೇ ಮನೆಯಲ್ಲಿದ್ದರೂ ಸಂಸಾರದಲ್ಲಿ ಜಟಾಪಟಿಯು ನಡೆಯುತ್ತಿರುತ್ತದೆ. ಆದಕ್ಕೆ ಮೌನ ಧರಿಸಿ, ಎಲ್ಲವನ್ನೂ ಸಹಿಸಿಕೊಳ್ಳಬೇಕು. ಆ ಶಕ್ತಿಯು ನಿಮಗೆ ಇರಬೇಕಾದರೆ ಭಗವಂತನನ್ನು ಪೂಜಿಸಿ. 18 ದಿನಗಳ ಕಾಲ ನಿತ್ಯವೂ ನಾಗ ದೇವರನ್ನು ಅರ್ಚಿಸಿ, ಸುಬ್ರಹ್ಮಣ್ಯನನ್ನು ಪ್ರಾರ್ಥಿಸಿ. ಎಲ್ಲವನ್ನೂ ಕೊಟ್ಟು ಸಂಸಾರದ ಚಿಂತೆ ಕೊಟ್ಟರೆ ಬದುಕು ಸಾರ್ಥಕವಾಗುವುದಿಲ್ಲ, ನಾಗರಾಜನು ನಿಮ್ಮನ್ನು ಕಾಪಾಡಲಿ.

ನೀವೂ ಪ್ರಶ್ನೆ ಕೇಳಬಹುದು...
ವಾಟ್ಸ್ಆ್ಯಪ್ ಸಂಖ್ಯೆ: 6366422240

ಪಂಚಾಂಗ 14-06-2026

ಪರಾಭವ ನಾಮ ಸಂವತ್ಸರ
ಅಯನ: ಉತ್ತರಾಯಣ.
ಋತು: ಗ್ರೀಷ್ಮ. **ಮಾಸ:** ಅಧಿಕ ಜ್ಯೇಷ್ಠ. **ಪಕ್ಷ:** ಕೃಷ್ಣ. **ಮಳೆ ನಕ್ಷತ್ರ:** ಮೃಗಶಿರಾ. **ನಿತ್ಯನಕ್ಷತ್ರ:** ರೋಹಿಣಿ.
ತಿಥಿ: ಚತುರ್ದಶಿ. **ಯೋಗ:** ಧೃತಿ.
ಕರಣ: ಶಕುನಿ.
ವಾರ: ಭಾನುವಾರ.

ರಾಹು ಕಾಲ: ಸಂ. 4.30 - 6.00
ಗುಳಿಕ ಕಾಲ: ಮ. 3.00-4.30
ಯಮಗಂಡ ಕಾಲ: ಮ. 12.00-1.30
ಸೂರ್ಯ ಉದಯ: ಬೆ. 5.54
ಸೂರ್ಯ ಅಸ್ತ: ಸಂ. 6.45

ಮೈಸೂರನ್ನೇ ಘಮ್ಮೆನ್ನಿಸೋ ಮ್ಯಾಂಗೋ ಪಚ್ಚ

ಸಿನಿ ವಿಮರ್ಶೆ

ಮ್ಯಾಂಗೋ ಪಚ್ಚ

ಪಚ್ಚ ಅಲಿಯಾಸ್ ಪ್ರಶಾಂತ ಮೈಸೂರಿನಲ್ಲಿ ಒಂದು ಡಿವಿಡಿ ಅಂಗಡಿ ಜತೆಗೆ ಪೈರಸಿ ಸಿಡಿಯ ನೆಟ್‌ವರ್ಕ್ ಹೊಂದಿರುತ್ತಾನೆ. ಅಪ್ಪನ ಸಾವಿನಿಂದಾಗಿ, ಅವರ ಕುಲಕಸುಬು ಗಾಂಜಾ ಬೆಳೆದು, ಮಾರುವ ಬಿಸಿನೆಸ್‌ಗೆ ಬರುತ್ತಾನೆ. ಪಚ್ಚನ ಅಣ್ಣ ನಾಗಪ್ಪನಿಗೆ ಅಧಿಕಾರ ಆಸೆ. ಇದನ್ನೇ ಬಂಡವಾಳ ಮಾಡಿಕೊಂಡ ಅಪ್ಪನ ಬಿಸಿನೆಸ್ ಪಾಲುದಾರ ರಾಜಕಾರಣಿ ಮಹೇಂದ್ರ, ನಾಗಪ್ಪ ಹಾಗೂ ಪಚ್ಚ ಮಾಡುವ ಗಾಂಜಾ ಬಿಸಿನೆಸ್ ಲಾಭದಲ್ಲಿ ಬದುಕುವ ಆಲೋಚನೆಯಲ್ಲಿರುತ್ತಾನೆ. ಆದರೆ ಪಚ್ಚ ಬಿಸಿನೆಸ್‌ಗೆ ಬಂದ ಕೆಲವೇ ದಿನದಲ್ಲಿ ಅಣ್ಣ ನಾಗಪ್ಪ, ಮೇಯರ್ ಮಹೇಂದ್ರನ ಮೀರಿ ಜನಪ್ರಿಯತೆ ಗಳಿಸುತ್ತಾನೆ. ಇದನ್ನು ಸಹಿಸದ ಮಹೇಂದ್ರ ಪಚ್ಚನನ್ನೇ ಸಿಕ್ಕಿ ಹಾಕಿಸಲು ಹುನ್ನಾರ ನಡೆಸುತ್ತಾನೆ. ನಾಗಪ್ಪ ಕೂಡ ಪಿತೂರಿ ಮಾಡಿ ಗಾಂಜಾ ದಂಧೆಗೆ ಎಳ್ಳು ನೀರು ಬಿಡುತ್ತಾನೆ. ಅಲ್ಲಿಂದಲೇ ಕಥೆ ಹೊಸ ತಿರುವು ಪಡೆಯುತ್ತೆ, ಪಚ್ಚ ಮುಂದೇನು ಮಾಡುತ್ತಾನೆ, ರಾಜಕೀಯಕ್ಕೆ ಬರುವ ಅಣ್ಣ ನಾಗಪ್ಪ ಏನು ಮಾಡುತ್ತಾನೆ, ಇವರಿಬ್ಬರ ಬೆಳವಣಿಗೆ ಸಹಿಸದ ಮಹೇಂದ್ರ ಮತ್ತೇನು ಮಾಡುತ್ತಾನೆ ಎನ್ನುವುದೇ ಕಥೆ.

ಒಂದು ಸಿಂಪಲ್ಲಾದ, ಹಲವು ಸಿನಿಮಾದಲ್ಲಿ ನೋಡಿರುವ, ಮೈಸೂರಿನವರಲ್ಲಿ ಸಾಕಷ್ಟು ಮಂದಿಗೆ ಗೊತ್ತಿರಬಹುದಾದ ಕಥೆಯನ್ನು ವಿಭಿನ್ನ ಸ್ಕ್ರೀನ್‌ಪ್ಲೇ ಮೂಲಕ, ಹೆಚ್ಚು ಸಮಯ ವ್ಯರ್ಥ ಮಾಡದೇ ತೆರೆಗೆ ಇಟ್ಟಿದ್ದಾರೆ ನಿರ್ದೇಶಕ ವಿವೇಕ. ಆ ವೇಗಕ್ಕೆ ಬೇಕಾದ ಸಂಭಾಷಣೆ, ನಾನ್ ಲೀನಿಯರ್ ನಿರೂಪಣೆ ಪ್ರತಿಕ್ಷಣ ಪ್ರೇಕ್ಷಕನನ್ನು ಹಿಡಿದು ಕೂರಿಸುತ್ತದೆ. ಮೊದಲ ಸಿನಿಮಾದಲ್ಲೇ ಪಚ್ಚನಾಗಿ ಸಂಚಿತ್ ಸಂಜೀವ್ ಒಳ್ಳೆ ಸ್ಕೋರ್ ಮಾಡುತ್ತಾರೆ. ಸುದೀಪ್‌ರಂತೆ ಬೇಸ್‌ವಾಯ್ಸ್, ಕಣ್ಣಲ್ಲೇ ನಟಿಸುವ ಕಲೆ ಅವರಿಗೆ ಒಲಿದು ಬಂದಿರುವ ಪ್ಲಸ್ ಪಾಯಿಂಟ್. ಇನ್ನು ನಾಯಕಿ ಸೂಜಿಯಾಗಿ ಕಾಜಲ್ ಕುಂದರ್, ಅಮ್ಮನಾಗಿ ಹರಿಣಿ, ಅತ್ತಿಗೆಯಾಗಿ ಹಂಸ, ಅಪ್ಪನ ಚೇಲಾ ಆಗಿ ಮ್ಯಾಕ್ಸ್ ಮಂಜು, ತಮ್ಮನಾಗಿ ಜೈಗೋಪಿನಾಥ್ ಪಾತ್ರವಾಗಿ ಹಿಡಿಸುತ್ತಾರೆ. ಇವರಿಗಿಂತ ಇಷ್ಟವಾಗುವ, ನೆನಪಲ್ಲುಳಿಯುವ ಪಾತ್ರ ಅಣ್ಣ ನಾಗಪ್ಪನ ಪಾತ್ರದ ಮಯೂರ್ ಪಟೇಲ್ ಹಾಗೂ ಮೇಯರ್ ಮಹೇಂದ್ರನ ರೂಪದಲ್ಲಿರುವ ಅವರದ್ದು. ಇಡೀ ಸಿನಿಮಾ ಇಷ್ಟವಾಗಲು ಇರುವ ಅತೀಮುಖ್ಯ ಕಾರಣ ಚರಣ್ ರಾಜ್ ಮ್ಯೂಸಿಕ್ ಹಾಗೂ ಹಾಡುಗಳಷ್ಟೆ. ಎಲ್ಲಿಯಂದ್ರೋ, ಯಾವುದೋ ಕಾಲದ ಗಾಂಜಾ ಸ್ಟೋರಿ ನಮಗ್ಯಾಕೆ ಅಂದುಕೊಳ್ಳದೇ, ಥ್ರಿಲ್ಲಿಂಗ್ ಎಂಟರ್‌ಟೈನ್‌ಮೆಂಟ್ ಬಯಸುವವರಿಗೆ ಸೂಕ್ತ ಸಿನಿಮಾ.

ಕಿರಣ್ ಚಂದ್ರ

ಸಿನಿಮಾ: ಮ್ಯಾಂಗೋ ಪಚ್ಚ
ತಾರಾಗಣ: ಸಂಚಿತ್ ಸಂಜೀವ್, ಕಾಜಲ್ ಕುಂದರ್, ಮಯೂರ್ ಪಟೇಲ್, ಜೈ ಗೋಪಿನಾಥ್, ಹರಿಣಿ ಶ್ರೀಕಾಂತ್.
ನಿರ್ದೇಶನ: ವಿವೇಕ
ಸಂಗೀತ ನಿರ್ದೇಶನ: ಚರಣ್ ರಾಜ್
ಛಾಯಾಗ್ರಹಣ: ಶೇಖರ್ ಚಂದ್ರ
ರೇಟಿಂಗ್: ★★★½

Rating Scale: TRASH * | BELOW AVERAGE ** | AVERAGE **1/2 | ABOVE AVERAGE *** GOOD ***1/2 VERY GOOD **** | OUTSTANDING ****1/2 | MASTERPIECE *****

ಬೆಂಗಳೂರಿನ ವಿಧಾನಸೌಧದಲ್ಲಿ ಸಿಎಂ ಡಿ.ಕೆ.ಶಿವಕುಮಾರ್ ಅವರನ್ನು ಆಸ್ಟ್ರೇಲಿಯಾದ ವೈಕಟೊ ವಿವಿ ಸಹಾಯಕ ಉಪಕುಲಪತಿ ಶರೋನ್ ಕಲ್ವರ್ಟ್ ನೇತೃತ್ವದ ನಿಯೋಗ ಶನಿವಾರ ಭೇಟಿ ಮಾಡಿ ಸಮಾಲೋಚನೆ ನಡೆಸಿತು.

ಗೋಕರ್ಣದಲ್ಲಿ ಭಾರಿ ಮಳೆ

ಗೋಕರ್ಣ (ಉತ್ತರ ಕನ್ನಡ): ಪ್ರವಾಸಿ ಮತ್ತು ಧಾರ್ಮಿಕ ತಾಣ ಗೋಕರ್ಣದಲ್ಲಿ ಶನಿವಾರ ಭಾರಿ ಮಳೆ ಸುರಿದು ರಸ್ತೆಗಳು ನದಿಯಾಗಿ ಮಾರ್ಪಟ್ಟವು. ಜನಜೀವನ ಅಸ್ತವ್ಯಸ್ತವಾಯಿತು.

ಮಹಾಬಲೇಶ್ವರ ಮಂದಿರದ ಪಶ್ಚಿಮ ಬಾಗಿಲಿನ ಎದುರಗಡೆಯ ಕಡಲತೀರಕ್ಕೆ ಸಾಗುವ ಮಾರ್ಗದಲ್ಲಿ ಮಳೆ ನೀರು ತುಂಬಿ ಹರಿಯಿತು. ದೇವಾಲಯದ ಅಮೃತಾನ್ನ ಭೋಜನ ಶಾಲೆಗೂ ನೀರು ನುಗ್ಗಿತ್ತು. ಮಹಾಗಣಪತಿ ಮಂದಿರದ ಪಕ್ಕದ ಓಣಿಯಿಂದ ಬರುವ ಭಾರಿ ಪ್ರಮಾಣದ ಮಳೆ ನೀರು ಮಹಾಬಲೇಶ್ವರ ಮಂದಿರದ ಆವರಣ, ಮುಂಭಾಗದ ರಸ್ತೆಗಳಿಗೆ ನುಗ್ಗಿತ್ತು. ರಾಜ್ಯ ಹೆದ್ದಾರಿಯಲ್ಲಿ ನೀರು ತುಂಬಿಕೊಂಡಿತು.

ಸ್ಥಳೀಯರಿಂದ 4 ವರ್ಷದ ಬಾಲಕಿ ರಕ್ಷಣೆ

ದೇವಾಲಯದಲ್ಲೇ ಮಗು ಮರೆತ ಪೋಷಕರು!

ವಿಕ ಸುದ್ದಿಲೋಕ ಕಳಸ (ಚಿಕ್ಕಮಗಳೂರು)

ಪಟ್ಟಣದ ಕಲಶೇಶ್ವರಸ್ವಾಮಿ ದೇವಸ್ಥಾನಕ್ಕೆ ಬಂದಿದ್ದ ದಂಪತಿ, ದೇವರ ದರ್ಶನ ಪಡೆದು ಹಿಂದಿರುಗುವಾಗ ತಮ್ಮ ನಾಲ್ಕು ವರ್ಷದ ಹೆಣ್ಣು ಮಗುವನ್ನು ದೇವಸ್ಥಾನದ ಆವರಣದಲ್ಲೇ ಮರೆತು ಕಾರಿನಲ್ಲಿ ಹೊರಟುಹೋದ ಘಟನೆ ಶನಿವಾರ ನಡೆದಿದೆ. ಸ್ಥಳೀಯರು ಹಾಗೂ ಕಳಸ ಪೊಲೀಸರು ಮಗುವನ್ನು ಸುರಕ್ಷಿತವಾಗಿ ಪೋಷಕರ ಮಡಿಲು ಸೇರಿಸಿದರು.

ಕೊಳ್ಳೇಗಾಲದ ಶಿವಶಂಕರ್ ದಂಪತಿ ಕಳಸದ ದೇವಸ್ಥಾನಕ್ಕೆ ಭೇಟಿ ನೀಡಿದ್ದರು. ದೇವರ ದರ್ಶನ ಪಡೆದ ಬಳಿಕ ಕಾರು ಹತ್ತಿ ಹೊರನಾಡಿಗೆ ಹೊರಟರು. ಇತ್ತ ದೇವಾಲಯದ ಆವರಣದಲ್ಲೇ ಇದ್ದ ಮಗು ಪಾಲಕರನ್ನು ಕಾಣದೆ ದಿಗಿಲುಗೊಂಡಿತು. ಅಷ್ಟರಲ್ಲಿ ಪಾಲಕರು ಕಾರು ಹತ್ತಿ ಹೋಗುತ್ತಿರುವುದನ್ನು ಕಂಡ ಮಗು, ಕಣ್ಣೀರು ಹಾಕುತ್ತಾ ಕಾರಿನ ಹಿಂದೆಯೇ ಓಡಿತು. ಇದನ್ನು ಗಮನಿಸಿದ ಸ್ಥಳೀಯರು ಮಗುವನ್ನು ರಕ್ಷಿಸಿ, ಕಳಸ ಠಾಣೆಗೆ ಕರೆತಂದು ಒಪ್ಪಿಸಿದರು.

ಪೊಲೀಸರಿಗೆ ಮಾಹಿತಿ ನೀಡಿದ ಬಾಲಕಿ ತನ್ನೂರು ಕೊಳ್ಳೇಗಾಲವೆಂದು ಹೆತ್ತವರ ಹೆಸರು ಹಾಗೂ ಶಾಲೆಯ ಹೆಸರನ್ನು ಸ್ಪಷ್ಟವಾಗಿ ಹೇಳಿತು. ''ನನಗೆ ನನ್ನ ಅಪ್ಪ ಬೇಕು, ಅಮ್ಮ ಬೇಕು. ಅವರಿಗೆ ನಾನಂದ್ರೆ ಇಷ್ಟ, ನನಗೂ ಅವರಂದ್ರೆ ಇಷ್ಟ. ಆದರೆ, ನನ್ನನ್ನು ಇಲ್ಲೇ ಬಿಟ್ಟು ಹೋಗಿದ್ದಾರೆ, ನನ್ನನ್ನು ಅಪ್ಪನ ಹತ್ತಿರ ಕಳುಹಿಸಿ...'' ಎಂದು ಮಗು ಅಳತೊಡಗಿತು. ಪೊಲೀಸರು ಮಗುವಿಗೆ ಚಾಕೊಲೆಟ್ ನೀಡಿ ಸಂತೈಸಿದರು. ಜತೆಗೆ ಹೊರನಾಡಿನ ಪೊಲೀಸರಿಗೆ ಮಾಹಿತಿ ನೀಡಿದರು.

ಅತ್ತ ಪೋಷಕರು ಹೊರನಾಡು ತಲುಪಿ ಕಾರಿನಿಂದ ಇಳಿಯುವಾಗ ತಮ್ಮೊಂದಿಗೆ ಮಗು ಇಲ್ಲದಿದ್ದನ್ನು ಗಮನಿಸಿ ಗಾಬರಿಗೊಂಡರು. ತಕ್ಷಣವೇ ದೇವಸ್ಥಾನದ ಕಚೇರಿಯಲ್ಲಿ ವಿಚಾರಿಸಿದಾಗ, ಮಗು ಕಳಸ ಠಾಣೆಯಲ್ಲಿ ಸುರಕ್ಷಿತವಾಗಿರುವ ಮಾಹಿತಿ ದೊರೆಯಿತು. ಠಾಣೆಗೆ ಧಾವಿಸಿದ ಪೋಷಕರನ್ನು ಕಂಡು ಮಗು ನಿಟ್ಟುಸಿರುಬಿಟ್ಟಿತು.

ಎಐಗೂ ಮೌಂಟ್ ಎವರೆಸ್ಟ್‌ಗೂ ಏನು ಸಂಬಂಧ?

ವಿಕ AI ಲೋಕ

ಕೃತಕ ನ್ಯೂರಲ್ ನೆಟ್‌ವರ್ಕ್‌ಗಳನ್ನು ಮೆಷಿನ್ ಲರ್ನಿಂಗ್ ಮೂಲಕ ಸಕ್ರಿಯಗೊಳಿಸುವುದನ್ನು ಜಗತ್ತಿಗೆ ತಿಳಿಸಿಕೊಟ್ಟಿದ್ದಕ್ಕಾಗಿ ಜೆಫ್ರಿ ಎವರೆಸ್ಟ್ ಹಿಂಟನ್ ಹಾಗೂ ಜಾನ್ ಜೆ ಹಾಫ್‌ಫೀಲ್ಡ್ ಅವರಿಗೆ 2024ರ ಫಿಸಿಕ್ಸ್ ನೊಬೆಲ್ ಪ್ರಶಸ್ತಿ ಲಭಿಸಿತ್ತು. ಬಹಳಷ್ಟು ಸಾಮಾನ್ಯರಿಗೆ ಮೆಷಿನ್ ಲರ್ನಿಂಗ್ ಹಾಗೂ ನ್ಯೂರಲ್ ನೆಟ್‌ವರ್ಕ್‌ಗಳು ಪರಿಚಯವಾಗಿದ್ದು ಆವಾಗಲೇ! ಇವರಿಬ್ಬರಲ್ಲಿ ಜೆಫ್ರಿ ಎವರೆಸ್ಟ್ ಹಿಂಟನ್ ಅವರನ್ನು 'ಎಐ ಪಿತಾಮಹ' ಎಂದು ಕರೆಯುತ್ತಾರೆ. ಸೂಕ್ಷ್ಮವಾಗಿ ಗಮನಿಸಿ ನೋಡಿ: ಅವರ ಮಧ್ಯನಾಮದಲ್ಲಿರುವ ಎವರೆಸ್ಟ್‌ಗೂ ನಮ್ಮ ಮೌಂಟ್ ಎವರೆಸ್ಟ್‌ಗೂ ಏನಾದರೂ ಸಂಬಂಧವಿರಬಹುದೇ? 'ಎತ್ತಣ ಮಾಮರ, ಎತ್ತಣ ಕೋಗಿಲೆ ಎತ್ತಣಿಂದೆತ್ತ ಸಂಬಂಧವಯ್ಯಾ' ಎನ್ನುವ ಅಲ್ಲಮ ಪ್ರಭುವಿನ ವಚನದಂತೆ 'ಎತ್ತಣ ಹಿಮಾಲಯ, ಎತ್ತಣ ಕೃತಕ ಬುದ್ಧಿಮತ್ತೆ?' ಜೆಫ್ರಿ ಹಿಂಟನ್ ಅವರ ಗ್ರೇಟ್ ಗ್ರೇಟ್ ಅಂಕಲ್ ಬೇರೆ ಯಾರೂ ಅಲ್ಲ ಬ್ರಿಟಿಷ್ ಸರಕಾರದ ಕಾಲದಲ್ಲಿ ಸರ್ವೇಯರ್ ಜನರಲ್ ಆಗಿ ಕಾರ್ಯನಿರ್ವಹಿಸಿದ ಖ್ಯಾತ ಭೂಮಾಪಕ ಸರ್ ಜಾರ್ಜ್ ಎವರೆಸ್ಟ್; ಇವರ ಹೆಸರಿನ್ನೇ ಪೃಥ್ವಿಯ ಅತಿ ಎತ್ತರದ ಜಾಗಕ್ಕೆ ಇಡಲಾಗಿದೆ. ಎಐ ಪಿತಾಮಹನ ಹೆಸರನ್ನು ಪರ್ವತಗಳ ಪಿತಾಮಹನಿಗಿಡಲಾಗಿದೆ!

ಸ್ಕ್ಯಾನ್ ಮಾಡಿ ಎಐ ಕುರಿತು ಪ್ರಶ್ನೆ ಕೇಳಿ

■ ವಿಕ್ರಂ ಜೋಶಿ
ಎಐ ವಿಶ್ಲೇಷಕರು

ಡೀಲ್ ಬಗ್ಗೆ ಖಚಿತತೆ ಇಲ್ಲ: ಇರಾನ್ ಸಚಿವ ಅರಾಘಚಿ | ಶೀಘ್ರ ಎಲ್ಲರಿಗೂ ಹರ್ಮುಜ್ ಮುಕ್ತ

ಶಾಂತಿ ಒಪ್ಪಂದಕ್ಕೆ ಇಂದು ಸಹಿ: ಟ್ರಂಪ್

ವಾಷಿಂಗ್ಟನ್: ''ಅಮೆರಿಕ-ಇರಾನ್ ನಡುವಿನ ಶಾಂತಿ ಒಪ್ಪಂದಕ್ಕೆ ಭಾನುವಾರ ಸಹಿ ಹಾಕಲಾಗುವುದು. ಜಾಗತಿಕ ವಾಣಿಜ್ಯ ಜಲಸಂಧಿ ಹರ್ಮುಜ್ ಸಂಪೂರ್ಣ ಮುಕ್ತವಾಗಲಿದೆ,'' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಘೋಷಣೆ ಮಾಡಿದ್ದಾರೆ.

ಶನಿವಾರ ತಡರಾತ್ರಿ ಸಾಮಾಜಿಕ ಜಾಲತಾಣ ಟ್ರುಥ್‌ನಲ್ಲಿ ಪೋಸ್ಟ್ ಮಾಡಿರುವ ಟ್ರಂಪ್, ''ಜಾಗತಿಕ ಜಲಮಾರ್ಗವನ್ನು ಸಂಚಾರಕ್ಕೆ ಮುಕ್ತಗೊಳಿಸಲಿರುವ ಒಪ್ಪಂದ ಅಮೆರಿಕ-ಇರಾನ್ ಸಂಬಂಧ ವೃದ್ಧಿ ಹಾದಿಯಲ್ಲಿ ಮಹತ್ವದ ಪಾತ್ರವಹಿಸಲಿದೆ,'' ಎಂದು ಹೇಳಿದ್ದಾರೆ.

''ಭವಿಷ್ಯದಲ್ಲಿ ಇರಾನ್ ಹಾಗೂ ಮಧ್ಯಪ್ರಾಚ್ಯ ದೇಶಗಳ ಜತೆ ಕೆಲಸ ಮಾಡಲು ಅಮೆರಿಕ ಬಯಸುತ್ತದೆ. ಒಪ್ಪಂದ ಸಹಿ ಕಾರ್ಯಕ್ರಮ ಸುಸೂತ್ರವಾಗಿ ನಡೆಯುವ ವಿಶ್ವಾಸವಿದೆ,'' ಎಂದು ಹೇಳಿರುವ ಟ್ರಂಪ್, ''ಒಪ್ಪಂದ ಇರಾನ್ ಅಣ್ವಸ್ತ್ರ ಹೊಂದುವುದನ್ನು ನಿರ್ಬಂಧಿಸುತ್ತದೆ. ವಾಸ್ತವವಾಗಿ ಅಣ್ವಸ್ತ್ರ ಅಭಿವೃದ್ಧಿ ಅಥವಾ ಖರೀದಿಗೂ ಅವಕಾಶ ನೀಡುವುದಿಲ್ಲ,'' ಎಂದು ವಿವರಿಸಿದ್ದಾರೆ.

ಈ ನಡುವೆ ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘಚಿ ಸ್ಥಳೀಯ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ್ದು, ''ಅಮೆರಿಕ ಜತೆಗಿನ ಒಪ್ಪಂದಕ್ಕೆ ಅಂತಿಮ ಸಹಿ ಹಾಕುವ ಬಗ್ಗೆ ಖಚಿತ ತೀರ್ಮಾನ ಆಗಿಲ್ಲ'' ಎಂದು ಹೇಳುವ ಮೂಲಕ ಗೊಂದಲ ಸೃಷ್ಟಿಸಿದ್ದಾರೆ.

ದಾಳಿ ಸಹಿಸಿ ಭಾರತಕ್ಕೆ ಹಡಗು: ಕಚ್ಚಾ ತೈಲ ಹೊತ್ತು ಸಂಘರ್ಷ ಪೀಡಿತ ಹರ್ಮುಜ್ ಜಲಸಂಧಿ ದಾಟಿ ಭಾರತಕ್ಕೆ ಬಂದಿದ್ದ ಎಂಟಿ ಒಲಿಂಪಿಕ್ ತೈಲ ಟ್ಯಾಂಕರ್‌ನಲ್ಲಿ ಸ್ಫೋಟಗೊಳ್ಳದ ಸಿಡಿತಲೆ ಹೊಂದಿದ್ದ ಕ್ಷಿಪಣಿ ಪತ್ತೆಯಾಗಿದೆ. ಸುಮಾರು 2 ಸಾವಿರ ಕಿ.ಮೀ ದೂರ ಸಾಗಿ ಬಂದರೂ ಸ್ಫೋಟಗೊಳ್ಳದ ಸಿಡಿತಲೆ ಹೊಂದಿದ್ದ ಕ್ಷಿಪಣಿಯನ್ನು ನೌಕಾಪಡೆ ಯಶಸ್ವಿಯಾಗಿ ನಿಷ್ಕ್ರಿಯಗೊಳಿಸಿದೆ.

ಮೇ 2ರಂದು ಕಚ್ಚಾ ತೈಲ ಹೊತ್ತಿದ್ದ ಎಂಟಿ ಒಲಿಂಪಿಕ್ ತೈಲ ಟ್ಯಾಂಕರ್ ಒಮನ್ ಕರಾವಳಿ ತೀರದಿಂದ ಭಾರತದತ್ತ ಪ್ರಯಾಣ ಆರಂಭಿಸಿತ್ತು. ಆಕಸ್ಮಿಕವಾಗಿ ಟ್ಯಾಂಕರ್‌ಗೆ ಅಪ್ಪಳಿಸಿದ್ದ ಸಿಡಿತಲೆ ಹೊಂದಿದ್ದ ಕ್ಷಿಪಣಿ ತೈಲ ಟ್ಯಾಂಕರ್ ಒಡಲಲ್ಲೇ ಸಿಲುಕಿತು. ಕ್ಷಿಪಣಿ ಅಪ್ಪಳಿಸಿದರೂ, ಸ್ಥಿರತೆ ಕಾಯ್ದುಕೊಂಡ ಟ್ಯಾಂಕರ್ ಪ್ರಯಾಣ ಮುಂದುವರಿಸಿತು. ಸುಮಾರು 2 ಸಾವಿರ ಕಿ.ಮೀ. ದೂರ ಸಾಗಿ ಬಂದ ಟ್ಯಾಂಕರ್ ಕೊಚ್ಚಿ ಬಂದರು ತಲುಪಿತು.

ಕೊಚ್ಚಿ ಶಿಪ್ಪಿಂಗ್ ಯಾರ್ಡ್‌ನಲ್ಲಿ ಲಂಗರು ಹಾಕಿದ ತೈಲ ಟ್ಯಾಂಕರ್ ಒಡಲಲ್ಲಿ ಅಂಟಿಕೊಂಡಿದ್ದ ಕ್ಷಿಪಣಿ ಗಮನಿಸಿದ ನೌಕಾಪಡೆ ಸಿಬ್ಬಂದಿ, ಹಿರಿಯ ಅಧಿಕಾರಿಗಳ ಗಮನಕ್ಕೆ ತಂದರು. ಪರಿಶೀಲನೆ ನಡೆಸಿದಾಗ ಸಿಡಿತಲೆ ಹೊಂದಿರುವುದು ಕಂಡು ಬಂದಿದೆ. ಜೂನ್ 11 ರಂದು ಕ್ಷಿಪ್ರ ಕಾರ್ಯಾಚರಣೆ ನಡೆಸಿದ ವಿಶೇಷ ಸ್ಫೋಟಕ ವಿಲೇವಾರಿ ತಂಡ ಸಿಡಿತಲೆ ಹೊಂದಿದ್ದ ಕ್ಷಿಪಣಿಯನ್ನು ನಿಷ್ಕ್ರಿಯಗೊಳಿಸಿತು. ಸ್ಫೋಟಕ ಕಾರ್ಯವಿಧಾನದ ಮೂಲಕ ಕ್ಷಿಪಣಿಯಿಂದ ಸಿಡಿತಲೆಯನ್ನು ಯಶಸ್ವಿಯಾಗಿ ಬೇರ್ಪಡಿಸಿ, ನಿಷ್ಕ್ರಿಯಗೊಳಿಸಲಾಗಿದೆ ಎಂದು ರಕ್ಷಣಾ ಸಚಿವಾಲಯ ಮಾಹಿತಿ ನೀಡಿದೆ.

ಅಮೆರಿಕ-ಇರಾನ್ ಸಂಘರ್ಷದ ನಡುವೆ ಹರ್ಮುಜ್ ಜಲಸಂಧಿ ಬಳಿ ಭಾರತೀಯ ಮೂಲದ ವಾಣಿಜ್ಯ ಹಡಗುಗಳ ಮೇಲೆ ಸರಣಿ ದಾಳಿ ನಡೆದ ಹೊತ್ತಿನಲ್ಲೇ ಸಿಡಿತಲೆ ಹೊಂದಿದ್ದ ಕ್ಷಿಪಣಿ ಕೊಚ್ಚಿಗೆ ಆಗಮಿಸಿದ ತೈಲ ಟ್ಯಾಂಕರ್‌ನಲ್ಲಿ ಕಂಡು ಬಂದಿರುವುದು ಸಂಘರ್ಷದ ಭೀಕರತೆಗೆ ಸಾಕ್ಷಿಯಾಗಿದೆ.

24 ಗಂಟೆಯಲ್ಲಿ ಸಂಧಾನ ಫೈನಲ್?

ಇಸ್ಲಾಮಾಬಾದ್: ಮುಂದಿನ 24 ಗಂಟೆಯಲ್ಲಿ ಅಮೆರಿಕ-ಇರಾನ್ ನಡುವೆ ಶಾಂತಿ ಒಪ್ಪಂದ ಮೂಡಲಿದೆ ಎಂದು ಪಾಕಿಸ್ತಾನ ವಿಶ್ವಾಸ ವ್ಯಕ್ತಪಡಿಸಿದೆ.

''ಎರಡು ದೇಶಗಳ ನಡುವಿನ ಪಶ್ಚಿಮ ಏಷ್ಯಾ ಸಂಘರ್ಷ ಕೊನೆಗಾಣಿಸುವ 'ಇಸ್ಲಾಮಾಬಾದ್ ಜ್ಞಾಪನ ಪತ್ರ'ಕ್ಕೆ ಭಾನುವಾರ ಉಭಯ ದೇಶಗಳು ಸಹಿ ಹಾಕಲಿವೆ. ವಿದ್ಯುನ್ಮಾನ ಸಹಿ ಮೂಲಕ ಒಪ್ಪಂದ ಪೂರ್ಣಗೊಳಿಸಲಾಗುವುದು, ಬಳಿಕ ಮುಂದಿನ ಹಂತದ ರಾಜತಾಂತ್ರಿಕ ಹಾಗೂ ತಾಂತ್ರಿಕ ಮಟ್ಟದ ಮಾತುಕತೆ ನಡೆಯಲಿವೆ,'' ಎಂದು ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಷರೀಫ್ ಹೇಳಿದ್ದಾರೆ.



ನಿಲುವು ಬದಲಿಸದ ಇರಾನ್: ''ಇರಾನ್-ಅಮೆರಿಕ ನಡುವಿನ ಸಂಭವನೀಯ ಒಪ್ಪಂದ ಶೀಘ್ರವೇ ಅಂತಿಮಗೊಳ್ಳಲಿದೆ. ಆದರೆ, ಪಾಕಿಸ್ತಾನ ಪ್ರಸ್ತಾವಿತ 'ಇಸ್ಲಾಮಾಬಾದ್ ಜ್ಞಾಪನ ಪತ್ರ'ಕ್ಕೆ ಇರಾನ್ ಭಾನುವಾರ ಸಹಿ ಹಾಕುವುದಿಲ್ಲ,'' ಎಂದು ಇರಾನಿಯನ್ ವಿದೇಶಾಂಗ ಇಲಾಖೆ ವಕ್ತಾರ ಎಸ್ಮಾಯಿಲ್ ಬಘೈ ಹೇಳಿದ್ದಾರೆ. ''ಶಾಂತಿ ಒಪ್ಪಂದ ಸನಿಹದಲ್ಲಿದೆ. ಆದರೆ, ಇಸ್ಲಾಮಾಬಾದ್ ಜ್ಞಾಪನ ಪತ್ರ'ಕ್ಕೆ ಸಹಿ ಹಾಕುವ ಕುರಿತು ಇನ್ನೂ ನಿರ್ಧರಿಸಿಲ್ಲ. ಒಪ್ಪಂದಕ್ಕೆ ಸಹಿ ಮಾಡುವುದಕ್ಕೆ ಸಮಯದ ಮಿತಿ ಇಲ್ಲ, ಮುಂದಿನ ಮೂರ್ನಾಲ್ಕು ದಿನಗಳಲ್ಲಿ ಅಂತಿಮಗೊಳ್ಳಬಹುದು,'' ಎಂದಿ ಬಘೈ ಹೇಳಿದ್ದಾರೆ.

ಜುಲೈ 9ಕ್ಕೆ ಖಮೇನಿ ಅಂತ್ಯಕ್ರಿಯೆ: ಇರಾನ್ ಗಣರಾಜ್ಯವನ್ನು 37 ವರ್ಷಗಳ ಕಾಲ ಆಳಿದ ಆಯತೊಲ್ಲಾ ಅಲಿ ಖಮೇನಿ ಅಂತ್ಯಕ್ರಿಯೆ ಪವಿತ್ರ ನಗರಿ ಕೋಮ್‌ನಲ್ಲಿ ಜುಲೈ 9ರಂದು ನಡೆಯಲಿದೆ ಎಂದು ಇರಾನಿಯನ್ ಆಡಳಿತ ಮಾಹಿತಿ ನೀಡಿದೆ. ಮೃತಪಟ್ಟು 130 ದಿನಗಳ ಬಳಿಕ ಅಂತ್ಯಕ್ರಿಯೆ ನೆರವೇರಿಸಲು ಇಸ್ಲಾಮಿಕ್ ರಿಪಬ್ಲಿಕ್ ಆಡಳಿತ ನಿರ್ಧರಿಸಿದೆ. ಟೆಹರಾನ್‌ನಲ್ಲಿ ಜುಲೈ 4ರಿಂದ ಅಂತ್ಯಕ್ರಿಯೆ ಅಂತಿಮ ವಿಧಿ-ವಿಧಾನಗಳು ಆರಂಭವಾಗಲಿವೆ. ಜುಲೈ 7ರಂದು ಕೋಮ್ ನಗರದಲ್ಲಿ ಉಳಿದ ಧಾರ್ಮಿಕ ಕಾರ್ಯಗಳು ನಡೆಯಲಿವೆ. ಜುಲೈ 9 ರಂದು ಅಂತ್ಯಕ್ರಿಯೆ ನಡೆಯಲಿದೆ ಎಂದು ಮಾಧ್ಯಮಗಳು ವರದಿ ಮಾಡಿವೆ. ಫೆ.28 ರಂದು ಅಮೆರಿಕ-ಇಸ್ರೇಲ್ ಜಂಟಿಯಾಗಿ ಟೆಹರಾನ್ ಮೇಲೆ ನಡೆಸಿದ ದಾಳಿಯಲ್ಲಿ ಆಯತೊಲ್ಲಾ ಅಲಿ ಖಮೇನಿ ಸೇರಿ 40 ಜನ ಮೃತಪಟ್ಟಿದ್ದರು.



ಅಭಿಷೇಕ್ ನಿವಾಸದಲ್ಲಿ ದೀದಿ ಡ್ರಾಮಾ

ಕೋಲ್ಕೊತಾ: ವಿಧಾನಸಭೆ ಚುನಾವಣೆಯಲ್ಲಿ ಟಿಎಂಸಿ ಸೋಲಿನ ಬಳಿಕ ಪಶ್ಚಿಮ ಬಂಗಾಳದಲ್ಲಿ ಮಾಜಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಮತ್ತು ಸೋದರಳಿಯ ಹಾಗೂ ಸಂಸದ ಅಭಿಷೇಕ್ ಬ್ಯಾನರ್ಜಿಗೆ ಸಂಕಟದ ಮೇಲೆ ಸಂಕಟ ಎದುರಾಗಿದೆ. ವಂಚನೆ ಪ್ರಕರಣದಲ್ಲಿ ಸಿಲುಕಿರುವ ಸುಮಿತ್ ರಾಯ್ ಪತ್ತೆ ಹಚ್ಚಲು ಕೋಲ್ಕೊತಾ ಪೊಲೀಸರು ಶನಿವಾರ ನಸುಕಿನ 2.30ರ ಸಮಯದಲ್ಲಿ ಅಭಿಷೇಕ್ ಬ್ಯಾನರ್ಜಿ ನಿವಾಸದ ಮೇಲೆ ದಾಳಿ ನಡೆಸಿದ್ದಾರೆ. ಈ ವೇಳೆ ಸಂಸದರ ನಿವಾಸದ ಬಳಿ ಹೈಡ್ರಾಮಾವೇ ನಡೆಯಿತು. ಅಭಿಷೇಕ್ ಆಪ್ತರಾದ ವಂಚಕ ಸುಮಿತ್ ರಾಯ್, ಸಂಸದರ ಕಾಳಿಘಾಟ್ ನಿವಾಸದಲ್ಲಿರುವ ಮಾಹಿತಿ ಆಧರಿಸಿ ಭದ್ರತಾ ಪಡೆಗಳ ಸಮೇತ ಪೊಲೀಸರು ದಾಳಿ ಮಾಡಿದರು.

■ ನಡುರಾತ್ರಿ ಪೊಲೀಸ್ ದಾಳಿ, ಸೋದರಳಿಯನ ನೆರವಿಗೆ ಮಮತಾ ಬ್ಯಾನರ್ಜಿ ದೌಡು

■ ದೀದಿಗೆ ಉರುಳಾಗಲಿದೆಯೇ 635 ಕೋಟಿ ರೂ.ಗಳ ಜಾಹೀರಾತು ಹಗರಣ?

ಕಾಳಿಘಾಟ್ ನಿವಾಸದಲ್ಲಿ ಶೋಧ ಕಾರ್ಯಾಚರಣೆಗೆ ಆಗಮಿಸಿದ ಪೊಲೀಸರು, ಪದೇ ಪದೇ ಕರೆಯ ಹೊರತಾಗಿಯೂ ಬಾಗಿಲು ತೆರೆಯದೇ ಹೋದಾಗ ಬಾಗಿಲು ಮುರಿದು ಮನೆ ಪ್ರವೇಶಿಸಿದರು. ಭದ್ರತಾ ಸಿಬ್ಬಂದಿ ಜತೆಗೂಡಿ ಮನೆಯಲ್ಲಿ ಪರಿಶೀಲನೆ ನಡೆಸಿದರು. ಸೋದರಳಿಯನ ನಿವಾಸದ ಮೇಲಿನ ದಾಳಿ ಸುದ್ದಿ ತಿಳಿದು ಕಾಳಿಘಾಟ್ ನಿವಾಸಕ್ಕೆ ಮಾಜಿ ಸಿಎಂ ಮಮತಾ ಬ್ಯಾನರ್ಜಿ ದೌಡಾಯಿಸಿದರು. ಭದ್ರತಾ ಸಿಬ್ಬಂದಿ ಹಾಗೂ ಪೊಲೀಸರ ಜತೆ ವಾಗ್ವಾದ ನಡೆಸುತ್ತಲೇ ಅಭಿಷೇಕ್ ಮನೆ ಪ್ರವೇಶಿಸಿದರು. ಪೊಲೀಸರ ಕಾರ್ಯಾಚರಣೆ ಪೂರ್ಣಗೊಳ್ಳುವ ತನಕ ಮನೆಯಲ್ಲೇ ಕುಳಿತರು. ಶೋಧ ಕಾರ್ಯ ಮುಗಿಸಿ ತನಿಖಾಧಿಕಾರಿಗಳು ತೆರಳಿದ ಬಳಿಕ ಮಮತಾ ಸಹ ನಿರ್ಗಮಿಸಿದರು.

ದೀದಿಗೆ ಮತ್ತೊಂದು ತನಿಖೆ ಬಿಸಿ : ಟಿಎಂಸಿ ಆಡಳಿತ ಅವಧಿಯಲ್ಲಿ ಜಾಹೀರಾತು ಕಂಪನಿಗಳಿಗೆ ನೀಡಲಾದ 635 ಕೋಟಿ ರೂ.ಗಳ ಹಗರಣದ ಕುರಿತು ಪಶ್ಚಿಮ ಬಂಗಾಳದ ಬಿಜೆಪಿ ಸರಕಾರ ತನಿಖೆಗೆ ಆದೇಶಿಸಿದೆ. ಮಮತಾ ಬ್ಯಾನರ್ಜಿ ಆಪ್ತ ಹಾಗೂ ಉದ್ಯಮಿ ಉಜ್ವಲ್ ಸಿನ್ಹಾ ಅವರಿಗೆ ಸೇರಿದ ಜಾಹೀರಾತು ಕಂಪನಿಗೆ ಕಾನೂನು ಬಾಹಿರವಾಗಿ ಬೃಹತ್ ಮೊತ್ತದ ಜಾಹೀರಾತು ಹಣವನ್ನು ನೀಡಲಾಗಿದೆ ಎಂದು ಆರೋಪಿಸಲಾಗಿದೆ. ಸಾರ್ವಜನಿಕ ಹಣ ದುರ್ಬಳಕೆ ಮಾಡಿಕೊಂಡ ಆರೋಪದ ಮೇಲೆ ಕೋಲ್ಕತಾ ಮೂಲದ ಜಾಹೀರಾತು ಕಂಪನಿ ವಿರುದ್ಧ ತನಿಖೆಗೆ ಆದೇಶಿಸಲಾಗಿದೆ.

ಬಂಡಾಯ ಗುಂಪಿಗೆ ಬಂಡೋಪಾಧ್ಯಾಯ: ತೃಣಮೂಲ ಕಾಂಗ್ರೆಸ್ ಪಕ್ಷದ ಆಂತರಿಕ ಬೇಗುದಿ ಮುಂದುವರಿದಿದೆ. ಮಾಜಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಆಪ್ತ ವಲಯದಲ್ಲಿ ಗುರುತಿಸಿಕೊಂಡಿದ್ದ ಮತ್ತೊಬ್ಬ ಸಂಸದ ಸುದೀಪ್ ಬಂಡೋಪಾಧ್ಯಾಯ ಅವರು ಶನಿವಾರ ಬಂಡಾಯ ಗುಂಪು ಸೇರಿದ್ದಾರೆ. ಹೊಸದಿಲ್ಲಿಯಲ್ಲಿ ಟಿಎಂಸಿ ಬಂಡಾಯ ಸಂಸದೆ ಶತಾಬ್ದಿ ರಾಯ್ ಅವರೊಂದಿಗೆ ಕೇಂದ್ರ ಸಚಿವ ಭೂಪೇಂದ್ರ ಯಾದವ್ ಭೇಟಿಯಾದ ಬಂಡೋಪಾಧ್ಯಾಯ ಪ್ರಸಕ್ತ ರಾಜಕೀಯ ವಿದ್ಯಮಾನ ಕುರಿತು ಮಾತುಕತೆ ನಡೆಸಿದರು.

ಅಭಿಷೇಕ್ ಪರ ನಿಂತ ಕಲ್ಯಾಣ್

''ನಿಷ್ಠಾವಂತರಾದ ನಾವು ಬೇಕೋ, ಸೋದರಳಿಯ ಅಭಿಷೇಕ್ ಬ್ಯಾನರ್ಜಿ ಬೇಕೋ ಎಂಬುದನ್ನು ನೀವೇ ನಿರ್ಧರಿಸಿ,'' ಎಂದು ಮಮತಾ ಬ್ಯಾನರ್ಜಿಗೆ ಸವಾಲು ಹಾಕಿದ್ದ ಸಂಸದ ಕಲ್ಯಾಣ್ ಬ್ಯಾನರ್ಜಿ ಉಲ್ಟಾ ಹೊಡೆದಿದ್ದಾರೆ. ''ಅಭಿಷೇಕ್ ನನ್ನ ಮಗನ ಸಮಾನ. ಒಬ್ಬ ತಂದೆಯಾಗಿ ಮಗ ಮಾಡಿದ ತಪ್ಪನ್ನು ಕ್ಷಮಿಸಬೇಕು. ಅತ್ಯುತ್ಸಾಹದಲ್ಲಿ ಕೆಲವೊಂದು ತಪ್ಪು ಮಾಡಿದ್ದಾರೆ. ಹಿರಿಯರಾಗಿ ಕ್ಷಮಿಸುವುದು ನಮ್ಮ ಕರ್ತವ್ಯ,'' ಎಂದು ಕಲ್ಯಾಣ್ ಬ್ಯಾನರ್ಜಿ ಹೇಳಿದ್ದಾರೆ. ಇದೇ ವೇಳೆ ಮಮತಾ ಬ್ಯಾನರ್ಜಿ ನಮ್ಮ ನಾಯಕಿ ಎಂದು ಹೇಳಿದ್ದು, ಬಂಡಾಯ ಸಂಸದರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಮದನ್ ನಿವಾಸದ ಮೇಲೆ ಇ.ಡಿ ದಾಳಿ, ಹಾಸಿಗೆ ಅಡಿಯಲ್ಲಿ ಹಣ

ಪುರಸಭೆ ಸಿಬ್ಬಂದಿ ನೇಮಕಾತಿ ಹಗರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಟಿಎಂಸಿ ಹಾಗೂ ಮಮತಾ ಬ್ಯಾನರ್ಜಿ ಆಪ್ತರಾದ ಶಾಸಕ ಮದನ್ ಮಿತ್ರಾ ಅವರಿಗೆ ಸೇರಿದ ಆಸ್ತಿಗಳ ಮೇಲೆ ಇ.ಡಿ ಶನಿವಾರ ದಾಳಿ ನಡೆಸಿದೆ. ಒಟ್ಟು ಏಳು ಸ್ಥಳಗಳ ಮೇಲೆ ಇ.ಡಿ ಶೋಧ ಕಾರ್ಯಾಚರಣೆ ನಡೆಸಿದೆ.ಈ ವೇಳೆ ಹಾಸಿಗೆಯ ಅಡಿಯಲ್ಲಿ ಅಪಾರ ಪ್ರಮಾಣದ ಹಣ ಹಾಗೂ ಚಿನ್ನ ದೊರೆತಿದೆ ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ.

ಫ್ರಾನ್ಸ್, ಸ್ಲೋವಾಕಿಯಾಗೆ ಮೋದಿ

ಹೊಸದಿಲ್ಲಿ: ಐದು ದಿನಗಳ ಫ್ರಾನ್ಸ್ ಹಾಗೂ ಸ್ಲೋವಾಕಿಯಾ ಪ್ರವಾಸದ ಅಂಗವಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ಫ್ರೆಂಚ್ ಬಂದರು ನಗರಿ ನೈಸ್ ತಲುಪಿದರು.

ಉಭಯ ದೇಶಗಳ ಪ್ರವಾಸದಲ್ಲಿ ರಕ್ಷಣೆ, ಭದ್ರತೆ ಕ್ಷೇತ್ರದಲ್ಲಿ ಸಹಕಾರ, ವಾಣಿಜ್ಯ ಸಂಬಂಧ ವೃದ್ಧಿ, ಪರಸ್ಪರ ತಂತ್ರಜ್ಞಾನ ನೆರವು ಸೇರಿದಂತೆ ಹಲವು ವಿಷಯವಾಗಿ ಮಾತುಕತೆ ನಡೆಸಲಿದ್ದಾರೆ. ಎರಡು ದೇಶಗಳ ಜತೆ ದ್ವಿಪಕ್ಷೀಯ ಬಾಂಧವ್ಯ ಕುರಿತ ಮಾತುಕತೆ ನಡೆಸಲಿದ್ದಾರೆ.

ಶನಿವಾರ ನೈಸ್ ನಗರ ತಲುಪಿರುವ ಪ್ರಧಾನಿ ಮೋದಿ ಅವರು ಭಾನುವಾರ (ಜೂನ್ 14) ಫ್ರಾನ್ಸ್ ಅಧ್ಯಕ್ಷ ಇಮ್ಯಾನ್ಯುಯಲ್ ಮ್ಯಾಕ್ರನ್ ಜತೆ ದ್ವಿಪಕ್ಷೀಯ ಮಾತುಕತೆ ನಡೆಸಲಿದ್ದಾರೆ. ಉಭಯ ದೇಶಗಳ ನಡುವಿನ ವಿಶೇಷ ಜಾಗತಿಕ ಕಾರ್ಯತಂತ್ರ ಪಾಲುದಾರಿಕೆ ನೀತಿಯ ಪ್ರಗತಿಯನ್ನು ಪರಿಶೀಲಿಸಲಿದ್ದಾರೆ.

ಭಾನುವಾರ ನೈಸ್‌ನಲ್ಲಿ ಆಯೋಜಿಸಿರುವ 'ಭಾರತ್ ಇನೋವೇಟ್ಸ್' ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ. ಭಾರತದ ಸ್ಟಾರ್ಟ್‌ಅಪ್‌ಗಳಲ್ಲಿ ಹೂಡಿಕೆ ಉತ್ತೇಜನ, ಉನ್ನತ ಶಿಕ್ಷಣ ವ್ಯವಸ್ಥೆಯಲ್ಲಿ ನಾವೀನ್ಯ ತಂತ್ರಜ್ಞಾನ ಅಳವಡಿಕೆಗೆ ಉತ್ತೇಜನ ನೀಡುವ ಉದ್ದೇಶದಿಂದ ಕಾರ್ಯಕ್ರಮ ಆಯೋಜಿಸಲಾಗಿದೆ.

ಜೂನ್ 14 ರಂದು ಸ್ಲೋವಾಕಿಯಾಗೆ ತೆರಳಲಿರುವ ಮೋದಿ ಅವರು, ಎರಡು ದಿನಗಳ ಪ್ರವಾಸದಲ್ಲಿ ಅಧ್ಯಕ್ಷ ಪೀಟರ್ ಪೆಲ್ಲೆಗ್ರಿನಿ, ಪ್ರಧಾನಿ ರಾಬರ್ಟ್ ಫಿಕೊ ಅವರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಲಿದ್ದಾರೆ. ರಕ್ಷಣೆ, ವ್ಯಾಪಾರ ಒಪ್ಪಂದ, ಕಾರ್ಯತಂತ್ರ ಪಾಲುದಾರಿಕೆ ಸಂಬಂಧ ವೃದ್ಧಿ ಕುರಿತು ಚರ್ಚಿಸಲಿದ್ದಾರೆ.

ಜಿ7 ಶೃಂಗದಲ್ಲಿ ಭಾಗಿ: ಜೂನ್ 16 ರಂದು ಮರಳಿ ಫ್ರಾನ್ಸ್‌ಗೆ ಆಗಮಿಸಲಿರುವ ಮೋದಿ ಅವರು ನೈಸ್ ನಗರದಲ್ಲಿ ನಡೆಯಲಿರುವ ಜಿ7 ಶೃಂಗಸಭೆಯಲ್ಲಿ ಭಾಗಿಯಾಗಲಿದ್ದಾರೆ. ಜಾಗತಿಕ ದಕ್ಷಿಣದ ದೇಶಗಳ ಆಕಾಂಕ್ಷೆಗಳ ಧ್ವನಿಯಾಗಿ ಮೋದಿ ಮಾತನಾಡಲಿದ್ದಾರೆ.

ಜಾಗತಿಕ ಆರ್ಥಿಕ ಅಸಮತೋಲನ ನಿವಾರಣೆ, ಅಂತಾರಾಷ್ಟ್ರೀಯ ಸಂಬಂಧಗಳ ನವೀಕರಣ, ನಿರ್ಣಾಯಕ ಖನಿಜ ಪೂರೈಕೆ ಸರಪಳಿಗೆ ಬಲ, ಭೌಗೋಳಿಕ ರಾಜಕೀಯ ಬಿಕ್ಕಟ್ಟಿಗೆ ಪರಿಹಾರ, ಡ್ರಗ್ಸ್, ಸಂಘಟಿತ ಅಪರಾಧಗಳ ನಿಯಂತ್ರಣ, ಉಗ್ರ ಸಂಘಟನೆಗಳಿಗೆ ಹಣದ ಹರಿವು ನಿಗ್ರಹ, ಆನ್‌ಲೈನ್ ಗೀಳಿನಿಂದ ಅಪ್ರಾಪ್ತರ ರಕ್ಷಣೆ ಈ ಸಲದ ಜಿ7 ಶೃಂಗದ ಕಾರ್ಯಸೂಚಿಗಳಾಗಿವೆ.

ಸೇನೆಯ ನೂತನ ಮುಖ್ಯಸ್ಥರಾಗಿ ಲೆ.ಜನರಲ್ ಧೀರಜ್ ಸೇಠ್ ನೇಮಕ

ಹೊಸದಿಲ್ಲಿ: ನೂತನ ಸೇನಾ ಮುಖ್ಯಸ್ಥರಾಗಿ ಲೆಫ್ಟಿನೆಂಟ್ ಜನರಲ್ ಧೀರಜ್ ಸೇಠ್ ನೇಮಕಗೊಂಡಿದ್ದಾರೆ. ಹಾಲಿ ಸೇನಾ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ಅವರು ಜೂನ್ 30 ರಂದು ನಿವೃತ್ತಿ ಹೊಂದಲಿದ್ದು, ಅವರ ಸ್ಥಾನವನ್ನು ಧೀರಜ್ ತುಂಬಲಿದ್ದಾರೆ. ಭೂಸೇನೆಯ ನೂತನ ಮುಖ್ಯಸ್ಥರ ನೇಮಕಾತಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಅಂಕಿತ ಹಾಕಿದ್ದು, 2028ರ ಆಗಸ್ಟ್ 31ರವರೆಗೆ ಸೇನಾ ಮುಖ್ಯಸ್ಥರಾಗಿ ಸೇವೆ ಸಲ್ಲಿಸಲಿದ್ದಾರೆ.

ಲೆಫ್ಟಿನೆಂಟ್ ಜನರಲ್ ಧೀರಜ್ ಸೇಠ್ ಅವರು ಭಾರತೀಯ ಸೇನೆಯಲ್ಲಿ ಸುದೀರ್ಘ ಅನುಭವದ ಹಿನ್ನೆಲೆ ಹೊಂದಿದ್ದಾರೆ. ಸದ್ಯ ವೈಸ್ ಚೀಫ್ ಆಗಿರುವ ಅವರು, ಇದಕ್ಕೂ ಮುನ್ನ ಸೇನೆಯ ಅತ್ಯಂತ ಪ್ರಮುಖ ಕಾರ್ಯಾಚರಣೆಯ ವಿಭಾಗವಾದ 'ಸದರ್ನ್ ಕಮಾಂಡ್'ನ ಮುಖ್ಯಸ್ಥರಾಗಿದ್ದರು.

'ಆಪರೇಷನ್ ಸಿಂದೂರ'ದಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಇವರು, ಭಾರತದ ಪಶ್ಚಿಮ ಗಡಿಯಲ್ಲಿ ನಡೆದ ಮೂರು ಸೇನಾಪಡೆಗಳ ಜಂಟಿ ಸಮರಾಭ್ಯಾಸಗಳ ಉಸ್ತುವಾರಿಯನ್ನು ಯಶಸ್ವಿಯಾಗಿ ನಿಭಾಯಿಸಿದ್ದರು. ಭೂಸೇನೆಯ ಆರ್ಮರ್ಡ್ ಕಾರ್ಪ್ಸ್ (ಕವಚ ಪಡೆ) ವಿಭಾಗದ ಅಧಿಕಾರಿಯಾಗಿರುವ ಧೀರಜ್ ಅವರು, ನ್ಯಾಷನಲ್ ಡಿಫೆನ್ಸ್ ಅಕಾಡೆಮಿಯಲ್ಲಿ ಪದವಿ ಮುಗಿಸಿ 1986ರಲ್ಲಿ ಭಾರತೀಯ ಸೇನೆಗೆ ಸೇರ್ಪಡೆಯಾದರು. ಜಮ್ಮು ಮತ್ತು ಕಾಶ್ಮೀರದ ಭಯೋತ್ಪಾದನಾ ನಿಗ್ರಹ ಕಾರ್ಯಾಚರಣೆ ನೇತೃತ್ವ ವಹಿಸಿದ ಅನುಭವ ಇವರದ್ದಾಗಿದೆ.



18 ವರ್ಷ ಮೇಲ್ಪಟ್ಟವರಿಗೆ ಆಧಾರ್ ಇಲ್ಲ: ಅಸ್ಸಾಂ ಸಿಎಂ ಹಿಮಂತ ನಿರ್ಧಾರ

ಗುವಾಹಟಿ: ರಾಜ್ಯದಲ್ಲಿ 18 ವರ್ಷ ಮೇಲ್ಪಟ್ಟವರಿಗೆ ಹೊಸದಾಗಿ ಆಧಾರ್ ಕಾರ್ಡ್‌ಗಳನ್ನು ವಿತರಿಸದಂತೆ ನಿರ್ಬಂಧ ವಿಧಿಸಲು ಸಿಎಂ ಹಿಮಂತ ಬಿಸ್ವಾ ಶರ್ಮಾ ನೇತೃತ್ವದ ಸಂಪುಟ ಸಮಿತಿ ನಿರ್ಧರಿಸಿದೆ. ಬಾಂಗ್ಲಾ ಅಕ್ರಮ ವಲಸಿಗರು ಆಧಾರ್ ಕಾರ್ಡ್‌ಗಳನ್ನು ಪಡೆಯದಂತೆ ತಡೆಯುವ ನಿಟ್ಟಿನಲ್ಲಿ ಈ ನಿರ್ಧಾರ ಕೈಗೊಂಡಿರುವುದಾಗಿ ಸಿಎಂ ಶರ್ಮಾ ತಿಳಿಸಿದ್ದಾರೆ.

''18 ವರ್ಷ ಮೇಲ್ಪಟ್ಟವರಿಗೆ ಆಧಾರ್ ನೀಡಲೇಬೇಕಾದ ವಿಶಿಷ್ಟ ಪ್ರಕರಣ ಇದ್ದರೆ, ಅಂಥ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳು ರಾಜ್ಯ ಸರಕಾರಕ್ಕೆ ಪ್ರಸ್ತಾವ ಸಲ್ಲಿಸಿ ಆಧಾರ್ ಕಾರ್ಡ್ ಒದಗಿಸಲು ಅನುಮತಿ ಪಡೆಯಬೇಕು. ಅರ್ಜಿದಾರರು ಆಧಾರ್ ಪಡೆಯಲು ಅರ್ಹರೋ, ಅಲ್ಲವೋ ಎಂಬುದನ್ನು ಸರಕಾರವೇ ನಿರ್ಧರಿಸಲಿದೆ,'' ಎಂದು ಪತ್ರಿಕಾಗೋಷ್ಠಿಯಲ್ಲಿ ಶರ್ಮಾ ಹೇಳಿದ್ದಾರೆ.

''ರಾಜ್ಯದಲ್ಲಿ ಆಧಾರ್ ಕಾರ್ಡ್ ವಿತರಣೆ ಅತೀವವಾಗಿದ್ದು, ಹಲವು ಜಿಲ್ಲೆಗಳಲ್ಲಿ ಶೇ.100ರಷ್ಟು ಮಂದಿಗೆ ಕಾರ್ಡ್‌ಗಳು ವಿತರಣೆಯಾಗಿವೆ. ಹೆಚ್ಚುವರಿಯಾಗಿ ಆಧಾರ್ ಪಡೆಯುತ್ತಿರುವವರು ಯಾರು ಎಂಬುದನ್ನು ನಾವು ಪತ್ತೆಹಚ್ಚಬೇಕಿದೆ,'' ಎಂದೂ ಅವರು ಹೇಳಿದ್ದಾರೆ.

''ಚಹಾ ತೋಟಗಳಲ್ಲಿನ ಕಾರ್ಮಿಕರ ಸಮುದಾಯದ ಹಾಗೂ ಪರಿಶಿಷ್ಟ ಪಂಗಡದ ಹಲವು ಮಂದಿ ಇನ್ನೂ ಆಧಾರ್ ಪಡೆದಿಲ್ಲದ ಕಾರಣ ಅವರಿಗೆ ಆಧಾರ್ ಕಾರ್ಡ್‌ಗಳನ್ನು ವಿತರಿಸುವುದನ್ನು ಮುಂದುವರಿಸಲಾಗುತ್ತದೆ. ಆದರೆ, 2027ರ ಏಪ್ರಿಲ್ 1ರ ಬಳಿಕ ಈ ಸಮುದಾಯಗಳಲ್ಲಿನ 18 ವರ್ಷ ಮೇಲ್ಪಟ್ಟವರಿಗೂ ಆಧಾರ್ ವಿತರಣೆಯನ್ನು ನಿರ್ಬಂಧಿಸಲಾಗುತ್ತದೆ,'' ಎಂದು ಶರ್ಮಾ ವಿವರಿಸಿದ್ದಾರೆ.

ಡಿಆರ್‌ಡಿಒದ ಪ್ರತಿಬಂಧಕ ಕ್ಷಿಪಣಿಗಳ ಪರೀಕ್ಷೆ ಯಶಸ್ವಿ

ಹೊಸದಿಲ್ಲಿ: ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ಅಭಿವೃದ್ಧಿಪಡಿಸಿರುವ ಪ್ರತಿಬಂಧಕ ಕ್ಷಿಪಣಿಗಳ ಮೂರು ಉಡಾವಣಾ ಪರೀಕ್ಷೆಗಳು ಯಶಸ್ವಿಯಾಗಿವೆ. ಇದರಿಂದ ವಾಯು ಮತ್ತು ಸಮುದ್ರ ಮಾರ್ಗದ ಬೆದರಿಕೆಗಳನ್ನು ಎದುರಿಸುವ ಭಾರತದ ಸಾಮರ್ಥ್ಯ ಮತ್ತಷ್ಟು ಹೆಚ್ಚಿದೆ.

ಎರಡು ದಿನಗಳಲ್ಲಿ ಮೂರು ಕ್ಷಿಪಣಿಗಳ ಯಶಸ್ಸಿನ ಸಾಧನೆ

ಡಿಆರ್‌ಡಿಒ ಈ ಪರೀಕ್ಷೆಗಳ ಮೂಲಕ ದೂರಗಾಮಿ ಖಂಡಾಂತರ ಕ್ಷಿಪಣಿಗಳ ವಿರುದ್ಧದ ಬಹು ಪದರದ ರಕ್ಷಣಾ ವ್ಯವಸ್ಥೆ ಮತ್ತು ಮಧ್ಯಮ ಶ್ರೇಣಿಯ ಹಡಗು ವಿರೋಧಿ ಸಾಮರ್ಥ್ಯವನ್ನು ಪ್ರದರ್ಶಿಸಿದೆ. ಪ್ರತಿಬಂಧಕ ಕ್ಷಿಪಣಿಗಳು ಎದುರಾಳಿಗಳ ಕ್ಷಿಪಣಿಗಳನ್ನು ಗುರುತಿಸಿ ಅವು ಗುರಿ ತಲುಪುವ ಮೊದಲೇ ನಾಶಪಡಿಸುವ ಸಾಮರ್ಥ್ಯ ಹೊಂದಿವೆ. ಕ್ಷಿಪಣಿಗಳ ಬೆದರಿಕೆಗಳನ್ನು ಎದುರಿಸಲು ಹೊಸ ತಂತ್ರಜ್ಞಾನದೊಂದಿಗೆ ಇವುಗಳನ್ನು ಅಭಿವೃದ್ಧಿಪಡಿಸಲಾಗಿದೆ. ಮಧ್ಯಮ ಶ್ರೇಣಿಯ ನೌಕಾ ವಿರೋಧಿ ಕ್ಷಿಪಣಿಯ ಚೊಚ್ಚಲ ಪರೀಕ್ಷೆಯೂ ಯಶಸ್ವಿಯಾಗಿದ್ದು, ಸಮುದ್ರದಲ್ಲಿನ ಶತ್ರುಗಳ ಬೆದರಿಕೆಗಳನ್ನು ಹತ್ತಿಕ್ಕಲು ಇದು ಸಹಕಾರಿಯಾಗಿವೆ.

ಈ ಪರೀಕ್ಷೆಗಳ ಯಶಸ್ಸಿನೊಂದಿಗೆ ಖಂಡಾಂತರ ಕ್ಷಿಪಣಿಗಳನ್ನು ಎದುರಿಸಬಲ್ಲ ಸಾಮರ್ಥ್ಯವಿರುವ ವಿಶ್ವದ ಪ್ರಮುಖ ರಾಷ್ಟ್ರಗಳ ಪಟ್ಟಿಗೆ ಭಾರತ ಸೇರಿದೆ. ಅಮೆರಿಕ, ರಷ್ಯಾ, ಚೀನಾ, ಇಸ್ರೇಲ್ ಇಂತಹ ಸ್ವದೇಶಿ ಖಂಡಾಂತರ ಕ್ಷಿಪಣಿ ರಕ್ಷಣೆ (ಬಿಎಂಡಿ) ವ್ಯವಸ್ಥೆ ಹೊಂದಿರುವ ಇತರ ದೇಶಗಳಾಗಿವೆ.

> ಡಿಆರ್‌ಡಿಒ ಸಾಧನೆಯು ದೇಶದ ರಕ್ಷಣಾ ಸನ್ನದ್ಧತೆಗೆ ಸಿಕ್ಕ ದೊಡ್ಡ ಉತ್ತೇಜನವಾಗಿದೆ. ಈ ಇಂಟರ್‌ಸೆಪ್ಟರ್ ಕ್ಷಿಪಣಿಗಳು ನಿಗದಿತ ಗುರಿಗಳನ್ನು ಯಶಸ್ವಿಯಾಗಿ ತಲುಪಿವೆ. ಆ ಮೂಲಕ ದೇಶದ ರಕ್ಷಣಾ ಕೋಟೆಯನ್ನು ಮತ್ತಷ್ಟು ಭದ್ರಪಡಿಸಿವೆ.
>
> - **ರಾಜನಾಥ್ ಸಿಂಗ್** ರಕ್ಷಣಾ ಸಚಿವ

ಬ್ರೆಂಟ್ ಕಚ್ಚಾ ತೈಲದ ಬೆಲೆ ದಾಖಲೆ ಇಳಿಕೆ

ವಾಷಿಂಗ್ಟನ್: ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಶನಿವಾರ ಬ್ರೆಂಟ್ ಕಚ್ಚಾ ತೈಲ ಬೆಲೆ ಬ್ಯಾರೆಲ್‌ಗೆ ಇಳಿಕೆಯಾಗಿ 82.25 ಡಾಲರ್ ಆಗಿದೆ.

ಫೆಬ್ರವರಿ 28 ರಂದು ಅಮೆರಿಕ ಮತ್ತು ಇಸ್ರೇಲ್ ಇರಾನ್ ಮೇಲೆ ದಾಳಿ ಮಾಡಿದ ನಂತರ ಕಚ್ಚಾ ತೈಲದ ಬೆಲೆ ಶೇ.20ಕ್ಕಿಂತ ಹೆಚ್ಚು ಹೆಚ್ಚಿದ್ದರೂ, ಈ ವಾರ ಸುಮಾರು ಶೇ.6ರಷ್ಟು ಕುಸಿತ ಉಂಟಾಗಿದೆ. ಅಮೆರಿಕ ಮತ್ತು ಇರಾನ್ ಶಾಂತಿ ಒಪ್ಪಂದಕ್ಕೆ ಸಹಿ ಹಾಕುವ ಸಾಧ್ಯತೆ ಹಿನ್ನೆಲೆಯಲ್ಲಿ ಬೆಲೆ ಇಳಿಕೆಯಾಗಿದೆ.

ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ., ಮಾಚೇನಹಳ್ಳಿ, ನಿದಿಗೆ (ಅಂಚೆ), ಶಿವಮೊಗ್ಗ-577 222

ನಂದಿನಿ

ದೂರವಾಣಿ: 08182-246161, 246162
E-mail: md_shimul@yahoo.com, shimuladmn@gmail.com Website: www.shimul.coop
ಸಂಖ್ಯೆ.ಶಿಮುಲ್/ಆಡಳಿತ-1/ನೇ.ನೇ-370/1612/2026-27 ದಿನಾಂಕ: 12.06.2026

ಪರಿಷ್ಕೃತ ನೇಮಕಾತಿ ಪ್ರಕಟಣೆ

ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ., (ಶಿಮುಲ್) ಶಿವಮೊಗ್ಗ ಇದರಲ್ಲಿ ಖಾಲಿ ಇರುವ ವಿವಿಧ ವೃಂದಗಳಲ್ಲಿನ ಒಟ್ಟು 194 ಹುದ್ದೆಗಳ ನೇಮಕಾತಿಗಾಗಿ ಅರ್ಜಿ ಆಹ್ವಾನಿಸಿ ಹೊರಡಿಸಲಾಗಿರುವ ನೇಮಕಾತಿ ಪ್ರಕಟಣೆ ಸಂಖ್ಯೆ.ಶಿಮುಲ್/ಆಡಳಿತ-1/ನೇ.ನೇ-370/4438/2025-26 ದಿನಾಂಕ: 14.11.2025 ಮತ್ತು ಕಾಲಾವಧಿ ವಿಸ್ತರಣೆ ಸಂಖ್ಯೆ.ಶಿಮುಲ್/ಆಡಳಿತ-1/ನೇ.ನೇ-370/6198/2025-26 ದಿನಾಂಕ: 05.02.2026 ಗಳನ್ನು ಸರ್ಕಾರದ ಆದೇಶ ದಿನಾಂಕ: 27.04.2026 ಮತ್ತು 08.05.2026 ರನ್ವಯ ಹಿಂಪಡೆದು ಈ ಕೆಳಕಂಡಂತೆ ಪರಿಷ್ಕೃತ ನೇಮಕಾತಿ ಪ್ರಕಟಣೆ ಹೊರಡಿಸಲಾಗಿದೆ.

ಜಾರಿಯಲ್ಲಿರುವ ಸರ್ಕಾರದ ಆದೇಶದನ್ವಯ ರೋಸ್ಟರ್ ಬಿಂದು ಮತ್ತು ಒಳ ಮೀಸಲಾತಿಯನ್ನು ಅಳವಡಿಸಿಕೊಂಡು ಒಕ್ಕೂಟದಲ್ಲಿ ಖಾಲಿ ಇರುವ ಈ ಕೆಳಕಂಡ ವಿವಿಧ ವೃಂದಗಳಲ್ಲಿನ ಒಟ್ಟು 194 ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆನ್‌ಲೈನ್ ಮುಖಾಂತರ ಆಹ್ವಾನಿಸಲಾಗಿದೆ.

ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ. ಸಿಒ 147 ಸಿಸಿಬಿ 2022 ಬೆಂಗಳೂರು ದಿನಾಂಕ: 12.10.2022 ರಲ್ಲಿ ಅನುಮೋದಿಸಿದಂತೆ ನೇಮಕಾತಿಗೆ ಸಂಬಂಧಿಸಿದ ಮೀಸಲಾತಿ ವರ್ಗೀಕರಣ, ಒಳ ಮೀಸಲಾತಿ, ವಿದ್ಯಾರ್ಹತೆ ಮತ್ತು ಅನುಭವ, ವಯೋಮಿತಿ, ಅರ್ಜಿ ಶುಲ್ಕ, ಆಯ್ಕೆ ವಿಧಾನ, ಅರ್ಜಿ ನಮೂನೆ, ಸಲ್ಲಿಸಬೇಕಾದ ದಾಖಲೆಗಳು ಮತ್ತು ಅರ್ಜಿ ಸಲ್ಲಿಸುವ ವಿಧಾನ ಇತ್ಯಾದಿ ಹೆಚ್ಚಿನ ಎಲ್ಲಾ ವಿವರಗಳನ್ನು ಒಕ್ಕೂಟದ ಅಧಿಕೃತ ವೆಬ್‌ಸೈಟ್ www.shimul.coop ರಲ್ಲಿ ನೀಡಲಾಗಿದೆ. ಹುದ್ದೆಗಳ ವಿವರ ಈ ಕೆಳಕಂಡಂತಿರುತ್ತದೆ.

ಕ್ರ.ಸಂ.	ಭರ್ತಿ ಮಾಡಲಿರುವ ಹುದ್ದೆಗಳ ವಿವರ	ವೇತನ ಶ್ರೇಣಿ (ರೂ. ಗಳಲ್ಲಿ)	ಹುದ್ದೆಗಳ ಸಂಖ್ಯೆ
1	ಸಹಾಯಕ ವ್ಯವಸ್ಥಾಪಕರು (ಎಹೆಚ್/ಎಐ)	83700-155200	17
2	ಸಹಾಯಕ ವ್ಯವಸ್ಥಾಪಕರು (ಆಡಳಿತ)	83700-155200	01
3	ಸಹಾಯಕ ವ್ಯವಸ್ಥಾಪಕರು (ಎಫ್ ಅಂಡ್ ಎಫ್)	83700-155200	03
4	ಎಂಐಎಸ್ / ಸಿಸ್ಟಂ ಆಫೀಸರ್	69250-134200	01
5	ಮಾರುಕಟ್ಟೆ ಅಧಿಕಾರಿ	69250-134200	02
6	ತಾಂತ್ರಿಕ ಅಧಿಕಾರಿ (ಅಭಿಯಂತರ)	69250-134200	02
7	ತಾಂತ್ರಿಕ ಅಧಿಕಾರಿ (ಗುಣನಿಯಂತ್ರಣ)	69250-134200	02
8	ತಾಂತ್ರಿಕ ಅಧಿಕಾರಿ (ಡಿಟಿ)	69250-134200	14
9	ಕೆಮಿಸ್ಟ್ ದರ್ಜೆ-1	54175-99400	04
10	ವಿಸ್ತರಣಾಧಿಕಾರಿ ದರ್ಜೆ-3	54175-99400	17
11	ಆಡಳಿತ ಸಹಾಯಕ ದರ್ಜೆ-2	44425-83700	17
12	ಲೆಕ್ಕ ಸಹಾಯಕ ದರ್ಜೆ-2	44425-83700	12
13	ಮಾರುಕಟ್ಟೆ ಸಹಾಯಕ ದರ್ಜೆ-2	44425-83700	10
14	ಕೆಮಿಸ್ಟ್ ದರ್ಜೆ-2	44425-83700	28
15	ಕಿರಿಯ ಸಿಸ್ಟಂ ಆಪರೇಟರ್	44425-83700	13
16	ಶೀಘ್ರಲಿಪಿಗಾರರು ದರ್ಜೆ-2	44425-83700	01
17	ಕಿರಿಯ ತಾಂತ್ರಿಕರು	34100-67600	50
	ಒಟ್ಟು ಹುದ್ದೆಗಳ ಸಂಖ್ಯೆ		194

ಆನ್‌ಲೈನ್ ಮುಖಾಂತರ ದಿನಾಂಕ: 14.06.2026 ರಿಂದ 14.07.2026 ರವರೆಗೆ ಅರ್ಜಿ ಸಲ್ಲಿಸಬಹುದಾಗಿರುತ್ತದೆ. ಈ ಕುರಿತು ಹೆಚ್ಚಿನ ಮಾಹಿತಿಗಳು ಶಿಮುಲ್ ವೆಬ್‌ಸೈಟ್ www.shimul.coop ರಲ್ಲಿ ಲಭ್ಯವಿದ್ದು, ಆಸಕ್ತಿಯುಳ್ಳ ಅಭ್ಯರ್ಥಿಗಳು ಒಕ್ಕೂಟದ ವೆಬ್‌ಸೈಟ್‌ಗೆ ಭೇಟಿ ನೀಡಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸತಕ್ಕದ್ದು ಹಾಗೂ ನಿಗದಿತ ಅರ್ಜಿ ಶುಲ್ಕವನ್ನು ಆನ್‌ಲೈನ್ ಮುಖಾಂತರವೇ ಪಾವತಿಸತಕ್ಕದ್ದು.

ಈಗಾಗಲೇ **ದಿನಾಂಕ: 14.11.2025 ಮತ್ತು 05.02.2026 ರ ಪ್ರಕಟಣೆಗಳಡಿಯಲ್ಲಿ ಪಾವತಿಸಿರುವ ಎಲ್ಲಾ ಅಭ್ಯರ್ಥಿಗಳ ಅರ್ಜಿ ಶುಲ್ಕವನ್ನು (ಬ್ಯಾಂಕ್ ಶುಲ್ಕ ಹೊರತುಪಡಿಸಿ) ಪಾವತಿಸಲು ಬಳಸಿದ ಬ್ಯಾಂಕ್ ಖಾತೆಗಳಿಗೆ ಹಿಂದಿರುಗಿಸಲಾಗುವುದು.** ಸದರಿ ನೇಮಕಾತಿಗಾಗಿ ಅಭ್ಯರ್ಥಿಗಳು ತಮ್ಮ ಅರ್ಜಿಗಳನ್ನು ಖುದ್ದಾಗಿ/ಅಂಚೆ/ಕೋರಿಯರ್ ಮೂಲಕ ಸಲ್ಲಿಸಲು ಅವಕಾಶವಿಲ್ಲವೆಂದು ಈ ಮೂಲಕ ಸ್ಪಷ್ಟಪಡಿಸಿದೆ.

ಸಹಿ/-
ವ್ಯವಸ್ಥಾಪಕ ನಿರ್ದೇಶಕರು

ವಾಯುಪಡೆ ವಿಮಾನ ಪತನ: ಐವರು ಹುತಾತ್ಮ

ಗುವಾಹಟಿ: ಅಸ್ಸಾಂನ ಜೋಹ್ರತ್ ಬಳಿ ಭಾರತೀಯ ವಾಯುಪಡೆಗೆ ಸೇರಿದ ಎಎನ್-32 ಸಾರಿಗೆ ವಿಮಾನ ಪತನಗೊಂಡು ಪೈಲಟ್ ಸೇರಿ ಐವರು ಸಿಬ್ಬಂದಿ ಹುತಾತ್ಮರಾಗಿದ್ದಾರೆ.

ಸ್ಕ್ವಾಡ್ರನ್ ಲೀಡರ್ ಪ್ರಶಾಂತ್ ಸಿಂಗ್, ಫ್ಲೈಟ್ ಲೆಫ್ಟಿನೆಂಟ್ ಶುಭಮ್ ಕುಮಾರ್, ಸಾರ್ಜೆಂಟ್ ಜಿತೇಂದ್ರ ಶರ್ಮಾ, ಅಗ್ನಿವೀರ್ ವಾಯು ಖೇಮಾರಾಮ್ ಕುಮಾವತ್ ಹಾಗೂ ಅಗ್ನಿವೀರ್ ವಾಯು ಡ್ಯಾನಿಶ್ ಆಲಂ ಅವರುಗಳು ದುರಂತದಲ್ಲಿ ಹುತಾತ್ಮರಾಗಿದ್ದಾರೆ ಎಂದು ವಾಯುಪಡೆ ತಿಳಿಸಿದೆ.

ಶನಿವಾರ ಬೆಳಗ್ಗೆ ಜೋಹ್ರತ್‌ನ ರೌರಿಯಾ ವಾಯುನೆಲೆಯಿಂದ ಹೊರಟಿದ್ದ ಎಎನ್-32 ವಿಮಾನ, ತರಬೇತಿ ಕಾರ್ಯಕ್ರಮದ ಬಳಿಕ ಲ್ಯಾಂಡಿಂಗ್ ವೇಳೆ ದುರಂತಕ್ಕೀಡಾಗಿದೆ. ರನ್ ವೇನಲ್ಲಿ ಇಳಿಯುತ್ತಿದ್ದ ವೇಳೆ ನಿಯಂತ್ರಣ ತಪ್ಪಿದ ವಿಮಾನ ಪತನಗೊಂಡಿದೆ. ಬಿದ್ದ ರಭಸಕ್ಕೆ ಕ್ಷಣಾರ್ಧದಲ್ಲಿ ಬೆಂಕಿ ಹೊತ್ತಿಕೊಂಡು ವಿಮಾನ ಭಸ್ಮವಾಗಿದೆ ಎಂದು ವಾಯುಪಡೆ ಅಧಿಕಾರಿಗಳು ತಿಳಿಸಿದ್ದಾರೆ.

ತಕ್ಷಣವೇ ನೆರವಿಗೆ ಧಾವಿಸಿದ ಅಗ್ನಿ ಶಾಮಕ ಸಿಬ್ಬಂದಿ ಬೆಂಕಿ ನಂದಿಸಲೆತ್ನಿಸಿದರು. ತುರ್ತು ರಕ್ಷಣಾ ಕಾರ್ಯಾಚರಣೆಯ ಹೊರತಾಗಿಯೂ ಸಿಬ್ಬಂದಿಯನ್ನು ರಕ್ಷಿಸಲು ಸಾಧ್ಯವಾಗಲಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಘಟನೆಯ ಕುರಿತು ಉನ್ನತ ಮಟ್ಟದ ತನಿಖೆಗೆ ಆದೇಶಿಸಲಾಗಿದೆ.

ಎಎನ್-32 ಅವಳಿ ಎಂಜಿನ್ ಹೊಂದಿದ ಮಿಲಿಟರಿ ಸಾರಿಗೆ ವಿಮಾನವಾಗಿದೆ. ಎತ್ತರದ ಮತ್ತು ದೂರದ ಪ್ರದೇಶಗಳಿಗೆ ಸಿಬ್ಬಂದಿ ಹಾಗೂ ರಕ್ಷಣಾ ಪರಿಕರಗಳ ಸಾಗಣೆಗೆ ಬಳಸಲಾಗುತ್ತಿದೆ. ವೈವಿಧ್ಯಮಯ ಭೂಪ್ರದೇಶಗಳಲ್ಲಿ ಸರಕು ಸಾಗಣೆ ಮತ್ತು ಕಾರ್ಯಾಚರಣೆಗೆ ಬೆಂಗಾವಲಾಗಿ ಬಳಕೆ ಮಾಡಲಾಗುತ್ತಿದೆ. ದೇಶದಲ್ಲಿ 1986ರಿಂದ ವಿವಿಧ ಕಾರಣಕ್ಕೆ ಎಎನ್-32 ಸರಣಿಯ 22 ವಿಮಾನಗಳು ಪತನಗೊಂಡಿವೆ. ಸರಣಿ ಅಪಘಾತದ ಹೊರತಾಗಿಯೂ ವಾಯುಪಡೆಯ ಸಾರಿಗೆ ವಿಮಾನವಾಗಿ ಬಳಕೆ ಮುಂದುವರಿಸಲಾಗಿದೆ.

ರಾಜ್‌ನಾಥ್ ಸಂತಾಪ: ಎಎನ್-32 ವಿಮಾನ ದುರಂತಕ್ಕೆ ಆಘಾತ ವ್ಯಕ್ತಪಡಿಸಿರುವ ರಕ್ಷಣಾ ಸಚಿವ ರಾಜನಾಥ್ ಸಿಂಗ್, ದುರ್ಘಟನೆಯಲ್ಲಿ ಹುತಾತ್ಮರಾದ ಸಿಬ್ಬಂದಿ ಕುಟುಂಬಕ್ಕೆ ಸಂತಾಪ ಸೂಚಿಸಿದ್ದಾರೆ. ''ದೇಶ ಸೇವೆಗೆ ಪ್ರಾಣ ಮುಡಿಪಟ್ಟ ಯೋಧರನ್ನು ದೇಶ ಸದಾ ಸ್ಮರಿಸುತ್ತದೆ. ಮೃತರ ಕುಟುಂಬದ ಜತೆ ರಾಷ್ಟ್ರ ದೃಢವಾಗಿ ನಿಲ್ಲುತ್ತದೆ,'' ಎಂದು ಹೇಳಿದ್ದಾರೆ.

ಶುಭಮ್ ಕುಮಾರ್ | ಖೇ. ಕುಮಾವತ್ | ಪ್ರಶಾಂತ್ ಸಿಂಗ್ | ಜಿತೇಂದ್ರ ಶರ್ಮಾ | ಡ್ಯಾನಿಶ್ ಆಲಂ

ಅವಘಡದ ಚರಿತ್ರೆ

- **ಮಾರ್ಚ್ 22, 1986:** ಜಮ್ಮು ಮತ್ತು ಕಾಶ್ಮೀರದಲ್ಲಿ ಸಂಭವಿಸಿದ ಅಪಘಾತದಲ್ಲಿ 17 ಸಾವು
- **ಅಕ್ಟೋಬರ್ 4, 1988:** ಉತ್ತರ ಪ್ರದೇಶದಲ್ಲಿ ಸಂಭವಿಸಿದ ಅಪಘಾತದಲ್ಲಿ 10 ಜನರ ಸಾವು
- **ಜುಲೈ 15, 1990:** ಕೇರಳದಲ್ಲಿ ಘಟಿಸಿದ ವಿಮಾನ ಅಪಘಾತದಲ್ಲಿ 5 ಜನರ ದುರ್ಮರಣ
- **ಏಪ್ರಿಲ್ 1, 1992:** ಪಂಜಾಬ್‌ನಲ್ಲಿ ಎರಡು ಎಎನ್-32 ವಿಮಾನಗಳು ಪರಸ್ಪರ ಡಿಕ್ಕಿ, ಎಂಟು ಜನರ ಸಾವು
- **ಮಾರ್ಚ್ 7, 1999:** ದಿಲ್ಲಿಯಲ್ಲಿ ಪತನಗೊಂಡ ವಿಮಾನ ದುರಂತದಲ್ಲಿ 21 ಜನರ ಸಾವು
- **ಜೂನ್ 8, 2009:** ಅರುಣಾಚಲ ಪ್ರದೇಶದಲ್ಲಿ ಸಂಭವಿಸಿದ ಅಪಘಾತದಲ್ಲಿ 13 ಜನರ ಸಾವು
- **ಜುಲೈ 22, 2016:** ಬಂಗಾಳ ಕೊಲ್ಲಿಯಲ್ಲಿ ವಿಮಾನ ನಾಪತ್ತೆ. 2024ರ ಜನವರಿಯಲ್ಲಿ ಅವಶೇಷ ಪತ್ತೆ, 29 ಜನರ ಸಾವು
- **ಜೂನ್ 3, 2019:** ಜೋರ್ಹತ್‌ನಿಂದ ಹೊರಟ ವಿಮಾನ ಅರುಣಾಚಲ ಪ್ರದೇಶ ಬಳಿ ಪತನ,13 ಜನರ ಸಾವು
- **ಮಾರ್ಚ್ 7, 2025:** ಬಾಗ್ದೋಗ್ರಾ ವಿಮಾನ ನಿಲ್ದಾಣದಲ್ಲಿ ಇಳಿಯುವಾಗ ಪತನ, ಸಾವು ನೋವು ಇಲ್ಲ

ಫ್ಲೊಲಾರಿನ್ ಬಾಲೋಗನ್ ಡಬಲ್ ಗೋಲ್ | ಪರಗ್ವೆ ವಿರುದ್ಧ 4–1 ಭರ್ಜರಿ ಜಯ

ಆತಿಥೇಯ ಅಮೆರಿಕ ಶುಭಾರಂಭ

ವಾಷಿಂಗ್ಟನ್: ಫ್ಲೊಲಾರಿನ್ ಬಾಲೋಗನ್ ಅವರ ಆಕರ್ಷಕ ಎರಡು ಗೋಲುಗಳ ನೆರವಿನಿಂದ ಅಮೆರಿಕ ತಂಡವು, 32 ವರ್ಷಗಳ ನಂತರ ತನ್ನದೇ ನೆಲದಲ್ಲಿ ನಡೆಯುತ್ತಿರುವ ವಿಶ್ವಕಪ್ ಟೂರ್ನಿಯಲ್ಲಿ ಪರಗ್ವೆ ವಿರುದ್ಧ 4–1 ಅಂತರದ ಭರ್ಜರಿ ಜಯ ಸಾಧಿಸಿದೆ. ಇದು ವಿಶ್ವಕಪ್ ಇತಿಹಾಸದಲ್ಲೇ ಅಮೆರಿಕ ದಾಖಲಿಸಿದ ಅತಿ ದೊಡ್ಡ ಗೆಲುವಾಗಿದೆ.

ಸೋಫಿ ಕ್ರೀಡಾಂಗಣದಲ್ಲಿ ನೆರೆದಿದ್ದ 70,000ಕ್ಕೂ ಅಧಿಕ ಪ್ರೇಕ್ಷಕರ ಸಮ್ಮುಖದಲ್ಲಿ, ಹೊಸ ಕೋಚ್ ಮೌರಿಸಿಯೋ ಪೊಚೆಟ್ಟಿನೊ ಮಾರ್ಗ ದರ್ಶನದಲ್ಲಿ ಅಮೆರಿಕ ಆಕ್ರಮಣಕಾರಿ ಆಟ ಪ್ರದರ್ಶಿಸಿತು. ಪಂದ್ಯದ 7ನೇ ನಿಮಿಷದಲ್ಲಿ ಕ್ರಿಶ್ಚಿಯನ್ ಪುಲಿಸಿಕ್ ಅವರ ಅದ್ಭುತ ಮೂವ್‌ನಿಂದಾಗಿ ಗಳಿಸಿದ ಗೋಲ ಮೂಲಕ ಅಮೆರಿಕ ಖಾತೆ ತೆರೆಯಿತು. ಆ ಬಳಿಕ ಬಾಲೋಗನ್ 31ನೇ ನಿಮಿಷ ಹಾಗೂ ಮೊದಲಾರ್ಧದ ಇಂಜುರಿ ಅವಧಿಯಲ್ಲಿ ತಲಾ ಒಂದು ಗೋಲು ಬಾರಿಸಿ ತಂಡಕ್ಕೆ 3–0 ಮುನ್ನಡೆ ತಂದುಕೊಟ್ಟರು. ಈ ಮೂಲಕ 1930ರ ನಂತರ ವಿಶ್ವಕಪ್‌ನಲ್ಲಿ ಒಂದೇ ಪಂದ್ಯದಲ್ಲಿ ಎರಡು ಗೋಲು ಗಳಿಸಿದ ಮೊದಲ ಅಮೆರಿಕನ್ ಆಟಗಾರ ಎಂಬ ಹೆಗ್ಗಳಿಕೆಗೆ 24 ವರ್ಷದ ಬಾಲೋಗನ್ ಪಾತ್ರರಾದರು.



ದ್ವಿತೀಯಾರ್ಧದಲ್ಲಿ ಪರಗ್ವೆ ಪರ ಮೌರಿಸಿಯೋ ಒಂದು ಗೋಲು ಗಳಿಸಿ ಅಂತರ ತಗ್ಗಿಸಿದರೂ, ಪಂದ್ಯದ ಕೊನೆಯ ಕ್ಷಣಗಳಲ್ಲಿ ಜಿಯೋ ರೇನಾ ಅಮೆರಿಕ ಪರ ನಾಲ್ಕನೇ ಗೋಲು ಗಳಿಸಿ ಇತಿಹಾಸ ಬರೆದರು. ಅಮೆರಿಕ ತಂಡವು ವಿಶ್ವಕಪ್ ಪಂದ್ಯವೊಂದರಲ್ಲಿ 4 ಗೋಲು ಗಳಿಸಿದ್ದು ಇದೇ ಮೊದಲು. ಹಾಲಿವುಡ್ ತಾರೆಯಾದ ಟಾಮ್ ಕ್ರೂಸ್, ಲಿಯೊನಾರ್ಡೊ ಡಿಕ್ಯಾಪ್ರಿಯೊ ಮತ್ತು ಐಟಿ ಉದ್ಯಮಿ ಬಿಲ್ ಗೇಟ್ಸ್ ಸೇರಿದಂತೆ ಹಲವು ಗಣ್ಯರು ಕ್ರೀಡಾಂಗಣದಲ್ಲಿ ಉಪಸ್ಥಿತರಿದ್ದು ಅಮೆರಿಕದ ಈ ಐತಿಹಾಸಿಕ ಜಯಕ್ಕೆ ಸಾಕ್ಷಿಯಾಗಿದ್ದು ವಿಶೇಷವಾಗಿತ್ತು.

ಫ್ಲೊಲಾರಿನ್ ಬಾಲೋಗನ್

ಮುಂದಿನ ಪಂದ್ಯಗಳು

ನೆದರ್ಲೆಂಡ್ಸ್ vs ಜಪಾನ್
ಪಂದ್ಯ ಆರಂಭ: ಮುಂಜಾನೆ 1.30 (ಸೋಮವಾರ)
ಸ್ಥಳ: ಆರ್ಲಿಂಗ್ಟನ್, ಟೆಕ್ಸಾಸ್

ಐವರಿ ಕೋಸ್ಟ್ vs ಇಕ್ವೆಡಾರ್
ಪಂದ್ಯ ಆರಂಭ: ಮುಂಜಾನೆ 4.30 (ಸೋಮವಾರ)
ಸ್ಥಳ: ಫಿಲೆಡೆಲ್ಫಿಯಾ

ಸ್ವೀಡನ್ vs ಟ್ಯುನೀಷಿಯ
ಪಂದ್ಯ ಆರಂಭ: ಬೆಳಗ್ಗೆ 7.30 (ಸೋಮವಾರ)
ಸ್ಥಳ: ಮೆಕ್ಸಿಕೊ

ಸ್ಪೇನ್ vs ಕಾಬೊವರ್ಡಿ
ಪಂದ್ಯ ಆರಂಭ: ರಾತ್ರಿ 9.30 (ಸೋಮವಾರ)
ಸ್ಥಳ: ಅಟ್ಲಾಂಟಾ

ನೇರ ಪ್ರಸಾರ: ಯುನೈಟ್ 8 ಸ್ಪೋರ್ಟ್ಸ್ ನೆಟ್‌ವರ್ಕ್, ಜೀ5

ಭಾರತಕ್ಕೆ 7 ವಿಕೆಟ್ ಜಯ

ಮೊದಲ ಏಕದಿನ ಪಂದ್ಯ

ಅಫಘಾನಿಸ್ತಾನ ಪರ ಗುರ್ಬಾಜ್ ಶತಕ ವ್ಯರ್ಥ

ಶುಬ್ಮನ್ ಗಿಲ್

ಧರ್ಮಶಾಲಾ: ನಾಯಕ ಶುಬ್ಮನ್ ಗಿಲ್ (84*) ಆಕರ್ಷಕ ಅರ್ಧಶತಕ, ಕೆ.ಎಲ್.ರಾಹುಲ್ (39) ಹೊಣೆಗಾರಿಕೆಯ ಆಟದ ನೆರವಿನಿಂದ ಟೀಮ್ ಇಂಡಿಯಾ, ಅಫಘಾನಿಸ್ತಾನ ವಿರುದ್ಧದ ಮೊದಲ ಏಕದಿನ ಪಂದ್ಯದಲ್ಲಿ 7 ವಿಕೆಟ್‌ಗಳ ಜಯ ಸಾಧಿಸಿದೆ. ಅಫಘಾನಿಸ್ತಾನ ನೀಡಿದ 195 ರನ್ ಗುರಿ ಬೆನ್ನಟ್ಟಿದ್ದ ಭಾರತ 22.5 ಓವರ್‌ಗಳಲ್ಲಿ ಗುರಿಮುಟ್ಟಿ ಗೆಲುವಿನ ನಗೆ ಬೀರಿತು.

ಶನಿವಾರ ಮಳೆಯಿಂದ 25 ಓವರ್‌ಗಳಿಗೆ ಸೀಮಿತಗೊಂಡ ಪಂದ್ಯದಲ್ಲಿ, ಟಾಸ್ ಗೆದ್ದ ಭಾರತ ಮೊದಲು ಬೌಲಿಂಗ್ ಆಯ್ಕೆ ಮಾಡಿಕೊಂಡಿತು. ಆರಂಭಿಕ ಆಘಾತ ಎದುರಿಸಿದ ಅಫಘಾನಿಸ್ತಾನ 26 ರನ್‌ಗಳಿಗೆ 3 ವಿಕೆಟ್ ಕಳೆದುಕೊಂಡಿತು. ರಹಮಾನುಲ್ಲಾ ಗುರ್ಬಾಜ್ ಅವರ ಸ್ಫೋಟಕ ಶತಕದ ನೆರವಿನಿಂದ ಅಫಘಾನಿಸ್ತಾನ ತಂಡವು ಭಾರತ ವಿರುದ್ಧ 194 ರನ್ ಕಲೆ ಹಾಕಿತು.

ಭಾರತದ ಪರ ಚೊಚ್ಚಲ ಪಂದ್ಯವಾಡಿದ ವೇಗಿ ಗುರ್ನೂರ್ ಬ್ರಾರ್ (27ಕ್ಕೆ 3) ತಮ್ಮ ಮೊದಲ ಓವರ್‌ನಲ್ಲೇ ಇಬ್ರಾಹಿಂ ಜದ್ರಾನ್ ವಿಕೆಟ್ ಪಡೆದು ಮಿಂಚಿದರು. ಅರ್ಷ್‌ದೀಪ್ ಸಿಂಗ್ ಇತರ ಇಬ್ಬರು ಬ್ಯಾಟರ್‌ಗಳನ್ನು ಔಟ್ ಮಾಡಿದರು. ಆದರೆ, ಒಂಟಿ ಹೋರಾಟ ನಡೆಸಿದ ಗುರ್ಬಾಜ್ ಕೇವಲ 51 ಎಸೆತಗಳಲ್ಲಿ 8 ಬೌಂಡರಿ ಹಾಗೂ 8 ಸಿಕ್ಸರ್‌ಗಳ ನೆರವಿನಿಂದ 102 ರನ್ ಸಿಡಿಸಿ ಆಸರೆಯಾದರು.

ಸಂಕ್ಷಿಪ್ತ ಸ್ಕೋರ್

ಅಫಘಾನಿಸ್ತಾನ: 24.5 ಓವರ್‌ಗಳಲ್ಲಿ 194 (ರಹಮಾನುಲ್ಲಾ ಗುರ್ಬಾಜ್ 102, ಶಾಹಿದಿ 27; ಗುರ್ನೂರ್ ಬ್ರಾರ್ 27ಕ್ಕೆ 3, ಹರ್ಷ ದುಬೆ 47ಕ್ಕೆ 3)
ಭಾರತ: 22.5 ಓವರ್‌ಗಳಲ್ಲಿ 3 ವಿಕೆಟ್‌ಗೆ 195 (ಶುಬ್ಮನ್ ಗಿಲ್ 84*, ಕೆ.ಎಲ್.ರಾಹುಲ್ 39; ರಷೀದ್ ಖಾನ್ 37ಕ್ಕೆ 1, ಜಿಯಾವುರ್ ರಹಮಾನ್ 39ಕ್ಕೆ 1).

ಇಂಗ್ಲೆಂಡ್‌ನ ಫುಟ್ಬಾಲ್ ದಿಗ್ಗಜ ಡೇವಿಡ್ ಬೆಕ್‌ಹ್ಯಾಮ್ ಜೊತೆ ಪಂದ್ಯ ವೀಕ್ಷಿಸಿದ ಹಾಲಿವುಡ್ ನಟ ಟಾಮ್ ಕ್ರೂಸ್.

ಡ್ರಾನಲ್ಲಿ ಕೊನೆಗೊಂಡ ಕೆನಡಾ- ಬೋಸ್ನಿಯಾ ಪಂದ್ಯ

ಟೊರೊಂಟೊದಲ್ಲಿ ನಡೆದ ವಿಶ್ವಕಪ್ ಆರಂಭಿಕ ಪಂದ್ಯದಲ್ಲಿ ಬೋಸ್ನಿಯಾ- ಹರ್ಜೆಗೋವಿನಾ ತಂಡದ ವಿರುದ್ಧ ಕೆನಡಾ 1–1 ಗೋಲುಗಳಿಂದ ರೋಮಾಂಚಕ ಡ್ರಾ ಸಾಧಿಸಿದೆ. ಇದರೊಂದಿಗೆ ವಿಶ್ವಕಪ್ ಇತಿಹಾಸದಲ್ಲಿ ಕೆನಡಾ ಮೊದಲ ಅಂಕ ಗಳಿಸಿದೆ.

ಪಂದ್ಯದ 21ನೇ ನಿಮಿಷದಲ್ಲಿ ಬೋಸ್ನಿಯಾದ ಜೋವೊ ಲುಕಿಕ್ ಅವರು ಹೆಡರ್ ಮೂಲಕ ಗೋಲು ಗಳಿಸಿ ತಂಡಕ್ಕೆ ಆರಂಭಿಕ ಮುನ್ನಡೆ ತಂದುಕೊಟ್ಟರು. ಆದರೆ, 78ನೇ ನಿಮಿಷದಲ್ಲಿ ಬದಲಿ ಆಟಗಾರನಾಗಿ ಮೈದಾನಕ್ಕಿಳಿದ ಕೆನಡಾದ ಸೈಲ್ ಲಾರಿನ್, ಡೇವಿಡ್ ನೀಡಿದ ಪಾಸ್ ಅನ್ನು ಗೋಲಾಗಿ ಪರಿವರ್ತಿಸಿ ಪಂದ್ಯವನ್ನು ಸಮಬಲಗೊಳಿಸಿದರು. 43,000ಕ್ಕೂ ಅಧಿಕ ಅಭಿಮಾನಿಗಳು ಪಂದ್ಯ ವೀಕ್ಷಿಸಿದರು. ಜೂನ್ 18ರಂದು ನಡೆಯಲಿರುವ ಮುಂದಿನ ಪಂದ್ಯದಲ್ಲಿ ಕೆನಡಾ ತಂಡ ಕತಾರ್ ತಂಡವನ್ನು ಎದುರಿಸಲಿದೆ.

ಕೆನಡಾ- ಬೋಸ್ನಿಯಾ ಆಟಗಾರರ ಮಧ್ಯೆ ಚೆಂಡಿಗಾಗಿ ಕಾದಾಟ.

ಹಾರ್ಸ್ ಪವರ್

ಬೆಂಗಳೂರು ರೇಸ್ ■ ಅಶ್ವಬಂಧು

ಮಾರ್ಗರೆಟ್ಟಾ ಬಲಾಢ್ಯ

ಪೆಸಿ ಶ್ರಾಫ್ ತರಬೇತಿಯಲ್ಲಿ ಪಳಗಿರುವ ಮಾರ್ಗರೆಟ್ಟಾ ಭಾನುವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆ ಜವಾರೆ ಎಸ್. ಪೂನಾವಾಲ ಫಿಲ್ಲೀಸ್ ಚಾಂಪಿಯನ್‌ಷಿಪ್ ಸ್ಟೇಕ್ಸ್ ಗೆಲ್ಲುವ ನೆಚ್ಚಿನ ಕುದುರೆ ಎನಿಸಿದೆ. ಒಟ್ಟು ಎಂಟು ರೇಸ್‌ಗಳನ್ನು ಏರ್ಪಡಿಸಿದ್ದು, ಮೊದಲನೇ ರೇಸ್ ಮಧ್ಯಾಹ್ನ 1.30 ಗಂಟೆಗೆ ಪ್ರಾರಂಭವಾಗಲಿದೆ.

ನಮ್ಮ ಆಯ್ಕೆ

- 1ನೇ ರೇಸ್: ಸ್ಟಾಲಿನ್‌ಗಾರ್ಡ್ 4, ಸ್ಟಾರ್ಮ್ ಶ್ಯಾಡೊ 1, ಅಜಾಲಿಯಾ 5
- 2ನೇ ರೇಸ್: ಸ್ಯಾಂಟೋರಿಯಸ್ 1, ಅಗಾಪೆ 2, ಟ್ಯಾರಾ 4
- 3ನೇ ರೇಸ್: ರಾವಿಶಿಂಗ್ ಕ್ವೀನ್ 8, ಅಟ್ಮಾನ್ 2, ನಿಂಬಸ್ ಸ್ಪೀಡ್ 5
- 4ನೇ ರೇಸ್: ಸ್ಮಾಲ್ ಡ್ರೀಮ್ಸ್ 8, ಅಕ್ವಾಸ್ಟಿಕ್ 2, ಡಿ ಫ್ರಾಂಕ್ಸ್ 5
- 5ನೇ ರೇಸ್: ಎಲಿಸಿಯಮ್ 5, ಡಾನ್ ಕಾರ್ಲೋಸ್ 1, ಕ್ರಾಸ್‌ವಾಟರ್ 2
- 6ನೇ ರೇಸ್: ಮಾರ್ಗರೆಟ್ಟಾ 3, ಹ್ಯವಾಕ್ 2, ಮೂನ್‌ವೀಲ್ 4
- 7ನೇ ರೇಸ್: ಗ್ಲೋರಿಯಸ್‌ನೆಸ್ 2, ಪರ್ಫೆಕ್ಟ್ ಲೆಜೆಂಡ್ 1, ಪರ್ಫೆಕ್ಟ್ ಆಟಿಟ್ಯೂಡ್ 7
- 8ನೇ ರೇಸ್: ಲಾಟ್ಸ್ ಆಫ್ ಲಕ್ 8, ಥ್ರಿಲ್ ಆಫ್ ಬ್ರೆಜಿಲ್ 1, ರೀಗಲ್ ಆರಿಸ್ಟೊಕ್ರಸಿ 3

ಮಲ್ಟಿ-ಲೆಗ್ ಪೂಲ್ಸ್:

- ಜಾಕ್‌ಪಾಟ್: 4, 5, 6, 7, 8; 1ನೇ ಟ್ರಿಬಲ್ 3, 4, 5; 2ನೇ ಟ್ರಿಬಲ್: 6, 7, 8

ಅತ್ಯುತ್ತಮ ಬೆಟ್: ಸ್ಟಾಲಿನ್‌ಗಾರ್ಡ್

ಕೇರಳದ ಕೊಯಿಕ್ಕೋಡ್‌ನ ಅರ್ಜೆಂಟೀನಾ ಫುಟ್‌ಬಾಲ್ ತಂಡದ ಅಭಿಮಾನಿಗಳು ತೇಲುವ ಕ್ರೀಡಾಂಗಣವನ್ನು ನಿರ್ಮಿಸಿ ಫುಟ್‌ಬಾಲ್ ಪ್ರೇಮ ಮೆರೆದಿದ್ದಾರೆ.

ಮೈದಾನದಲ್ಲಿ ಖಾಲಿ ಆಸನ: ಫ್ಯಾನ್ಸ್ ವಿರುದ್ಧ ಫಿಫಾ ಆರೋಪ

ಗ್ವಾಡಲಜಾರಾ (ಮೆಕ್ಸಿಕೊ): ಫಿಫಾ ವಿಶ್ವಕಪ್‌ನ ದಕ್ಷಿಣ ಕೊರಿಯಾ ಮತ್ತು ಚೆಕ್ ರಿಪಬ್ಲಿಕ್ ನಡುವಿನ ಪಂದ್ಯದಲ್ಲಿ ಮೈದಾನದಲ್ಲಿ ಖಾಲಿ ಸೀಟುಗಳು ಕಂಡುಬಂದಿರುವುದಕ್ಕೆ ಫಿಫಾ ಸ್ಪಷ್ಟನೆ ನೀಡಿದೆ. ಫುಟ್‌ಬಾಲ್ ಅಭಿಮಾನಿಗಳು ಟಿಕೆಟ್ ಕೊಳ್ಳದೆ ಮೈದಾನದ ಸುತ್ತಮುತ್ತಲಿನ ಕಟ್ಟಡಗಳ ಮೇಲೇರಿ ಪಂದ್ಯ ವೀಕ್ಷಿಸಿದ್ದು ಖಾಲಿ ಸೀಟುಗಳಿಗೆ ಕಾರಣ ಎಂದು ಫಿಫಾ ಅಭಿಪ್ರಾಯಪಟ್ಟಿದೆ. 45,664 ಆಸನ ಸಾಮರ್ಥ್ಯದ ಕ್ರೀಡಾಂಗಣದಲ್ಲಿ 44,985 ಪ್ರೇಕ್ಷಕರು ಹಾಜರಿದ್ದರು ಎಂದು ಫಿಫಾ ತಿಳಿಸಿದೆ.

ಮತ್ತೊಂದೆಡೆ ಟೊರಾಂಟೊ ಕ್ರೀಡಾಂಗಣದಲ್ಲಿ ನಡೆದ ಪಂದ್ಯಗಳಲ್ಲೂ ಮೈದಾನದಲ್ಲಿ ಸೀಟುಗಳು ಖಾಲಿ ಇದ್ದವು. ಅಲ್ಲಿನ ಆಸನ ಸಾಮರ್ಥ್ಯ 43,036 ಇದ್ದು, 43,002 ಪ್ರೇಕ್ಷಕರು ಬಂದಿದ್ದರು. ಈ ಬಾರಿ ಫಿಫಾ ಅಮೆರಿಕ, ಮೆಕ್ಸಿಕೊ ಮತ್ತು ಕೆನಡಾದ ಕ್ರೀಡಾಂಗಣಗಳಲ್ಲಿ ದಾಖಲೆ ಮಟ್ಟದ ಟಿಕೆಟ್ ದರವನ್ನು ನಿಗದಿಪಡಿಸಿರುವುದು ವ್ಯಾಪಕ ಟೀಕೆಗೆ ಗುರಿಯಾಗಿದೆ. ಆದರೆ ಅಧ್ಯಕ್ಷ ಜಿಯಾನಿ ಇನ್ಫಾಂಟಿನೊ ಈ ದರ ಏರಿಕೆಯನ್ನು ಸಮರ್ಥಿಸಿಕೊಂಡಿದ್ದಾರೆ. ಟೂರ್ನಿ ಆರಂಭಕ್ಕೂ ಮುನ್ನವೇ 29 ಪಂದ್ಯಗಳ ಟಿಕೆಟ್ ಪೂರ್ತಿ ಮಾರಾಟವಾಗಿದ್ದವು.

ಬ್ರೆಜಿಲ್ ಮಹಿಳಾ ಫುಟ್‌ಬಾಲ್ ಅಭಿಮಾನಿಯ ಬೋಲ್ಡ್ ಆಫರ್

ಸಾವೊಪೊಲೊ: ಬ್ರೆಜಿಲ್ ಮಹಿಳಾ ಫುಟ್‌ಬಾಲ್ ಅಭಿಮಾನಿ ಡಯಾನ್ ಟೊಮಜೊನಿ ಬ್ರೆಜಿಲ್ ಫುಟ್‌ಬಾಲ್ ಅಭಿಮಾನಿಗಳಿಗೆ ವಿಲಕ್ಷಣ ಬೋಲ್ಡ್ ಆಫರ್ ನೀಡುವುದಾಗಿ ಘೋಷಿಸಿದ್ದಾರೆ. ತಮ್ಮ ದೇಶದ ತಂಡ ಫಿಫಾ ವಿಶ್ವಕಪ್‌ನಲ್ಲಿ ಗಳಿಸುವ ಪ್ರತಿ ಗೋಲ್‌ಗೆ ಪ್ರತಿಯಾಗಿ ತಮ್ಮ ಟೆಲಿಗ್ರಾಂ ಗ್ರೂಪ್‌ನಲ್ಲಿ ತಮ್ಮ ನಗ್ನ ಚಿತ್ರ ಪೋಸ್ಟ್ ಮಾಡುವುದಾಗಿ ಹೇಳಿಕೊಂಡಿದ್ದಾರೆ. ಬೋಲ್ಡ್ ವಿಡಿಯೊ ಕಂಟೆಂಟ್ ಕ್ರಿಯೇಟರ್ ಆಗಿರುವ ಡಯಾನ್ ತಾವು ತಂಡದ ಅಭಿಮಾನಿಗಳ ಹುರುಪು ಹೆಚ್ಚಿಸಲು ಈ ನಿರ್ಧಾರ ಕೈಗೊಂಡಿರುವುದಾಗಿ ತಿಳಿಸಿದ್ದಾರೆ.

ನ್ಯೂ ಬುಕ್

ಪರಂಪರೆಯ ಬೆಳಕಿನಲ್ಲಿ ಕಾವ್ಯಸಾಲು

ಹಿರಿಯರು ಹಚ್ಚಿಟ್ಟ ದೀಪ. ಅದರ ಅಡಿಯಲ್ಲಿ ಕುಳಿತರೆ ಕತ್ತಲೆನಿಸಿ ದಾರಿ ಕಾಣದಾಗಬಹುದು. ಆದರೆ, ಅದರ ಬೆಳಕು ತೋರಿದಂತೆ ನಡೆದರೆ ತನ್ನದೇ ಹೊಸ ಮಾರ್ಗದ ಶೋಧನೆಯೂ ಆಗಬಹುದು. ಕವಿ ರಾಜಕುಮಾರ ಮಡಿವಾಳರ ಹಿಂದೆ ಬೇಂದ್ರೆಯವರ ಭಾಷೆಯ ಬನಿ ಇದೆ, ಕೆಎಸ್‌ನ ಅವರ ಒಲುಮೆಯ ದನಿ ಇದೆ, ಕಂಬಾರರ ಜನಪದೀಯತೆಯೂ ಇದೆ. ಜತೆಗೇ ನವ್ಯರ ಗಾಢಾರ್ಥ–ಗೂಢಾರ್ಥಗಳೂ ಇವೆ. ಇವೆಲ್ಲವುಗಳ ಬೆಳಕಿನಲ್ಲಿ ನಡೆಯುವಾಗ ಅವರಿಗೆ ತಮ್ಮದೇ ಒಂದು ಜಾಡು ಸಿಕ್ಕಂತಿದೆ. ಅದರ ಫಲವೇ 'ನೆಲದ ಕಾವು ಮುಗಿಲ ತಾಕಿ'.



ನೆಲದ ಕಾವು ಮುಗಿಲ ತಾಕಿ; ಲೇ: ರಾಜಕುಮಾರ ಮಡಿವಾಳರ; ಪ್ರ: ಅಕ್ಷರ ಮಂಡಲ ಪ್ರಕಾಶನ, ಬೆಂಗಳೂರು; ಪುಟ: 96; ಬೆಲೆ: 130 ರೂ.

72 ಕವನಗಳ ಈ ಸಂಕಲನದ ಕವನಗಳು ಮೂಡಿಬರುವ ಹೊತ್ತಿನಲ್ಲಿ ಕವಿಗೂ ಹಿಂಜರಿಕೆಯುಂಟು, ಪರಂಪರೆಯಲ್ಲಿ ಆಗಿಹೋದುದನ್ನೇ ಬರೆಯಬಾರದು ಎಂಬ ನಿಲುವುಂಟು: 'ಮಾಡಿದ್ದೇ ಮಾಡುವುದು/ ನೀಡಿದುದನೇ ನೀಡುವುದು/ ಒಗ್ಗುವುದಿಲ್ಲ ದೇವರಿಗೆ/ ಒಬ್ಬನಿದ್ದ ಒಬ್ಬನೇ ಇರಬೇಕು/ ಅದೇ ಚೆಂದ ಕಾವ್ಯಕ್ಕೆ ಕಾಳಿದಾಸ' ಎನ್ನುತ್ತಾರವರು. ಆದರೆ, ಈ ಕವಿ ತಮ್ಮಲ್ಲಿ ಮೂಡಿದ ಕಾವ್ಯವನ್ನು ಹತ್ತಿಕ್ಕಿಲ್ಲ, ತಮ್ಮ ಭಾಷೆ, ಪರಿಸರ ಎಲ್ಲ ಕಾವ್ಯಪರಿಕರಗಳನ್ನೂ ಜತೆಯಾಗಿಸಿ ಬರೆದಿದ್ದಾರೆ. 'ಆಹಾ!, ಗುನುಗತಾವ, ಗುಲುಗತಾವ,/ ಕುಲುಕತಾವ, ಮುಗಳ್ನಗುತ ಬೆಳಗ/ ಕುಣಿದು ಘಮ್ಮನಸತಾವ ಗೆಜ್ಜಿ/ ಗಾಳಿಗುಂಟ ತೋಂ...ತಕಿಟ ಥಾ..ಹೆಜ್ಜೆ...' (ತೋಂ..ತಕಿಟ ಥಾ...) ಎನ್ನುವಾಗ ಹುಬ್ಬಳ್ಳಿ ಧಾರವಾಡದ ಭಾಷೆ ಗರಿಗೆದರಿದೆ. ಬೇಂದ್ರೆ 'ಕೆನ್ನೆ ತುಂಬ ಮುತ್ತು' ಎಂದರೆ ಇವರು ಅವರ ಪ್ರಭಾವವನ್ನು ನಿರಾಕರಿಸದೇ, 'ಕಿವಿಯ ಇರಕಿನ್ಯಾಗ ತುರುಕಬ್ಯಾಡ/ ಬಿಡು ಹಾರಿಕೊಂಡಿರಲಿ ಮುಂಗುರುಳು/ ಬಿಚ್ಚು ಹೆರಳ ಮರಿಮಾಡಿ ಕೊಡಲೇನು?/ ಹರಿದ ಸರ ಚೆಲ್ಲಿದಂಗ ಮಾರಿ ತುಂಬ ಮುತ್ತು!' ಅನ್ನುತ್ತಾರೆ! ಇಂಥ ಸಾಲುಗಳಲ್ಲಿನ ಗೇಯತೆಯೂ ಗಮನೀಯ. ಆ ತಾಯಿಯ ಮಗಳ ಮನೆಗೆ ಹೋಗಿಬಂದ ಬಳೆಗಾರ, 'ವರ್ಷ ನಲವತ್ತು ಉರುಳಿದವು ಬಳೆ ತೊಡಿಸುತ್ತ ನನಗೆ/ ಬಣ್ಣಬೇರೆ ತೋರಿಲ್ಲ ರಕ್ತ ಗೀರಿದ ಸೀಳು ಕೈಮೇಲೆ...' ಅನ್ನುತ್ತ ಕುಲದ ಭಿನ್ನತೆ ಮೀರಿ ಎಲ್ಲರ ಮೈಯಾಗಿನ ರಕುತ ಒಂದೇ ಎನ್ನುವ ಬಗೆ ಚೆನ್ನ.

'ಕರಿನೀರ ಹೊಳೆಯಲ್ಲಿ ತೇಲಿ ಬಂದ ತೆಪ್ಪ–ಚಂದಪ್ಪ' ಎನ್ನುವಲ್ಲಿ ವರಕವಿಯ 'ಹುಣ್ಣಿವೀ ಚಂದಿರನ ಹೆಣಾ ಬಂತೊ...' ಸಾಲಿನಂತೆಯೇ ಇನ್ನೊಂದು ಸಾಲಿಗಾಗಿ ಈ ಕವಿ ಮಾಡಿದ ಹುಡುಕಾಟವಿದೆ. 'ನದಿ ಎದಿಯಿಂದ ಮುಗಿಲ/ತುದಿ ತನಕ ಹಸಿರು ತೋರಣ', 'ತೆನೆ ಬಾಯಿ ಮುತ್ತು!/ ಜಗದ ನಗೆ', 'ಚಿಕ್ಕಿ ಮರ್‍ದೊಂಡ ರೆಕ್ಕಿ/ ಉದುರಿ ಬಿದ್ದಾಂಗ ನೆಲ ತುಂಬ ಹೂವ್ವ' –ಮೊದಲಾದ ಸಾಲುಗಳಲ್ಲಿನ ಕಾವ್ಯಾಭಿವ್ಯಕ್ತಿ ಸೆಳೆಯುತ್ತದೆ. ಈ ಕವನಗಳಲ್ಲಿ ಅವರ ಪ್ರೀತಿಯ ತುಂಗಾ ನದಿಯ ಸಳಸಳ ಶಬುದವಿದೆ, ಅವರೂರಿನ ಶ್ರಾವಣದ ಸಡಗರವಿದೆ, 'ಸದ್ದಲೇ...' ಎಂಬಲ್ಲಿ ಈ ನೆಲದ ಗಂಧವಿದೆ.

'ತನ್ನೆಪ್ಪತ್ತರ ಈ ಇಳಿ ವಯಸಿನಲಿ/ ಒಂದೇ ಒಂದು ಕೌದಿ ಹೊಲಿದಿದ್ದಾಳೆ/ ಅಂದರೆ ಅವಳ ಕೌಶಲ–ಕಲೆ–' ಪ್ರತಿಭೆ/ ಸಣ್ಣದಂತಲ್ಲ... / ಈ ಈಸು ವರುಷ ಅವಳು ಉಟ್ಟಿದ್ದ/ ಏಳು ಸೀರೆ, ಮತ್ತು ಆ ಏಳು ಸೀರೆಯಲೆ/ ಎಪ್ಪತ್ತು ಕೌದಿ ಹೊಲಿಯಲಾಗುವುದಿಲ್ಲ' –ಇದು ಅವರ 'ಅವ್ವ' ಕವನ. ಇಂಥ ಸಾಲುಗಳಿಗಾಗಿ ಈ ಸಂಕಲನವನ್ನು ಓದಬೇಕು. ■

ಇತಿಹಾಸದ ರೋಚಕ ಚಿತ್ರಗಳು

ತೆಲುಗು ಬರಹಗಾರ ಉಣುದುರ್ತಿ ಸುಧಾಕರ್ ಅವರ ಕಥೆಗಳನ್ನು ದೀಪಕ್ ಎಂ. 'ಮೂಡಣ ಮಾರುತ' ಹೆಸರಿನಲ್ಲಿ ಕನ್ನಡಕ್ಕೆ ತಂದಿದ್ದಾರೆ. ಈ ಕಥಾ ಸಂಕಲನದಲ್ಲಿ 'ಮೂಡಣ ಮಾರುತ' ಎಂಬ ದೀರ್ಘ ಕತೆಯ ಜತೆಗೆ ಇನ್ನೂ ಏಳು ರೋಚಕ ಕಥೆಗಳಿವೆ.



ಮೂಡಣ ಮಾರುತ; ಲೇ: ಉಣುದುರ್ತಿ ಸುಧಾಕರ್; ಅನು: ದೀಪಕ್ ಎಂ.; ಪ್ರ: ಛಂದ ಪುಸ್ತಕ, ಬೆಂಗಳೂರು; ಪುಟ: 191; ಬೆಲೆ: 225 ರೂ.

ಇತಿಹಾಸದ ಆಳವಾದ ಅಧ್ಯಯನದ ಮೂಲಕ ಈ ಕಥೆಗಳು ಮೂಡಿಬಂದಿವೆ. ಬೌದ್ಧ ಧರ್ಮವು ಭಾರತದಲ್ಲಿ ಕಣ್ಮರೆಯಾಗುತ್ತಿದ್ದ ಕಾಲದಲ್ಲಿ ಬೌದ್ಧ ಬಿಕ್ಕುಗಳ ಪರಿಸ್ಥಿತಿ, ಭಾರತದ ಮೊದಲನೇ ಸ್ವಾತಂತ್ರ್ಯ ಸಂಗ್ರಾಮ ಬ್ರಿಟಿಷರ ಕಣ್ಣಲ್ಲಿ ಸಿಪಾಯಿ ದಂಗೆಯಾಗಿ, ಬ್ರಿಟಿಷ್ ಅಧಿಕಾರಿಗಳು ಮತ್ತು ಕುಟುಂಬಸ್ಥರು ಎದುರಿಸುತ್ತಿದ್ದ ಆತಂಕ ಹಾಗೂ ಅವರ ಮನೆಯಲ್ಲಿ ಕೆಲಸ ಮಾಡುತ್ತಿದ್ದ ಭಾರತೀಯರ ಪರಿಸ್ಥಿತಿ, ಬ್ರಿಟಿಷರು ಜವಳಿ ಉದ್ಯಮವನ್ನು ತಮ್ಮ ಹಿಡಿತಕ್ಕೆ ತೆಗೆದುಕೊಂಡಾಗ ಸ್ಥಳೀಯ ನೇಕಾರರು ಎದುರಿಸಬೇಕಾಗಿ ಬಂದ ಸಮಸ್ಯೆ–ಸಂಕಟಗಳು ಇಲ್ಲಿ ಕತೆಗಳಾಗಿ ರೂಪುಗೊಂಡಿವೆ.

ಉಣುದುರ್ತಿ ಸುಧಾಕರ್ ಅವರ ಈ ಕಥೆಗಳನ್ನು ದೀಪಕ್ ಎಂ. ಅತ್ಯದ್ಭುತವಾಗಿ ಕನ್ನಡಕ್ಕೆ ತಂದಿದ್ದಾರೆ. ಪದಗಳ ಬಳಕೆ, ಕಣ್ಣಿಗೆ ಕಟ್ಟುವಂತಹ ನಿರೂಪಣೆ ಓದುಗರನ್ನು ಕೂರಿಸಿ ಓದುವಂತೆ ಮಾಡುತ್ತವೆ. ಅನುವಾದಕರು ಹೇಳುವಂತೆ, ಯಕಶ್ಚಿತ್ ಎನಿಸುವಂತಹ ಪಾತ್ರಗಳು ಕೂಡ ಅಂತಿಮವಾಗಿ ನೆನಪಿನಲ್ಲಿ ಉಳಿಯುವಂತಹ ಪಾತ್ರಗಳಾಗಿ ರೂಪುಗೊಳ್ಳುವುದು, ಸಾಧಾರಣ ಘಟನೆಗಳು ಕೂಡ ಭಾವನಾತ್ಮಕವಾಗಿ ಚಿಂತನೆಗೆ ಹಚ್ಚುವಂತಹ ಘಟನೆಗಳಾಗುವುದು ಈ ಪುಸ್ತಕದ ಹೆಚ್ಚುಗಾರಿಕೆ. ■

ವಸ್ತುನಿಷ್ಠ ವಿಚಾರ ಮಂಡನೆ

ವಿಸ್ತಾರ ಲೋಕದರ್ಶನ, ಆಳವಾದ ಅಧ್ಯಯನ, ಸೈದ್ಧಾಂತಿಕ ವರ್ತುಲಗಳಲ್ಲಿ ಇರುವ ದೋಷಗಳು, ರಾಜಕಾರಣದಲ್ಲಿ ನಡೆಯುತ್ತಿರುವ ಅಹಿತಕರ ವಿದ್ಯಮಾನಗಳು, ಜಗತ್ತಿನಲ್ಲಿ ಸಂಭವಿಸುತ್ತಿರುವ ಧ್ರುವೀಕರಣಗಳು, ಧರ್ಮಗಳ ತಿಕ್ಕಾಟ, ಭಾರತದ ಪರಂಪರೆಯ ಸದ್ಗುಣಗಳು, ಕ್ಯಾಪಿಟಲಿಸಂ–ಲಿಬರಲಿಸಂನ ಆಳ ಅಗಲ, ವರ್ತಮಾನದ ಬಿಕ್ಕಟ್ಟುಗಳು, ಮುಕ್ತ ಮಾರುಕಟ್ಟೆಯ ಇತಿಹಾಸ–ಭವಿಷ್ಯ ಇವೆಲ್ಲವನ್ನೂ ವಸ್ತುನಿಷ್ಠವಾಗಿ ದಾಖಲಿಸಿರುವ ಲೇಖನಗಳ ಸಂಕಲನ 'ಉದಾರವಾದಿಯ ಉಭಯಸಂಕಟ'. ಗುರುಚರಣ್ ದಾಸ್ ಅವರು ಬರೆದಿರುವ ಈ ಪುಸ್ತಕವನ್ನು ಬಿ.ಎಸ್. ಜಯಪ್ರಕಾಶ ನಾರಾಯಣ ಕನ್ನಡಕ್ಕೆ ಅನುವಾದಿಸಿದ್ದಾರೆ. ■



ಉದಾರವಾದಿಯ ಉಭಯಸಂಕಟ; ಲೇ: ಗುರುಚರಣ್‌ದಾಸ್; ಅನು: ಬಿ.ಎಸ್. ಜಯಪ್ರಕಾಶ ನಾರಾಯಣ; ಪ್ರ: ಸಮನ್ವಿತ, ಬೆಂ; ಪುಟ: 176; ಬೆಲೆ: 230 ರೂ.

ಪುಸ್ತಕ ಟಿಪ್ಪಣಿ

ಸಾಹಿತ್ಯ, ಸಂವಾದದ ಅವಲೋಕನ

ಸಂಶೋಧನಾ ಲೇಖನಗಳ ಸಂಕಲನ 'ಅನುಸಂಧಾನ'ದಲ್ಲಿ 12 ಲೇಖನಗಳಿವೆ. ಸ್ಥಾಪಿತ ಸಂರಚನೆಗಳನ್ನು ಮೀರಿ, ಸೃಜನಶೀಲವಾಗಿ ಸಾಹಿತ್ಯ ಕೃತಿ, ಸಂವಾದಗಳನ್ನು ಇತಿಹಾಸ, ಮನೋವಿಜ್ಞಾನ, ಸಮಾಜಶಾಸ್ತ್ರ, ರಾಜಕೀಯಗಳ ವಿವಿಧ ಆಯಾಮಗಳಿಂದ ಪ್ರವೇಶಿಸುವ ಲೇಖನಗಳಿವು. ಲೇಖಕ ಡಾ. ನಾಗೇಂದ್ರ ಕುಮಾರ್, ಶಿಶುನಾಳ ಶರೀಫರು ಮತ್ತು ಸಮಕಾಲೀನ ಅನುಭಾವಿಗಳ ಬಗ್ಗೆ ಬರೆಯುತ್ತಾ, ಕುಮಾರವ್ಯಾಸರತ್ತಲೂ ತಿರುಗಿ ನೋಡುತ್ತಾರೆ, ಕುವೆಂಪು ಬರಹಗಳಲ್ಲಿನ ವೈಚಾರಿಕ ಪ್ರಜ್ಞೆಯನ್ನೂ ನೋಡುತ್ತಾರೆ.



ಅನುಸಂಧಾನ; ಲೇ: ಡಾ. ನಾಗೇಂದ್ರ ಕುಮಾರ್ ಬಿ.ಸಿ.; ಪ್ರ: ಅವ್ಯಕ್ತ ಪ್ರಕಾಶನ, ಬೆಂ; ಪುಟ: 176; ಬೆಲೆ: 245 ರೂ. ■

ಆಧ್ಯಾತ್ಮಿಕ ಚಿಂತನೆಗಳು

ಪುಸ್ತಕದ ಶೀರ್ಷಿಕೆಯಂತೆಯೇ ವೀಣಾ ಬನ್ನಂಜೆಯವರು 'ಅವರು, ಇವರು, ಎವರು' ಎಂಬ ಮೂರು ಭಾಗಗಳಲ್ಲಿ ಲೇಖನಗಳನ್ನು ವಿಂಗಡಿಸಿದ್ದಾರೆ. ಇಲ್ಲಿರುವ ಲೇಖನಗಳು ಮನುಷ್ಯರ ವಿಭಿನ್ನ ವ್ಯಕ್ತಿತ್ವಗಳನ್ನು ತೆರೆದಿಡುವ ಜತೆಗೆ ಆಳವಾದ ಆಧ್ಯಾತ್ಮಿಕ ಚಿಂತನೆಗಳನ್ನೂ ನಮ್ಮ ಮುಂದಿಡುತ್ತದೆ. ಎಂದಿನಂತೆ ವೀಣಾ ಬನ್ನಂಜೆಯವರ ವಿದ್ವತ್ತು ಹಾಗೂ ಸಾಮಾನ್ಯ ವಿಚಾರಗಳಲ್ಲಿ ಹೊಸತೇನನ್ನೋ ಕಾಣುವಂತಹ, ಚಿಂತನೆಗೆ ಹಚ್ಚುವಂತಹ ವಿಚಾರಗಳನ್ನು ಅರಿಯುವುದಕ್ಕಾಗಿ ಈ ಪುಸ್ತಕವನ್ನು ಓದಬೇಕು.



ಅವರು, ಇವರು, ಎವರು...; ಲೇ: ವೀಣಾ ಬನ್ನಂಜೆ; ಪ್ರ: ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ; ಪುಟ: 144; ಬೆಲೆ: 200 ರೂ. ■

ಸ್ತ್ರೀಪರ ವಿಚಾರಗಳಿಗೆ ವೇದಿಕೆ

ಪ್ರಾಚೀನ ಕಾಲದಲ್ಲಿ ಧರ್ಮಶಾಸ್ತ್ರಗಳು ಮಹಿಳಾ ಜೀವನದ ಸರ್ವಮುಖಗಳ ನಿರ್ದೇಶಕರಂತಿದ್ದವು. ಅಂದಿನ ಭಾರತೀಯ ನಾರಿಯ ಕಲ್ಪನೆಯ ಯಥಾತಥಾಚಿತ್ರವನ್ನು ಅವುಗಳನ್ನು ವಿಶ್ಲೇಷಿಸಿಯೇ ಅರಿಯಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಆಧುನಿಕ ಸ್ತ್ರೀವಾದಿಗಳ ಮತ್ತು ಸ್ತ್ರೀಪರ ವಿಚಾರಗಳಿಗೆ ಒಂದು ವೇದಿಕೆ ಅಥವಾ ಹಿನ್ನೆಲೆಯನ್ನು ಕೊಡುವ ಪ್ರಯತ್ನ ಡಾ. ನಿರುಪಮಾ ಅವರ 'ಧರ್ಮಶಾಸ್ತ್ರಗಳು' ಕೃತಿಯ ಮೂಲಕ ಆಗಿದೆ. ಇದರಲ್ಲಿ ಒಟ್ಟು ಎಂಟು ಲೇಖನಗಳಿವೆ.



ಧರ್ಮಶಾಸ್ತ್ರಗಳು; ಲೇ: ಡಾ. ನಿರುಪಮಾ; ಪ್ರ: ವಿಕ್ರಮ್ ಪ್ರಕಾಶನ, ಬೆಂಗಳೂರು; ಪುಟ: 126; ಬೆಲೆ: 130 ರೂ. ■

ವಿಜಯಬಂಧ – 7976



ಎಡದಿಂದ ಬಲಕ್ಕೆ

2 ವಿಶ್ವಸನೀಯವಾದ ಜಗತ್ತು 2
3 ಬೇಲಿಯಲ್ಲಿ ಬೆಳೆದ ಸಿಹಿ ಹುಳಿ ಒಗರು ಹಣ್ಣಿನ ವೃಕ್ಷ 2
6 ಮನದ ದನಕ್ಕೆ ಮೋಹವನ್ನು ತಂದ ಮನ್ಮಥ 3
7 ಭೂಮಿ ರಕ್ಷಿಸಲು ವಿಷ್ಣು ಎತ್ತಿದ ಹಂದಿಯ ಅವತಾರ 3
8 ಹಯ ಶಕ್ತಿಗೆ ದೊರೆತ ಗೆಲವು 2
10 ಹಗರಣದಲ್ಲಿ ಗಳಿಸಿದ ದುಡ್ಡು 2
11 ಮಣಿಮಾಲೆಯನ್ನು ಧರಿಸಿದ ಹೆಣ್ಣು 3
12 ಹಗಲು ಹರಣಗೊಂಡಾಗ ನಡೆದ ಪ್ರಕರಣ 4
14 ಕಿರುಗಂಟೆ ಆರಾಧಿಸುತ್ತ ಬಂದ ಪುಟ್ಟಣ್ಣ ಕಣಗಾಲರ ಸಿನಿಮಾ 4
16 ಗಮಗಮಿಸುತ್ತಾ ಬಂದದ್ದು ಹೀಗೆ 4
18 ಸುಖದಿಂದಿರುವ ಈ ಮಗ ರಾಜಪುತ್ರನಂತಿದ್ದಾನೆ 4
20 ಕುತಕುತನೆ ಕುದ್ದ ರಕ್ತ 3
22 ಈ ತನಕ ಕಂಡ ಸ್ವಪ್ನ 3
23 ಮರುಗಳಿಗೆ ಉಂಟಾದ ಕನಿಕರ 3

ಮೇಲಿನಿಂದ ಕೆಳಕ್ಕೆ

1 ಗಂಡ ಹೆಂಡರ ನಡುವೆ ನಡೆಯಬಹುದಾದ ಪ್ರೀತಿಯ ಜಗಳ 5
2 ಸಾವಿನ ಬಳಿ ಸುಳಿದ ಮೃದುತನ 3
4 ವರುಣನಿಂದ ದೊರೆತ ಕ್ಷಾರ 3
5 ಮನೋಹರ ಸೆಳೆತದ ಸೂರ್ಯ ಮುಳುಗುವ ಸಮಯ 5
9 ಶರ ಹಿಡಿದು ಬಂದ ಶಿವ ಭಕ್ತ 3
10 ಹಣಾಹಣಿ ಜಗಳದ ನಂತರ ಸಿಕ್ಕ ಬಾಚಣಿಗೆ 3
13 ತಿರುಗಿಸಿ ಓದಿದರೂ ಅರ್ಥ ಕಳೆದುಕೊಳ್ಳದ ಜಿಲ್ಲಾ ಕೇಂದ್ರ 3
15 ಹುಣ್ಣಿಮೆ ಚಂದ್ರನ ಹೆಸರಿನಾಕೆ 3
16 ಮಾರುಕಟ್ಟೆಗೆ ಮಾರಾಟಕ್ಕಾಗಿ ಬಂದ ವಸ್ತು 3
17 ನಗರದ ಜನರಲ್ಲಿ ಹರಿದ ತಂತು 2
18 ನಸುನಗೆ ತರಿಸುತ್ತಾ ಬಂದ ಮಗ 2
19 ಅರಸಿಗೆ ಕತೆ ಕೇಳಿಸುವಂತಹ ವಿಲಾಸಪ್ರಿಯ 3
21 ವಂಶವನ್ನು ಬೆಳಗುವಂತಹ ಚಿಗುರು 2

ವಿಜಯಬಂಧ | 7975

ಎಡದಿಂದ ಬಲಕ್ಕೆ: 1.ಗೀಜಗ 3.ವಿಸ್ತಾರ 5.ಕಾಳು 6.ವಿಷ 8.ಗೆರಸಿ 10.ಗದ್ದಲ 12.ಸುಮುಖ 13.ಗತ್ತು 14.ಧಾಮ 15.ಅಂಗಡಿ 17.ನಖರ 19.ಮೂಷಿಕ 21.ನೆಪ 23.ಕಾಲ 24.ಶುಭಾಂಗಿ 25.ಕಳವು.
ಮೇಲಿನಿಂದ ಕೆಳಕ್ಕೆ: 1.ಗೀಳು 2.ಗದ್ದುಗೆ 3.ವಿಲಾಸಿ 4.ರವಿ 5.ಕಾಳಗ 7.ಷಣ್ಮುಖ 9.ರಮ್ಯ 11.ಲಗಡಿ 12.ಸುಮನ 15.ಅಂಗನೆ 18.ರಸಾಲ 19.ಮೂಲಂಗಿ 20.ಕಟಕ 22.ಪಶು 23.ಕಾವು.

ಅ.ನಾ. ಪ್ರಹ್ಲಾದರಾವ್

ದಿನ ಭವಿಷ್ಯ

ಶ್ರೀಪತಿ ಭಟ್ ಆಚಾರ್ಯ, ಬೆಂಗಳೂರು

ನಿಮ್ಮ ರಾಶಿಚಕ್ರಕ್ಕೆ ಅನುಗುಣವಾಗಿ ಸೂಕ್ತವಾದ ರತ್ನಗಳು, ಶಿಕ್ಷಣ, ವೃತ್ತಿಜೀವನ, ವಿವಾಹ, ಸಂತಾನ, ಆರೋಗ್ಯ, ಆರ್ಥಿಕ ಸ್ಥಿತಿ ಮತ್ತು ಇನ್ನಿತರ ವಿಷಯಗಳ ಬಗ್ಗೆ ವಿವರಗಳಿಗಾಗಿ ಹಾಗೆಯೇ ಸಮಸ್ಯೆಗಳಿಗೆ ಪರಿಹಾರ ರೂಪದ ಪೂಜೆಗಳು, ವಿವಾಹ ಹೊಂದಾಣಿಕೆ, ಮಕ್ಕಳ ಜಾತಕ ಮತ್ತು ಶೈಕ್ಷಣಿಕ ಪ್ರಗತಿಯ ಬಗ್ಗೆ ಮಾಹಿತಿಗಾಗಿ ದಯವಿಟ್ಟು ಖುದ್ದಾಗಿ ಭೇಟಿ ನೀಡಿ. ದೂ: 9513747474

ಕಟಕ, ಮಕರ ಈ ರಾಶಿಯವರಿಗೆ ಅದೃಷ್ಟ ಮಹಾಯೋಗ

ಮೇಷ: ಮನೆಯನ್ನು ನವೀಕರಣಗೊಳಿಸಲು ಮುಂದಾದ ವ್ಯಕ್ತಿಗಳು ವಾಸ್ತುಶಾಸ್ತ್ರದ ಬಗ್ಗೆ ಗಮನಹರಿಸಿ. ನಂಬಿಕೆಗಳನ್ನು ಪ್ರತಿಪಾದಿಸಲು ಅಂಜಿಕೆ ಬೇಡ. ಆಧ್ಯಾತ್ಮಿಕ ಚಿಂತನೆಗಳಿಂದ ಮಾನಸಿಕ ನೆಮ್ಮದಿ ಪ್ರಾಪ್ತಿ. ಅದೃಷ್ಟ ಸಂಖ್ಯೆ 2, ಅದೃಷ್ಟ ಬಣ್ಣ ಸಿಂಧೂರ ಕೆಂಪು
(ನಾಮಾಕ್ಷರ: ಚು, ಚೆ, ಚೊ, ಲ, ಲಿ, ಲು, ಲೆ, ಲೊ, ಅ) ಅಶ್ವಿನಿ, ಭರಣಿ, ಕೃತ್ತಿಕಾ 1ನೇ ಪಾದ

ವೃಷಭ: ಕೆಲಸಗಳಲ್ಲಿ ನಿಯಮ ಉಲ್ಲಂಘಿಸುವ ಅನಿವಾರ್ಯ ಪರಿಸ್ಥಿತಿ ಎದುರಾಗಬಹುದು. ಅನ್ಯರಿಂದ ಒತ್ತಡ ಹೆಚ್ಚಲಿದೆ. ವ್ಯವಹಾರದಲ್ಲಿ ಪಾಲುದಾರರನ್ನಾಗಿ ಸೇರಿಸಿಕೊಳ್ಳಲು ಸೂಕ್ತ ವ್ಯಕ್ತಿಯ ಹುಡುಕಾಟ ನಡೆಸುವಿರಿ. ಅದೃಷ್ಟ ಸಂಖ್ಯೆ 9, ಅದೃಷ್ಟ ಬಣ್ಣ ಆಕಾಶ ನೀಲಿ
(ಇ, ಉ, ಎ, ಒ, ವ, ವಿ, ವು, ವೆ, ವೊ) ಕೃತ್ತಿಕಾ 2, 3, 4ನೇ ಪಾದ, ರೋಹಿಣಿ, ಮೃಗಶಿರ 1, 2ನೇ ಪಾದ

ಮಿಥುನ: ಉಳಿತಾಯ ಹಣದ ಹೊಂದಾಣಿಕೆಯಿಂದ ಸಾಲ ಮಾಡುವ ಪರಿಸ್ಥಿತಿ ದೂರಾಗುವುದು. ಗುತ್ತಿಗೆ ಆಧರಿತ ಉದ್ಯೋಗ ನಡೆಸುವವರಿಗೆ ಜನ ಬಲದ ಸಮಸ್ಯೆ ಎದುರಾಗಬಹುದು. ಅದೃಷ್ಟ ಸಂಖ್ಯೆ 1, ಅದೃಷ್ಟ ಬಣ್ಣ ಕಪ್ಪು
(ಕ, ಕಿ, ಕು, ಘ, ಙ, ಛ, ಕೆ, ಕೊ, ಹ) ಮೃಗಶಿರ 3, 4, ಆರ್ದ್ರೆ, ಪುನರ್ವಸು 1, 2, 3

ಕಟಕ: ಕಾರ್ಯವನ್ನು ಜಯಿಸುವ ಹಂಬಲದಲ್ಲಿ ಆರೋಗ್ಯವನ್ನು ಕಳೆದುಕೊಳ್ಳಬೇಡಿ. ಚಿಂತೆ ಮತ್ತು ಭಯ ಇವೆರಡೂ ದೂರಾಗಲಿವೆ. ಧಾರ್ಮಿಕ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ಅವಕಾಶ ಸಿಗಲಿದೆ. ಅದೃಷ್ಟ ಸಂಖ್ಯೆ 8, ಅದೃಷ್ಟ ಬಣ್ಣ ಬಿಳಿ
(ಹಿ, ಹು, ಹೆ, ಹೊ, ಡ, ಡಿ, ಡು, ಡೆ, ಡೊ) ಪುನರ್ವಸು 4ನೇ ಪಾದ, ಪುಷ್ಯ, ಆಶ್ಲೇಷ

ಸಿಂಹ: ಕೇವಲ ವೃತ್ತಿಯಲ್ಲ, ಪ್ರವೃತ್ತಿಯಿಂದಲೂ ಹೆಸರನ್ನು ಸಂಪಾದನೆ ಮಾಡುವಂತಾಗಲಿದೆ. ಜಟಿಲ ಸಮಸ್ಯೆಗಳನ್ನು ಸುಲಭವಾಗಿ ಬಗೆಹರಿಸಿಕೊಳ್ಳುವಲ್ಲಿ ಯಶಸ್ವಿಯಾಗುವಿರಿ. ಖಾದಿ ಉದ್ಯಮದವರಿಗೆ ಸೌಲಭ್ಯ ದೊರೆಯಲಿದೆ. ಅದೃಷ್ಟ ಸಂಖ್ಯೆ 1, ಅದೃಷ್ಟ ಬಣ್ಣ ಕಂದು
(ಮ, ಮಿ, ಮು, ಮೊ, ಮೆ, ಟ, ಟಿ, ಟು, ಟೆ) ಮಖೆ, ಪುಬ್ಬೆ, ಉತ್ತರ ಫಲ್ಗುಣಿ 1ನೇ ಪಾದ

ಕನ್ಯಾ: ನೂತನ ಸಂಬಂಧವನ್ನು ಬೆಳೆಸುವ ವಿಚಾರವಾಗಿ ಮನಸ್ಸಿನಲ್ಲಿ ಗೊಂದಲಗಳಿರುವುದಿಲ್ಲ. ವೈಯಕ್ತಿಕ ಜೀವನದ ಸಮಸ್ಯೆ ಬಗೆಹರಿದು ನೆಮ್ಮದಿ ಮೂಡಲಿದೆ. ವೈವಾಹಿಕ ಜೀವನ ಸುಖಮಯವಾಗಿರಲಿದೆ. ಅದೃಷ್ಟ ಸಂಖ್ಯೆ 3, ಅದೃಷ್ಟ ಬಣ್ಣ ಹಳದಿ
(ಟೊ, ಪ, ಪಿ, ಪು, ಷ, ಣ, ಠ, ಪೆ, ಪೊ) ಉತ್ತರ ಫಲ್ಗುಣಿ 2, 3, 4ನೇ ಪಾದ, ಹಸ್ತ, ಚಿತ್ತಾ 1, 2ನೇ ಪಾದ

ತುಲಾ: ವ್ಯವಹರಿಸುವ ರೀತಿಯಲ್ಲಿ ಕಳೆದುಕೊಂಡ ವಿಶ್ವಾಸ ಪುನಃ ಪಡೆದುಕೊಳ್ಳುವ ಅವಕಾಶ ಇರಲಿದೆ. ಸಹೋದರರ ಬಗ್ಗೆ ತಪ್ಪು ಕಲ್ಪನೆಗಳನ್ನು ಹೋಗಲಾಡಿಸಿಕೊಳ್ಳುವ ಪ್ರಯತ್ನ ಮಾಡಿ. ಅದೃಷ್ಟ ಸಂಖ್ಯೆ 5, ಅದೃಷ್ಟ ಬಣ್ಣ ಹಸಿರು
(ರ, ರಿ, ರು, ರೆ, ರೊ, ತ, ತಿ, ತು, ತೆ) ಚಿತ್ತಾ 3, 4ನೇ ಪಾದ, ಸ್ವಾತಿ, ವಿಶಾಖ 1, 2, 3ನೇ ಪಾದ

ವೃಶ್ಚಿಕ: ಸಜ್ಜನರ ಒಡನಾಟದಿಂದ ಯಶೋಭಿವೃದ್ಧಿ ಉಂಟಾಗಲಿದೆ. ಆರಕ್ಷಕ ಅಧಿಕಾರಿಗಳಿಗೆ ಕೆಲಸದ ಒತ್ತಡ ಕಡಿಮೆಯಾಗಲಿದೆ. ಸ್ವ–ಸಾಮರ್ಥ್ಯದಿಂದ ಗುರಿ ಸಾಧಿಸಿದ ನೆಮ್ಮದಿ ಸಿಗಲಿದೆ. ಅದೃಷ್ಟ ಸಂಖ್ಯೆ 6, ಅದೃಷ್ಟ ಬಣ್ಣ ಕೆಂಪು
(ತೊ, ನ, ನಿ, ನು, ನೆ, ನೊ, ಯ, ಯಿ, ಯು) ವಿಶಾಖ 4ನೇ ಪಾದ, ಅನುರಾಧ, ಜ್ಯೇಷ್ಠ

ಧನುಸ್ಸು: ದೂರದ ಸಂಚಾರ ಕಂಡು ಬಂದರೂ ಮುಂದೂಡಿಕೆ ಅನಿವಾರ್ಯ. ವಾಹನ ಚಾಲನೆಯಲ್ಲಿ ಅಥವಾ ವಾಹನ ಪ್ರಯಾಣಿಸುವಾಗ ಜಾಗೃತರಾಗಿರಿ. ವ್ಯಾಪಾರದ ಒಪ್ಪಂದವೊಂದು ಧನಲಾಭ ತರಲಿದೆ. ಅದೃಷ್ಟ ಸಂಖ್ಯೆ 4, ಅದೃಷ್ಟ ಬಣ್ಣ ಕೇಸರಿ
(ಯೆ, ಯೊ, ಬ, ಬಿ, ಬು, ಧ, ಭ, ಫ, ಬೆ) ಮೂಲ, ಪೂರ್ವಾಷಾಢ, ಉತ್ತರಾಷಾಢ 1ನೇ ಪಾದ

ಮಕರ: ತಂತ್ರಜ್ಞಾನಕ್ಕೆ ಸಂಬಂಧಿಸಿದ ಉದ್ಯೋಗದಲ್ಲಿ ಹಿನ್ನಡೆಯ ಅನುಭವ. ವ್ಯವಹಾರಕ್ಕೆ ದೀರ್ಘಕಾಲದಿಂದ ನಿರೀಕ್ಷಿಸುತ್ತಿರುವ ಉತ್ತೇಜನ ದೊರೆಯಲಿದೆ. ಧನಾಗಮನದಲ್ಲಿ ವಿಳಂಬ ತೋರಿಬರಲಿದೆ. ಅದೃಷ್ಟ ಸಂಖ್ಯೆ 9, ಅದೃಷ್ಟ ಬಣ್ಣ ಖಾಕಿ
(ಬೊ, ಜ, ಜಿ, ಶಿ, ಶು, ಶೆ, ಶೊ, ಗ, ಗಿ) ಉತ್ತರಾಷಾಢ 2, 3, 4 ನೇ ಪಾದ, ಶ್ರವಣ, ಧನಿಷ್ಠ 1, 2ನೇ ಪಾದ

ಕುಂಭ: ರಾಜಕೀಯದಲ್ಲಿ ತಮ್ಮವರಿಂದಲೇ ಕಂಡು ಬರುವ ವಿರೋಧಗಳನ್ನು ಜಾಣ್ಮೆಯಿಂದ ನಿವಾರಿಸಿಕೊಳ್ಳುವ ತಂತ್ರಗಾರಿಕೆ ಅಳವಡಿಸಿಕೊಳ್ಳಿ. ರಫ್ತು ವ್ಯವಹಾರ ಮಾಡುವವರಿಗೆ ತಾಪತ್ರಯಗಳು ಕಾಣಿಸಿಕೊಳ್ಳಲಿವೆ. ಅದೃಷ್ಟ ಸಂಖ್ಯೆ 2, ಅದೃಷ್ಟ ಬಣ್ಣ ಬೂದು
(ಗು, ಗೆ, ಗೊ, ಸ, ಸಿ, ಸು, ಸೆ, ಸೊ, ದ) ಧನಿಷ್ಠ 3, 4ನೇ ಪಾದ, ಶತಭಿಷ, ಪೂರ್ವಾಭಾದ್ರ 1, 2, 3ನೇ ಪಾದ

ಮೀನ: ಹತ್ತಿ ಬೆಳೆಗಾರರಿಗೆ ಉತ್ತಮ ಲಾಭ. ಆರೋಗ್ಯದ ವಿಷಯದಲ್ಲಿ ಸ್ವಂತ ನಿರ್ಧಾರದ ಔಷಧ ಬೇಡ. ನಾಯಕತ್ವ ಹೊಂದಿರುವ ನಿಮಗೆ ಜನಬಲ ಕಡಿಮೆಯಾಗಬಹುದು. ಅದೃಷ್ಟ ಸಂಖ್ಯೆ 8, ಅದೃಷ್ಟ ಬಣ್ಣ ನೀಲಿ
(ದಿ, ದು, ಖ, ಝ, ಥ, ದೆ, ದೊ, ಚ, ಚಿ) ಪೂರ್ವಾಭಾದ್ರ 4ನೇ ಪಾದ, ಉತ್ತರಾಭಾದ್ರ, ರೇವತಿ

ಮಹಿಳಾ ಟಿ20 ವಿಶ್ವಕಪ್: ಭಾರತೀಯ ಆರಂಭಿಕ ಬ್ಯಾಟರ್‌ಗಳ ಮೇಲೆ ಹೆಚ್ಚಿನ ಹೊಣೆ

ಭಾರತ ವನಿತೆಯರಿಗೆ ಪಾಕ್ ಸವಾಲು

ಬರ್ಮಿಂಗ್‌ಹ್ಯಾಮ್ (ಇಂಗ್ಲೆಂಡ್): ಐಸಿಸಿ ಮಹಿಳಾ ಟಿ20 ವಿಶ್ವಕಪ್‌ನಲ್ಲಿ ಭಾನುವಾರ ನಡೆಯಲಿರುವ ಪಂದ್ಯದಲ್ಲಿ ಭಾರತ ತಂಡ ಪ್ರಬಲ ಪಾಕಿಸ್ತಾನ ತಂಡದ ವಿರುದ್ಧ ಗೆದ್ದು ಶುಭಾರಂಭ ಮಾಡಲು ಸಜ್ಜಾಗಿದೆ. ಸಮತೋಲನದಿಂದ ಕೂಡಿರುವ ಭಾರತ ತಂಡಕ್ಕೆ ಆರಂಭಿಕ ಆಟಗಾರ್ತಿಯರಾದ ಸ್ಮೃತಿ ಮಂಧಾನ ಮತ್ತು ಶಫಾಲಿ ವರ್ಮಾ ಅವರ ಸ್ಫೋಟಕ ಬ್ಯಾಟಿಂಗ್ ನೆರವು ಅತ್ಯಗತ್ಯವಾಗಿದೆ.

ಹರ್ಮನ್‌ಪ್ರೀತ್ ಕೌರ್ ನೇತೃತ್ವದ ಭಾರತ ತಂಡವು, ಕಳೆದ ವರ್ಷ ಏಕದಿನ ವಿಶ್ವಕಪ್ ಗೆದ್ದ ನಂತರ ಈಗ ತನ್ನ ಖಾತೆಗೆ ಎರಡನೇ ಜಾಗತಿಕ ಪ್ರಶಸ್ತಿಯನ್ನು ಸೇರ್ಪಡೆಗೊಳಿಸಲು ಎದುರು ನೋಡುತ್ತಿದೆ. ಎರಡೂ ತಂಡಗಳು ಕೊನೆಯದಾಗಿ 2024ರ ದುಬೈ ಟಿ20 ವಿಶ್ವಕಪ್‌ನಲ್ಲಿಮುಖಾಮುಖಿಯಾಗಿದ್ದವು. ಆ ಪಂದ್ಯದಲ್ಲಿ ಭಾರತ 6 ವಿಕೆಟ್‌ಗಳ ಜಯ ಸಾಧಿಸಿತ್ತು. ಅಂದಿನಿಂದ ಭಾರತವು ಸೀಮಿತ ಓವರ್‌ಗಳ ಕ್ರಿಕೆಟ್‌ನಲ್ಲಿ ಸ್ಥಿರ ಹಾಗೂ ಬಲಿಷ್ಠ ತಂಡವಾಗಿ ಬೆಳೆದಿದೆ.

ಆರಂಭಿಕರಿಂದ ರನ್ ಗಳಿಕೆ ಕಡ್ಡಾಯ: ಪಾಕಿಸ್ತಾನದ ಉತ್ಸಾಹಿ ನಾಯಕಿ ಫಾತಿಮಾ ಸನಾ ನೇತೃತ್ವದ ಬೌಲಿಂಗ್ ಪಡೆಯನ್ನು ಎದುರಿಸಲು ಭಾರತದ ಓಪನರ್‌ಗಳು ಫಾರ್ಮ್‌ಗೆ ಮರಳುವುದು ಅತ್ಯಗತ್ಯವಾಗಿದೆ. ಉಪನಾಯಕಿ ಮಂಧಾನ ಮತ್ತು ಶಫಾಲಿ ವರ್ಮಾ ಅವರ ನಡುವೆ ಬಲಿಷ್ಠ ಆರಂಭಿಕ ಜೊತೆಯಾಟದ ಅಗತ್ಯವಿರುವುದನ್ನು ಕಳೆದ ಪಂದ್ಯಗಳು ನೆನಪಿಸಿವೆ. ಫೆಬ್ರವರಿಯಲ್ಲಿ ಅಡಿಲೇಡ್‌ನಲ್ಲಿ ಆಸ್ಟ್ರೇಲಿಯಾ ವಿರುದ್ಧ 82 ರನ್ ಗಳಿಸಿದ ನಂತರ, ಮಂಧಾನ ಅವರ ಪ್ರದರ್ಶನ ನಿರಾಶಾದಾಯಕವಾಗಿದೆ. ಶಫಾಲಿ ವರ್ಮಾ ಅವರ ಕಥೆಯೂ ಇದಕ್ಕಿಂತ ಭಿನ್ನವಾಗಿಲ್ಲ. ಇಬ್ಬರೂ ತಮ್ಮ ಫಾರ್ಮ್‌ಗೆ ಮರಳಬೇಕಿದೆ.

ಭಾರತ ನಾಯಕಿ ಹರ್ಮನ್‌ಪ್ರೀತ್ ಕೌರ್ ದಕ್ಷಿಣ ಆಫ್ರಿಕಾ ಮತ್ತು ಇಂಗ್ಲೆಂಡ್ ವಿರುದ್ಧದ ಪಂದ್ಯಗಳಲ್ಲಿ ಅರ್ಧಶತಕ ಗಳಿಸಿ ಫಾರ್ಮ್‌ಗೆ ಮರಳಿರುವುದು ಮಧ್ಯಮ ಕ್ರಮಾಂಕಕ್ಕೆ ದೊಡ್ಡ ಬಲ ತಂದಿದೆ.

ಸನಾ ಸವಾಲು: ಪಾಕ್ ತಂಡದ ನಾಯಕಿ 24 ವರ್ಷದ ಫಾತಿಮಾ ಸನಾ ಉತ್ತಮ ಫಾರ್ಮ್‌ನಲ್ಲಿದ್ದು ಭಾರತಕ್ಕೆ ಸವಾಲಾಗುವ ಸಾಧ್ಯತೆ ಇದೆ. ಇತ್ತೀಚೆಗೆ ಅವರು ಕರಾಚಿಯಲ್ಲಿ ಜಿಂಬಾಬ್ವೆ ವಿರುದ್ಧ ಕೇವಲ 15 ಎಸೆತಗಳಲ್ಲಿ ಮಹಿಳಾ ಟಿ20 ಇತಿಹಾಸದಲ್ಲೇ ಅತ್ಯಂತ ವೇಗದ ಅರ್ಧಶತಕ ಬಾರಿಸಿ ಧೂಳೆಬ್ಬಿಸಿದ್ದರು.

ಪಂದ್ಯ: ಎಡ್ಜ್‌ಬಾಸ್ಟನ್ ಕ್ರೀಡಾಂಗಣ, ಬರ್ಮಿಂಗ್‌ಹ್ಯಾಮ್
ಸಮಯ: ರಾತ್ರಿ 7 ಗಂಟೆ
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್



16	13	03
ಟಿ20 ಮುಖಾಮುಖಿ	ಭಾರತ ಗೆಲುವು	ಪಾಕ್ ಜಯ

ಆಸ್ಟ್ರೇಲಿಯಾಗೆ 65 ರನ್ ಗೆಲುವು

ದಿನದ ಎರಡನೇ ಪಂದ್ಯದಲ್ಲಿ ಆಸ್ಟ್ರೇಲಿಯಾ ಮಹಿಳಾ ತಂಡ ದಕ್ಷಿಣ ಆಫ್ರಿಕಾ ವಿರುದ್ಧ 65 ರನ್‌ಗಳ ಭರ್ಜರಿ ಜಯ ಸಾಧಿಸಿದೆ. ಆಸೀಸ್‌ನ 173 ರನ್ ಗುರಿ ಬೆನ್ನಟ್ಟಿದ ಹರಿಣಗಳ ತಂಡ 16.4 ಓವರ್‌ಗಳಲ್ಲಿ 107 ರನ್‌ಗಳಿಗೆ ಸರ್ವಪತನ ಕಂಡಿತು.

ತಂಡಗಳು

ಭಾರತ: ಹರ್ಮನ್‌ಪ್ರೀತ್ ಕೌರ್ (ನಾಯಕಿ), ಸ್ಮೃತಿ ಮಂಧಾನ, ಶಫಾಲಿ ವರ್ಮಾ, ಜೆಮಿಮಾ ರೋಡ್ರಿಗಸ್, ಭಾರತಿ ಫುಲ್ಮಾಲಿ, ದೀಪ್ತಿ ಶರ್ಮಾ, ರಿಚಾ ಘೋಷ್, ಶ್ರೀಚರಣಿ, ಯಾಸ್ತಿಕಾ ಭಾಟಿಯಾ, ನಂದಿನಿ ಶರ್ಮಾ, ಅರುಂಧತಿ ರೆಡ್ಡಿ, ರೇಣುಕಾ ಸಿಂಗ್, ಕ್ರಾಂತಿ ಗೌಡ್, ಶ್ರೇಯಾಂಕಾ ಪಾಟೀಲ್, ರಾಧಾ ಯಾದವ್.

ಪಾಕಿಸ್ತಾನ: ಫಾತಿಮಾ ಸನಾ (ನಾಯಕಿ), ಗುಲ್ ಫೆರೋಜಾ, ಆಯೆಷಾ ಜಾಫರ್, ಇರಾಮ್ ಜಾವೇದ್, ಐಮನ್ ಫಾತಿಮಾ, ಅಲಿಯಾ ರಿಯಾಜ್, ನಟಾಲಿಯಾ ಪರ್ವೈಜ್, ಸಾಯಿರಾ ಜಬೀನ್, ಮುನೀಬಾ ಅಲಿ, ತೂಬಾ ಹಸನ್, ರಾಮೀನ್ ಶಾಮಿಮ್, ಸಾದಿಯಾ ಇಕ್ಬಾಲ್, ನಶ್ರಾ ಸಂಧು, ಡಯಾನಾ ಬೇಗ್, ತಸ್ಮಿಯಾ ರುಬಾಬ್.

ಸ್ಕಾಟ್ಲೆಂಡ್‌ಗೆ ಚೊಚ್ಚಲ ಜಯ

ಮ್ಯಾಂಚೆಸ್ಟರ್: ಸ್ಕಾಟ್ಲೆಂಡ್ ಮಹಿಳಾ ತಂಡವು ಶನಿವಾರ, ಐರ್ಲೆಂಡ್ ವಿರುದ್ಧ 40 ರನ್‌ಗಳ ಭರ್ಜರಿ ಜಯ ಸಾಧಿಸುವ ಮೂಲಕ ವಿಶ್ವಕಪ್‌ನಲ್ಲಿ ತನ್ನ ಚೊಚ್ಚಲ ಗೆಲುವು ದಾಖಲಿಸಿದೆ. ಮೊದಲು ಬ್ಯಾಟಿಂಗ್ ಮಾಡಿದ ಸ್ಕಾಟ್ಲೆಂಡ್ ಪರ ಕ್ಯಾಥರಿನ್ ಮತ್ತು ಸಾರಾ ಸಹೋದರಿಯರು 106 ರನ್‌ಗಳ ಅತ್ಯುತ್ತಮ ಜೊತೆಯಾಟವಾಡಿ ತಂಡಕ್ಕೆ ಆಸರೆಯಾದರು. 162 ರನ್ ಗುರಿ ಬೆನ್ನಟ್ಟಿದ ಐರ್ಲೆಂಡ್ ತಂಡವು ಸ್ಕಾಟ್ಲೆಂಡ್‌ನ ಬೌಲಿಂಗ್ ದಾಳಿಗೆ ಸಿಲುಕಿ 121 ರನ್‌ಗಳಿಗೆ ಆಲೌಟಾಗಿ ಶರಣಾಯಿತು.

ಸೆಮೀಸ್‌ನಲ್ಲಿ ಸೋತು ನಿರ್ಗಮಿಸಿದ ಸಿಂಧೂ

ಆಸ್ಟ್ರೇಲಿಯನ್ ಓಪನ್ ಬ್ಯಾಡ್ಮಿಂಟನ್

ಸಿಡ್ನಿ: ಆಸ್ಟ್ರೇಲಿಯನ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಮಹಿಳಾ ಸಿಂಗಲ್ಸ್ ಸೆಮಿಫೈನಲ್‌ನಲ್ಲಿ ಭಾರತದ ತಾರೆ ಪಿ.ವಿ. ಸಿಂಧೂ ಸೋಲನುಭವಿಸಿದ್ದಾರೆ. ಶನಿವಾರ ನಡೆದ ರೋಚಕ ಪಂದ್ಯದಲ್ಲಿ ಜಪಾನ್‌ನ ಅಗ್ರ ಶ್ರೇಯಾಂಕಿತ ಆಟಗಾರ್ತಿ ಅಕಾನೆ ಯಮಗುಚಿ ವಿರುದ್ಧ ಸಿಂಧೂ 20–22, 12–21 ನೇರ ಗೇಮ್‌ಗಳಿಂದ ಪರಾಭವಗೊಂಡರು. ಮೊದಲ ಗೇಮ್‌ನಲ್ಲಿ ತೀವ್ರ ಹೋರಾಟ ನಡೆಸಿ ಸೋತ ಸಿಂಧೂ, ಎರಡನೇ ಗೇಮ್‌ನಲ್ಲಿ ಸಂಪೂರ್ಣ ಪ್ರಾಬಲ್ಯ ಸಾಧಿಸಿದ ಯಮಗುಚಿಯೆದುರು ಶರಣಾದರು. ಸಿಂಧೂ ಅವರ ನಿರ್ಗಮನದೊಂದಿಗೆ ಟೂರ್ನಿಯಲ್ಲಿ ಭಾರತದ ಸವಾಲು ಕೊನೆಗೊಂಡಿದೆ. ಸಿಂಧೂ ವಿರುದ್ಧದ ಕಳೆದ ಆರು ಪಂದ್ಯಗಳಲ್ಲಿ ಯಮಗುಚಿಗೆ ಇದು ಐದನೇ ಗೆಲುವಾಗಿದೆ. 2024 ರ ಸೈಯದ್ ಮೋದಿ ಇಂಟರ್‌ನ್ಯಾಷನಲ್ ಪ್ರಶಸ್ತಿ ಗೆದ್ದ ನಂತರ ಸಿಂಧೂ ಯಾವುದೇ ಬಿಡಬ್ಲ್ಯುಎಫ್ ಪ್ರಶಸ್ತಿ ಗೆದ್ದಿಲ್ಲ. ಈ ಋತುವಿನಲ್ಲಿ ಸಿಂಧೂ ಎರಡು ಬಾರಿ ಸೆಮಿಫೈನಲ್ ಪ್ರವೇಶಿಸಿದ್ದಾರೆ.

ಐಪಿಎಲ್ ಪಂದ್ಯಗಳ ಹೆಚ್ಚಳಕ್ಕೆ ಚಿಂತನೆ

ವಿದೇಶಿ ಆಟಗಾರರ ಅಲಭ್ಯತೆಗೆ ಮೂಗು ತೂರಿಸುವುದಿಲ್ಲ: ಬಿಸಿಸಿಐ

ಹೊಸದಿಲ್ಲಿ: ಐಪಿಎಲ್‌ನಲ್ಲಿ ವಿದೇಶಿ ಆಟಗಾರರ ಲಭ್ಯತೆಯ ವಿಷಯದಲ್ಲಿ ಫ್ರಾಂಚೈಸಿಗಳು ಮತ್ತು ಆಟಗಾರರ ನಡುವೆ ಮಧ್ಯಸ್ಥಿಕೆ ವಹಿಸಲು ಬಿಸಿಸಿಐ ನಿರಾಕರಿಸಿದೆ. ಹರಾಜಿನಲ್ಲಿ ಮಾರಾಟವಾದ ನಂತರ ಕೊನೆ ಕ್ಷಣದಲ್ಲಿ ಹಿಂದೆ ಸರಿಯುವ ಆಟಗಾರರಿಗೆ ಈಗಾಗಲೇ ಎರಡು ವರ್ಷಗಳ ನಿಷೇಧ ಹೇರಲಾಗಿದ್ದು, ಇದು ಬಲವಾದ ಕ್ರಮವಾಗಿದೆ ಎಂದು ಮಂಡಳಿ ಭಾವಿಸಿದೆ. ಆಟಗಾರರ ನಿರ್ವಹಣೆ ಫ್ರಾಂಚೈಸಿಗಳಿಗೆ ಸೇರಿದ್ದು ಎಂದು ಬಿಸಿಸಿಐ ತಿಳಿಸಿದೆ.

ಇತ್ತೀಚೆಗೆ ಕೊನೆಗೊಂಡ ಐಪಿಎಲ್ ಆವೃತ್ತಿಯಲ್ಲಿ ಜೋಶ್ ಹೇಜಲ್‌ವುಡ್, ಪ್ಯಾಟ್ ಕಮಿನ್ಸ್ ಮತ್ತು ಮಿಚೆಲ್ ಸ್ಟಾರ್ಕ್ ಗಾಯದ ಕಾರಣ ಮೊದಲಾರ್ಧದಲ್ಲಿ ಲಭ್ಯವಿರಲಿಲ್ಲ. ಸ್ಯಾಮ್ ಕರ್ರನ್ ಗಾಯದ ಕಾರಣ ಐಪಿಎಲ್‌ನಿಂದ ಹೊರಗುಳಿದು, ಸ್ವದೇಶದಲ್ಲಿ ಟಿ20 ಆಡಿದ್ದಕ್ಕೆ ರಾಜಸ್ಥಾನ ರಾಯಲ್ಸ್ ತಂಡದ ಕೋಚ್ ಕುಮಾರ್‌ಸಂಗಕ್ಕಾರ ಅಸಮಾಧಾನ ವ್ಯಕ್ತಪಡಿಸಿದ್ದರು. ಮತ್ತೊಂದೆಡೆ, 2028ರಿಂದ ಪಂದ್ಯಗಳ ಸಂಖ್ಯೆಯನ್ನು 74ರಿಂದ 94ಕ್ಕೆ ಹೆಚ್ಚಿಸಲು ಯೋಜಿಸಲಾಗುತ್ತಿದ್ದು, ಜೊತೆಗೆ ಮಾರ್ಚ್ ಮೊದಲ ವಾರದಿಂದ ಮೇ ಮಧ್ಯದವರೆಗೆ ಐಪಿಎಲ್ ನಡೆಸುವ ಬಗ್ಗೆ ಚಿಂತನೆ ನಡೆಯುತ್ತಿದೆ ಎಂದು ಬಿಸಿಸಿಐ ಮೂಲಗಳಿಂದ ತಿಳಿದುಬಂದಿದೆ.

ಬೆಂಗಳೂರಿನಲ್ಲಿ ಮುಂದಿನ ಐಪಿಎಲ್ ಉದ್ಘಾಟನೆ ಪಂದ್ಯ

ಕೆಎಸ್‌ಸಿಎ ಅಧ್ಯಕ್ಷ ವೆಂಕಟೇಶ್ ಪ್ರಸಾದ್ ವಿಶ್ವಾಸ

■ **ವಿಕ ಸುದ್ದಿಲೋಕ** ಬೆಳಗಾವಿ

''ಹಿಂದಿನ ಆಡಳಿತಾವಧಿಯಲ್ಲಿ ನಡೆದ ಕೆಲ ಅಹಿತಕರ ಘಟನೆಗಳಿಂದ ರಾಜ್ಯದ ಕೈತಪ್ಪಿಹೋಗಿದ್ದ ಅಂತಾರಾಷ್ಟ್ರೀಯ ಕ್ರಿಕೆಟ್ ಪಂದ್ಯಗಳು ಹಾಗೂ ಐಪಿಎಲ್ ಉದ್ಘಾಟನಾ ಪಂದ್ಯಗಳನ್ನು ಕರ್ನಾಟಕಕ್ಕೆ ಮರಳಿ ತರಲು ಬಿಸಿಸಿಐ ಜತೆ ಈಗಾಗಲೇ ಮಾತುಕತೆ ನಡೆಸಲಾಗಿದೆ. ಪೂರ್ಣ ಸಹಕಾರದ ಭರವಸೆ ಸಿಕ್ಕಿದ್ದು, ಮುಂದಿನ ದಿನಗಳಲ್ಲಿ ರಾಜ್ಯದಲ್ಲಿ ಅಂತಾರಾಷ್ಟ್ರೀಯ ಕ್ರಿಕೆಟ್ ಪಂದ್ಯಗಳು ಹೆಚ್ಚಿನ ಪ್ರಮಾಣದಲ್ಲಿ ನಡೆಯಲಿವೆ,'' ಎಂದು ಕರ್ನಾಟಕ ಕ್ರಿಕೆಟ್ ಅಸೋಸಿಯೇಷನ್ (ಕೆಎಸ್‌ಸಿಎ) ಅಧ್ಯಕ್ಷ ವೆಂಕಟೇಶ ಪ್ರಸಾದ್ ಹೇಳಿದ್ದಾರೆ.

ನಗರದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ''ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣ 360 ಡಿಗ್ರಿ ಸ್ಟ್ಯಾಂಡ್ ಹೊಂದಿದೆ. ಯಾವುದೇ ಮೂಲೆಯಲ್ಲಿ ಕುಳಿತು ವೀಕ್ಷಣೆ ಮಾಡಿದರೂ ಮೈದಾನ ಪೂರ್ಣ ಪ್ರಮಾಣದಲ್ಲಿ ಕಾಣಿಸಲಿದೆ. ಬೆಂಗಳೂರಿನ ಮೈದಾನದಲ್ಲಿ ಆಸನಗಳ ಸಂಖ್ಯೆ ಹೆಚ್ಚಿಸುವ ಚಿಂತನೆ ಇದೆ,'' ಎಂದು ಅವರು ತಿಳಿಸಿದರು. ''ರಾಜ್ಯದಲ್ಲಿ ಕ್ರಿಕೆಟ್ ಮೂಲಸೌಕರ್ಯ ವೃದ್ಧಿಸಲು ಆದ್ಯತೆ ನೀಡಲಾಗುತ್ತಿದೆ. ಈ ನಿಟ್ಟಿನಲ್ಲಿ ಬೆಳಗಾವಿ, ಶಿವಮೊಗ್ಗ ಹಾಗೂ ತುಮಕೂರು ಸೇರಿದಂತೆ ಪ್ರಮುಖ ಪ್ರಾದೇಶಿಕ ಕ್ರೀಡಾಂಗಣಗಳನ್ನು ಹಂತಹಂತವಾಗಿ ಮೇಲ್ದರ್ಜೆಗೇರಿಸಲಾಗುವುದು,'' ಎಂದು ವೆಂಕಟೇಶ್ ಪ್ರಸಾದ್ ಮಾಹಿತಿ ನೀಡಿದರು.

ಏಷ್ಯನ್ ಗೇಮ್ಸ್‌ಗೆ ಬ್ಯಾಡ್ಮಿಂಟನ್ ತಂಡ

ಹೊಸದಿಲ್ಲಿ: ಐಚಿ–ನಗೋಯಾದಲ್ಲಿ ನಡೆಯಲಿರುವ ಏಷ್ಯನ್ ಗೇಮ್ಸ್‌ಗೆ ಭಾರತೀಯ ಬ್ಯಾಡ್ಮಿಂಟನ್ ತಂಡವನ್ನು ಪ್ರಕಟಿಸಲಾಗಿದೆ. ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಪಿ.ವಿ ಸಿಂಧೂ ಮತ್ತು ಸ್ಟಾರ್‌ಡಬಲ್ಸ್ ಜೋಡಿಯಾದ ಸಾತ್ವಿಕ್ ಸಾಯಿರಾಜ್ ರಾಂಕಿರೆಡ್ಡಿ– ಚಿರಾಗ್ ಶೆಟ್ಟಿ ತಂಡದ ಪ್ರಮುಖ ಆಕರ್ಷಣೆಯಾಗಿದ್ದಾರೆ.

ಅಗ್ರ ಶ್ರೇಯಾಂಕದ ಲಕ್ಷ್ಯ ಸೇನ್, ಎಚ್.ಎಸ್. ಪ್ರಣಯ್ ಮತ್ತು ಕಿಡಂಬಿ ಶ್ರೀಕಾಂತ್ ಪುರುಷರ ತಂಡವನ್ನು ಮುನ್ನಡೆಸಲಿದ್ದಾರೆ. ಇತ್ತೀಚಿನ ವಿಶ್ವ ಬ್ಯಾಂಡ್ಮಿಂಟನ್(ಬಿಡಬ್ಲ್ಯುಎಫ್) ಶ್ರೇಯಾಂಕ ಹಾಗೂ ದೇಶಿ– ವಿದೇಶಿ ಟೂರ್ನಿಗಳಲ್ಲಿನ ಆಟಗಾರರ ಪ್ರದರ್ಶನವನ್ನು ಆಧರಿಸಿ ಬಲಿಷ್ಠ ತಂಡವನ್ನು ಆಯ್ಕೆ ಮಾಡಲಾಗಿದೆ. ಯುವ ಪ್ರತಿಭೆಗಳಾದ ಆಯುಷ್ ಶೆಟ್ಟಿ, ತನ್ವಿ ಶರ್ಮಾ ಮತ್ತು ಉನ್ನತಿ ಹೂಡಾ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಡಬಲ್ಸ್‌ನಲ್ಲಿ ಟ್ರೀಸಾ ಜೊಲ್ಲಿ– ಗಾಯತ್ರಿ ಗೋಪಿಚಂದ್ ಸವಾಲು ಮುನ್ನಡೆಸಲಿದ್ದಾರೆ. ಏಷ್ಯನ್ ಗೇಮ್ಸ್ ಕ್ರೀಡಾಕೂಟ ಸೆ.19ರಿಂದ ಅ.4ರವರೆಗೆ ನಡೆಯಲಿದೆ.